
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 17
ಸಂಚಿಕೆ 12
ರೂ. 2.00

ಐಕ್ಯರಂಗ

19 ಮಾರ್ಚ್ 1995



ಜಿಲ್ಲಾ ಪಂಚಾಯತ್ -ತಾಲೂಕು ಪಂಚಾಯತ್ ಚುನಾವಣೆಗಳ ಮಹತ್ವ

ಜನ-ಪರರು, ಹೋರಾಟಶೀಲರು ಗೆದ್ದು ಬರಬೇಕು

- ಎನ್.ಕೆ. ಉಪಾಧ್ಯಾಯ

ನಮ್ಮರಾಜ್ಯದಲ್ಲಿ 1995 ಮಾರ್ಚ್ 13, 15, 18ರಂದು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಚುನಾವಣೆ ನಡೆಯುತ್ತದೆ. ಹೋದ ವರ್ಷ ನಡೆದ ಪಂಚಾಯತಿ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳಿಗೆ ಸ್ಪರ್ಧಿಸುವ ಅವಕಾಶವಿರಲಿಲ್ಲ, ಎಲ್ಲರೂ ಸ್ವತಂತ್ರ ಅಭ್ಯರ್ಥಿಗಳಾಗಿಯೇ ಸ್ಪರ್ಧಿಸಿದ್ದರು. ಆದರೆ ಈಗ ನಡೆಯುವ ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳ ವತಿಯಿಂದ ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ.

ಜನರು ಹೆಚ್ಚು ಹೆಚ್ಚಾಗಿ ಆಡಳಿತೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವ ಮತ್ತು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಸಲುವಾಗಿ ಈ ಚುನಾವಣೆಗಳನ್ನು ನಡೆಸಲಾಗುತ್ತಿದೆ. ಆ ಮೂಲಕ ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್‌ಗಳಿಗೆ ಅವುಗಳ ಹದ್ದಿನೊಳಗಿನ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಯ ಜವಾಬ್ದಾರಿಗಳನ್ನು ಅವುಗಳಿಗೆ ಮೀಸಲಿಡಲಾಗಿದೆ. ಅಂದರೆ ಸರಕಾರದ ವಿವಿಧ ಖಾತೆಗಳು ನಿರ್ವಹಿಸುತ್ತಿದ್ದ ಜವಾಬ್ದಾರಿಯನ್ನು ಈಗ ಜಿಲ್ಲಾ ಪಂಚಾಯತಿ ತಾಲೂಕು ಪಂಚಾಯತಿ, ಗ್ರಾಮ ಪಂಚಾಯತಿಗಳಿಗೆ ವಹಿಸಿ ಕೊಡಲಾಗಿದೆ. ರಾಜಕೀಯ ದೃಷ್ಟಿಯಿಂದಲೂ ನೇರವಾಗಿ ಜನ ಸಂಪರ್ಕ ಬೆಳೆಸಿ ಅವರ ಅವಶ್ಯಕತೆಗಳಿಗೆ ಸ್ಪಂಧಿಸುವ ದೃಷ್ಟಿಯಿಂದಲೂ ಸರಕಾರದ ಹಣದ ಅಪವ್ಯಯವನ್ನು ತಡೆದು ಅದು ಆ ಜಿಲ್ಲೆಯ, ತಾಲೂಕಿನ ಮತ್ತು ಗ್ರಾಮದ ಸಾರ್ವಜನಿಕ ಹಿತದ ಸಲುವಾಗಿ ಖರ್ಚಾಗುವಂತೆ ನೋಡುವ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯತ್ ಮತ್ತು ತಾಲೂಕ ಪಂಚಾಯತ್‌ಗಳಿಗೆ ನಿರ್ವಹಿಸಿಕೊಡಲಾಗಿದೆಂಬುದನ್ನು ಗಮನಿಸಬೇಕು.

ರಾಜಕೀಯ ಪಕ್ಷಗಳು ಈ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವುದರಿಂದ ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್‌ಗಳನ್ನು ತಮ್ಮ ರಾಜಕೀಯಕ್ಕಾಗಿ ಬಳಸಿಕೊಳ್ಳುವ ಸಾಧ್ಯತೆಗಳಿವೆ. ಬಂಡವಾಳಶಾಹಿ ಪಕ್ಷಗಳು ಚುನಾವಣೆಗಳ ಮೂಲಕ ಪಡೆಯುವ ಅಧಿಕಾರವನ್ನು ಅದು ಲೋಕಸಭೆಯಾಗಲಿ ವಿಧಾನಸಭೆಯಲ್ಲಾಗಲಿ ನಗರ ಸಭೆಗಳಾಗಲಿ, ಜಿಲ್ಲಾ ಮತ್ತು ತಾಲೂಕು ಪಂಚಾಯತ್‌ಗಳಾಗಲಿ ಅಂಥವುಗಳನ್ನು ಜನಹಿತ ಕಾರ್ಯಗಳಿಗಾಗಿ ಉಪಯೋಗಿಸದೆ ಅದನ್ನು ಭ್ರಷ್ಟಾಚಾರಕ್ಕಾಗಿ ಸ್ವಂತ ಲಾಭಗಳಿಕೆಗಾಗಿ ಅಧಿಕಾರದ ದುರುಪಯೋಗಕ್ಕಾಗಿ ತಮ್ಮ ಸ್ವಂತ ರಾಜಕೀಯಕ್ಕಾಗಿ ಉಪಯೋಗಿಸಿಕೊಳ್ಳುತ್ತಿರುವುದು ಹೊಸತೇನಲ್ಲ, ಆದ್ದರಿಂದ ಇಂಥ ಪರಿಸ್ಥಿತಿಯಲ್ಲಿ ಅಧಿಕಾರ ವಿಕೇಂದ್ರೀಕರಣದ ಮೂಲಕ ಸ್ವಾಯತ್ತ ಅಧಿಕಾರ ಪಡೆದಿರುವ ಜಿಲ್ಲಾ ಮತ್ತು ತಾಲೂಕ ಪಂಚಾಯತ್‌ಗಳಲ್ಲಿ ಚುನಾವಣೆಯ ಮೂಲಕ ಬಹುಮತ ಪಡೆದು ಅಧಿಕಾರ ಗ್ರಹಣದ ಮೂಲಕ ಆಡಳಿತೆಯ

ಪುಟ 4 ನೋಡಿ

"ಮಹಾಚೈತ್ರ": ಧರ್ಮಾಂಧತೆಗೆ ಸಾಹಿತ್ಯ ಕೃತಿಗಳು ಬಲಿಯಾಗಲು ಬಿಡಬಾರದು

ಮಾರ್ಚ್ 9ರಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ.ಪಿ.ರಾಮಚಂದ್ರರಾವ್ ಕೆಳಗಿನ ಪತ್ರಿಕಾ ಹೇಳಿಕೆಯನ್ನು ನೀಡಿದ್ದಾರೆ.

"ಮಹಾಚೈತ್ರ" ಕೃತಿಯ ಬರಹಗಾರರಾದ ಎಚ್.ಎಸ್.ಶಿವಪ್ರಕಾಶ್ ಇವರ ಹೇಳಿಕೆಯನ್ನು ಓದಿದೆ. ಅವರು ಅವರ ಪತ್ರ ಪುಸ್ತಕದ ಕುರಿತು ಮೂಲಭೂತವಾದಿಗಳು ಉದ್ದೇಶಪೂರ್ವಕವಾಗಿ ಮಾಡುತ್ತಿರುವ ಅಪಪ್ರಚಾರಗಳಿಗೆ ವಿನಯಪೂರ್ವಕವಾಗಿ ಅದೇ ಸಮಯದಲ್ಲಿ ಸತ್ವಪೂರ್ಣವಾಗಿ ಉತ್ತರಿಸಿದ್ದಾರೆ. *20 ನೇ* ಶತಮಾನವು ಕೊನೆಗೊಂಡು ಭಾರತವು *21 ನೇ* ಶತಮಾನಕ್ಕೆ ಕಾಲಿರಿಸುವ ಕಾಲಘಟ್ಟದಲ್ಲಿ ಭಾರತದ ಯುವಕರು ಮತ್ತು ಯುವತಿಯರು ತಮ್ಮ ಜೀವನದ ಕ್ಲಿಷ್ಟ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸುವುದಕ್ಕೆ ಬಸವಣ್ಣನವರ ಜೀವನ ಮತ್ತು ಅವರು ತಮ್ಮ ವಚನ ಸಾಹಿತ್ಯದ ಮೂಲಕ ಸಾರಿದ ವಿಚಾರ ಪೂರಿತ ಸತ್ಯಗಳು ಬಹಳಷ್ಟು ಮಾರ್ಗದರ್ಶನ ಮಾಡುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ, ಅಂತಹ ವ್ಯಕ್ತಿಯನ್ನು ಅವರು ಸಾರಿದ ಸತ್ಯಗಳನ್ನು ತಮ್ಮದೇ ಹಾಳತದಲ್ಲಿ "ಮಹಾಚೈತ್ರ" ನಾಟಕ ಕೃತಿಯ ಮೂಲಕ ಪ್ರಕಟಿಸಿ ಎಚ್.ಎಸ್. ಶಿವಪ್ರಕಾಶ್ ನವಜನಾಂಗಕ್ಕೆ ಮಹದುಪಕಾರ ಮಾಡಿದ್ದಾರೆ.

ಇಂತಹ ಕೃತಿಯ ಕುರಿತು ತಮ್ಮ ಮೂಲಭೂತವಾದಿ ಮತೀಯ ಅಭಿಪ್ರಾಯಗಳಿಗೆ ಅದು ಅಕ್ಷರಶಃ ಸರಿಬೀಳುವುದಿಲ್ಲ ಎಂದು ಆ ಕೃತಿಯನ್ನು, ಕೃತಿಯ ಸೃಷ್ಟಿಕರ್ತ ಸಾಹಿತಿಯನ್ನು ತೆಗಳುವುದು ತೀರಾ ವಿಷಾದನೀಯ. ಅದೂ, ಈ ತಮ್ಮ ದುರುದ್ದೇಶಕ್ಕೆ ಜನರ ಅಂಧ ವಿಶ್ವಾಸವನ್ನು ಬಳಸಲು ಕೆಲವರು ಹೊರಟಿದ್ದು, ಅವರಲ್ಲೂ ಕೆಲವು ಸ್ವಾಮಿಗಳು ಮಠಬಿಟ್ಟು ಬೀದಿಗಿಳಿದಿರುವುದೂ ನಿಜಕ್ಕೂ ಸಮಂಜಸವಲ್ಲ.

ಆದಕಾರಣ, ಈ ಹಿಂಸಾತ್ಮಕ ಚಳವಳಿಯನ್ನು ಸಂಬಂಧಪಟ್ಟವರು ಕೈಬಿಟ್ಟು ಕರ್ನಾಟಕ ರಾಜ್ಯದಲ್ಲಿ ಇನ್ನಷ್ಟು ಮಂದಿ ಸಾಹಿತಿಗಳು ಕರ್ನಾಟಕದ ಚರಿತ್ರೆಯಲ್ಲಿ ಮೂಲೆ ಸೇರಿರುವ ಜೀವನೋನ್ಮುಖಿ ಸತ್ಯಗಳನ್ನು ಹೊರಹೊಮ್ಮಿಸಲು ಅನುವುಮಾಡಿಕೊಡಬೇಕೆಂದು ನಾವು ವಿನಂತಿಸುತ್ತೇವೆ.

ಕೊನೆಯದಾಗಿ, ಧರ್ಮಾಂಧತೆಗೆ ಸಾಹಿತ್ಯ ಕೃತಿಗಳನ್ನು ಬಲಿಮಾಡಲು ಬಿಡಬಾರದೆಂದು ನಾಡಿನ ಎಲ್ಲಾ ಜನತೆಗೆ ವಿನಂತಿ ಮಾಡುತ್ತೇವೆ"

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ರಾಜ್ಯ ಸರ್ಕಾರದ ಶಿಫಾರಸಿನ ಮೇರೆಗೆ ರಾಜ್ಯಪಾಲರು ಕಲ್ಬುರ್ಗಿ ಮತ್ತು ಕುವೆಂಪು ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ಪತ್ರ ಬರೆದು 'ಮಹಾಚೈತ್ರ' ನಾಟಕವನ್ನು ತಕ್ಷಣದಿಂದ ಜ್ಯಾರಿಗೆ ಬರುವಂತೆ ಪಠ್ಯಕ್ರಮದಿಂದ ವಾಪಸ್ಸು ಪಡೆಯಲು ಸೂಚಿಸಿದ್ದಾರೆ ಎಂಬ ಸುದ್ದಿ ಬಂದಿದೆ. ಈ ಎರಡೂ ವಿಶ್ವವಿದ್ಯಾಲಯಗಳ ಅಕಾಡೆಮಿಕ್ ಕೌನ್ಸಿಲ್‌ಗಳು ಈಗಾಗಲೇ ಪಠ್ಯಕ್ರಮದಿಂದ ಈ ಕೃತಿಯನ್ನು ತೆಗೆದು ಹಾಕುವುದನ್ನು ವಿರೋಧಿಸಿರುವಾಗ ಕೆಲವು ಕೋಮುವಾದಿಗಳ ಒತ್ತಡಕ್ಕೆ ಮಣಿದಿರುವ ಇಂತಹ ಕ್ರಮ ಖಂಡನೀಯ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರರಾವ್ ಹೇಳಿದ್ದಾರೆ.

ಕಲಾವಿದರರ, ಅಧ್ಯಾಪಕರ, ವಿದ್ಯಾರ್ಥಿಗಳ ಖಂಡನೆ

ಸರಕಾರದ ಈ ಕ್ರಮವನ್ನು ರಂಗ ಕಲಾವಿದರು, ಅಧ್ಯಾಪಕರ, ವಿದ್ಯಾರ್ಥಿಗಳ ಸಂಘಗಳು, ಬಲವಾಗಿ ಖಂಡಿಸಿದ್ದಾರೆ. ಎಸ್.ಎಫ್.ಐ., ಜ್ಞಾನಭಾರತಿ ವಿದ್ಯಾರ್ಥಿ ಸಂಘ, ಅಧ್ಯಾಪಕರ ಒಕ್ಕೂಟ, ಬೆಂಗಳೂರು ವಿ.ವಿ. ಅಧ್ಯಾಪಕರ ಸಂಘ, ಸಮುದಾಯ, ದಲಿತ ಸಂಘರ್ಷ ಸಮಿತಿ ಬಂಡಾಯ ಸಾಹಿತ್ಯ ಸಂಘಟನೆ [illegible] ಬುದ್ಧಿ ಜೀವಿಗಳು ಒಂದು ಜಂಟಿ ಹೇಳಿಕೆ ನೀಡಿ ಕೆಲವು ಕೋಮುವಾದಿ ಮಠಾಧೀಶರಿಗೆ ಮಣಿದು ವಾಪಸ್ಸು ಪಡೆದಿರುವುದರಿಂದ ಸರಕಾರ ಪ್ರಗತಿಪರ ಮೌಲ್ಯಗಳಿಗೆ ತಿಲಾಂಜಲಿಯಿತ್ತಿರುವುದು ಸಾಬೀತಾಗಿದೆ, ಪಠ್ಯ ಪುಸ್ತಕವನ್ನಾಗಿ ಮಾಡಿದ ವಿದ್ವಾಂಸರ ಗೌರವವನ್ನೂ ಕಡೆಗಣಿಸಿದೆ, ವಿಶ್ವವಿದ್ಯಾಲಯದ ಸ್ವಾಯತ್ತತೆಯನ್ನು ಗಾಳಿಗೆ ತೂರಿದೆ ಎನ್ನುತ್ತಾ, "ಇಂತಹ [illegible], ಸೃಜನಶೀಲರ ಕತ್ತು ಹಿಸುಕುವ ಕೆಲಸವನ್ನು ನಾವು ವಿರೋಧಿಸುತ್ತೇವೆ" ಎಂದಿದ್ದಾರೆ.

ಬಿಹಾರ ಚುನಾವಣೆ ಮುಂದೂಡಿಕೆ: ಮತ್ತೊಮ್ಮೆ ಬುಡಮೇಲು ಪ್ರಯತ್ನ

ಪೊಲಿಟ್ ಬ್ಯೂರೋ ಖಂಡನೆ

ಬಿಹಾರ ವಿಧಾನಸಭಾ ಚುನಾವಣೆಗಳನ್ನು ಮುಂದೂಡಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಬಿಹಾರದಲ್ಲಿ ಮುಕ್ತ ಹಾಗೂ ನ್ಯಾಯಪೂರ್ಣ ಚುನಾವಣೆಗಳನ್ನು ನಡೆಸುವ ಬದಲು ಮುಖ್ಯ ಚುನಾವಣಾ ಆಯುಕ್ತರು ಚುನಾವಣೆಗಳನ್ನು ಮುಂದೂಡಿ ಮತ್ತೊಮ್ಮೆ ಬುಡಮೇಲು ಕೃತ್ಯದಲ್ಲಿ ತೊಡಗಿದ್ದಾರೆ ಎಂದು ಅದು ಹೇಳಿದೆ.

ಈ ಮುಂದೂಡಿಕೆ ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಿ ಕೇಂದ್ರದ ಆಳುವ ಪಕ್ಷದ ಅದೃಷ್ಟ ಖುಲಾಯಿಸಲು ನೆರವಾಗುವ ಪಿತೂರಿಯ ಫಲವಾಗಿರುವಂತೆ ಕಾಣುತ್ತದೆ ಎಂದಿರುವ ಪೊಲಿಟ್ ಬ್ಯೂರೋ ಈ ಆದೇಶವನ್ನು ರದ್ದು ಮಾಡಿ ಮೊದಲಿನ ದಿನಾಂಕಗಳಲ್ಲೇ ಚುನಾವಣೆ ನಡೆಸಬೇಕೆಂದು ಮಾರ್ಚ್ ೧ರಂದು ನೀಡಿರುವ ಹೇಳಿಕೆಯಲ್ಲಿ ಒತ್ತಾಯಿಸಿದೆ.

ಬಿಹಾರದಲ್ಲಿ ಸಿಪಿಐ(ಎಂ) ಅಭ್ಯರ್ಥಿಯ ಕೊಲೆ ಪೊಲಿಟ್ ಬ್ಯೂರೋ ಖಂಡನೆ

ಬಿಹಾರದ ಛಾತ್ರಾ ವಿಧಾನಸಭಾ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಕಾಂ. ಸಂತೂದಾಸ್ ರವರನ್ನು ಧೂಮ್ರಿ ಪಹಾಡ್ ಎಂಬಲ್ಲಿಂದ ಮಾವೋಯಿಸ್ಟ್ ಕಮ್ಯುನಿಸ್ಟ್ ಸೆಂಟರ್‌ನ ಗೂಂಡಾಗಳು ಎಳೆದೊಯ್ದು ಗುಂಡಿಕ್ಕಿ ಕೊಂದಿದ್ದಾರೆ. ಅವರ ಜತೆಗಿದ್ದ ಭದ್ರತಾ ಗಾರ್ಡ್ ಕೂಡಾ ಕೊಲ್ಲಲ್ಪಟ್ಟಿದ್ದಾರೆ. ಈ ಧಾಳಿಯಲ್ಲಿ ಸಿಪಿಐ(ಎಂ)ನ ಐದು ಕಾರ್ಯಕರ್ತರಿಗೂ ಗಾಯಗಳಾಗಿವೆ. ಈ ಭೀಕರ ಕೊಲೆಯನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಈ ಹೇಡಿತನದ ಕೃತ್ಯವನ್ನು ಜನತೆ ಸಹಿಸುವುದಿಲ್ಲ ಎಂದು ಈ ಜಘನ್ಯ ಅಪರಾಧ ಎಸಗಿದವರನ್ನು ಪೊಲಿಟ್ ಬ್ಯೂರೋ ಎಚ್ಚರಿಸಿದೆ. ಐಕ್ಯತೆಯಿಂದ ಮುಂದೆ ಬಂದು ಪ್ರಜಾಪ್ರಭುತ್ವವನ್ನು ಹಾಗೂ ಪ್ರಜಾಪ್ರಭುತ್ವ ಹಕ್ಕುಗಳನ್ನು ಎತ್ತಿ ಹಿಡಿಯಿರಿ ಎಂದು ಬಿಹಾರದ ಜನತೆಗೆ ಸಿಪಿಐ(ಎಂ) ಮನವಿ ಮಾಡಿದೆ.

ವಾರದ ವ್ಯಂಗಚಿತ್ರ — ಇಕನಾಮಿಕ್ಸ್ ಟೈಮ್ಸ್ : ಉನ್ನಿ



ವರ್ತಮಾನ ಇತಿಹಾಸ

ಕಾಂಗ್ರೆಸ ತೂತು ದೋಣಿಯನ್ನು ಆರ್.ಎಸ್.ಎಸ್. ದಡ ಸೇರಿಸುತ್ತದೆಯೋ?

ಇತ್ತೀಚೆಗೆ ಅರ್ಜುನ್‌ಸಿಂಗ್‌ರವರು ಪ್ರಧಾನ ಮಂತ್ರಿಗಳೂ ಆಗಿರುವ ಕಾಂಗ್ರೆಸ್ ಅಧ್ಯಕ್ಷರೊಡನೆ ಅವರ ವಿಶ್ವಾಸ ಪಾತ್ರ ಅಧಿಕಾರಿಗಳೊಡನೆ ನಡೆಸಿದ ಪತ್ರವ್ಯವಹಾರವನ್ನು ಓದಿದಾಗ, ಜತೆಗೆ ಫೆಬ್ರುವರಿ 18ರಂದು ಪತ್ರಿಕೆಗಳಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಪ್ರೊ.ರಾಜೇಂದ್ರಸಿಂಗ್‌ರ ಹೇಳಿಕೆ ಓದಿದಾಗ ಇವೆಲ್ಲವುಗಳಲ್ಲಿ ಏನೋ ಕೊಂಡಿಯಿದೆ ಎಂಬ ಸಂಗತಿ ಮೂಡಿ ಬರುತ್ತದೆ. ಇದು ಅಧಿಕಾರಸ್ಥರಿಗೆ ಯಾವುದೇ ರೀತಿಯಲ್ಲಿ ಪಥ್ಯವಾಗದ ಒಂದು ಕೊಂಡಿ.

ಡಿಸೆಂಬರ್ 6, 1992ರ ಕರಾಳ ಭಾನುವಾರದಂದು ತಾರಕಕ್ಕೇರಿದ ಆ ದಿನಗಳಲ್ಲಿ ರಾಯರ ಮೂಕ ಪ್ರತಿಮೆಯ ತರದ ಹಠಮಾರಿ ನಿಷ್ಕ್ರಿಯತೆಯ ಬಗ್ಗೆ ಎಲ್ಲರಿಗೂ ಗೊತ್ತಿದೆ. ಈಗ "ರಜ್ಜುಭಯ್ಯಾ"ರವರ ಹೇಳಿಕೆಯಲ್ಲಿ ಆ ನಿಷ್ಕ್ರಿಯತೆಯಲ್ಲಿದ್ದ 'ಗತಿಶೀಲತೆ'ಯ ಬಗ್ಗೆಯೂ ಅರಿವಾಗುತ್ತದೆ! "ಮೂರು ವರ್ಷಗಳ ಹಿಂದೆ ಶ್ರೀಯುತ ರಾವ್ ಪ್ರಧಾನ ಮಂತ್ರಿಗಳಾದಾಗ ಅವರು ಕಾಂಗ್ರೆಸ್ ಬಗ್ಗೆ ಆರ್.ಎಸ್.ಎಸ್. ತನ್ನ ಅರುಚಿಯನ್ನು ಬಿಡುವಂತೆ ಒತ್ತಾಯಿಸಿದರು" ಎನ್ನುವ ಆರ್.ಎಸ್.ಎಸ್ ಮುಖ್ಯಸ್ಥರ ಹೇಳಿಕೆ ಇನ್ನೇನನ್ನು ತಿಳಿಸುತ್ತದೆ?

ಅಷ್ಟೇ ಅಲ್ಲ, 'ಸ್ಟೇಟ್ಸ್‌ಮನ್' ಪತ್ರಿಕೆ ಹೀಗೂ ವರದಿ ಮಾಡಿದೆ -"ಶ್ರೀಯುತ ಪಿ.ವಿ. ನರಸಿಂಹ ರಾವ್ 1991ರಲ್ಲಿ ಅಧಿಕಾರ ವಹಿಸಿಕೊಂಡ ಕೂಡಲೇ ಅವರೊಂದಿಗೆ ಸಂಪರ್ಕ ಏರ್ಪಡಿಸಿಕೊಂಡ ಬಾಳಾಸಾಹೇಬ್ ದೇವರಸ್‌ಗೆ ಪ್ರಧಾನ ಮಂತ್ರಿಗಳಿಗೆ ಸಂಘ ಪರಿವಾರದ ಬಗ್ಗೆ ಅಸಹ್ಯವೆಂಬುದೇನೂ ಇಲ್ಲ ಎಂದು ಕಂಡುಕೊಂಡರು"!

> **ಅತ್ತ ಅರ್ಜುನ್‌ಸಿಂಗ್‌ರ ದೀರ್ಘ ಪತ್ರ, ಇತ್ತ ಆರ್.ಎಸ್.ಎಸ್. ಮುಖ್ಯಸ್ಥ ಪ್ರೊ। ರಾಜೇಂದ್ರ ಸಿಂಗ್‌ರ ಇತ್ತೀಚಿನ ಹೇಳಿಕೆ-ಇವು ಒಟ್ಟಾಗಿ ಏನು ಹೇಳುತ್ತವೆ?**
> **ಮುಂಬರುವ ದಿನಗಳಲ್ಲಿ ನಮ್ಮ ದೇಶಬಾಂಧವರು ಮೈಯೆಲ್ಲಾ ಕಣ್ಣಾಗಿ ದಿಲ್ಲಿಯ ಅಧಿಕಾರ ಪೀಠಸ್ಥ ಮಂದಿ ಏನೆಲ್ಲಾ ದುಷ್ಟ ಯೋಜನೆಗಳನ್ನು ಹೂಡಲಿದ್ದಾರೆ ಎಂದು ಕಾಯಬೇಕಾದೀತು ಎಂದು ಎಚ್ಚರಿಸಿರುವ ಸಿಪಿಐ(ಎಂ) ಕೇಂದ್ರ ಸಮಿತಿಯ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ**


ಅಂದರೆ ಪರಸ್ಪರ ಕೊಡು-ಕೊಳ್ಳುವ ಮೂಲಕ ರಾವ್ ಮತ್ತು ಆರ್.ಎಸ್.ಎಸ್. ನಡುವೆ ಒಂದು ತಿಳುವಳಿಕೆ ಉಂಟಾಗಿತ್ತು ಎಂಬುದು ಸ್ವತಃ ಸಿದ್ಧವಾಗುತ್ತದೆ. ಬಾಬ್ರಿ ಮಸೀದಿಯ ಧ್ವಂಸದ ಕೃತ್ಯದವರೆಗಿನ ಸಂಸದೀಯ ಕಲಾಪಗಳನ್ನು ಪರಿಶೀಲಿಸಿದಾಗ ಇದು ದೃಢಪಡುತ್ತದೆ. ನಿಜ ಆಗ ಮುಸಲ್ಮಾನರ ನಡುವೆ ಮಾತ್ರವಲ್ಲ, ದೇಶದ ಎಲ್ಲಾ ಜಾತ್ಯಾತೀತ ವ್ಯಕ್ತಿ-ಶಕ್ತಿಗಳಲ್ಲೂ ಉಂಟಾದ ತೀವ್ರ ಕ್ಷೋಭೆಯಿಂದಾಗಿ ಉಡುಗಿ ಹೋದ ರಾವ್ "ರಜ್ಜು ಭಯ್ಯಾ"ರ ಸಂಘಟನೆಗಳು ತಮ್ಮೊಡಿಗೆ ವಿಶ್ವಾಸಘಾತ ಮಾಡಿದವು, ಮಸೀದಿ ಧ್ವಂಸ ಮಾಡುವುದಿಲ್ಲ ಎಂಬ ಭರವಸೆ ಕೇವಲ ತನ್ನನ್ನು ತೂಕಡಿಸುವಂತೆ ಮಾಡಿ ನಿಷ್ಕ್ರಿಯಗೊಳಿಸುವ ಒಂದು ಮಾಟವಾಗಿತ್ತು ಎಂದು ಒಪ್ಪಿಕೊಳ್ಳಲೇಬೇಕಾಗಿ ಬಂತು. ಆದರೆ ಇಂತಹ ಮುಗ್ಧತೆಯ ನಟನೆಯಿಂದ ಪ್ರಧಾನ ಮಂತ್ರಿಗಳಿಗೆ ಏನೂ ದಕ್ಕಲಿಲ್ಲ.

ರಾವ್ ಯಾವ ಫ್ಯಾಸಿಸ್ಟ್ ಸಂಘಟನೆಯೊಂದಿಗೆ ಒಂದು ಸಂಪರ್ಕ ಏರ್ಪಡಿಸಿಕೊಳ್ಳುವ ಪ್ರಯತ್ನಿಸಿದರೋ ಆ ಸಂಘಟನೆ ತಾನು ಸ್ವತಃ ಕಾಂಗ್ರೆಸ್ಸಿಗರಿಗಿಂತಲೂ ಹೆಚ್ಚು ಮಹಾತ್ಮಾಗಾಂಧೀಜಿಗೆ "ಮುಸ್ಲಿಮರನ್ನು ತುಷ್ಟಿಗೊಳಿಸುವ" ಒಂದು ನೀತಿಯನ್ನು ಮಾತ್ರ ಬಿಟ್ಟು ಅವರ ನೈತಿಕ ಭೋದನೆಗಳಿಗೆಲ್ಲಾ ಬದ್ಧವಾಗಿದ್ದೇವೆ ಎನ್ನುವ ಧಿಮಾಕು ತೋರುತ್ತಿದೆ.

ಇಂತಹ ಪಕ್ಕಾ ಹಾಗೂ ಅತ್ಯಂತ ದುಷ್ಟ ಕೋಮುವಾದಿ ಸಂಘಟನೆಯೊಂದಿಗೆ ರಾಜಿ ಮಾಡಿಕೊಳ್ಳುವುದು ಕಾಂಗ್ರೆಸ್ ಮುಖಂಡರು ಆಗಾಗ ಜನರಿಗೆ ನೆನಪಿಸುವ ಕಾಂಗ್ರೆಸ್ ಸಿದ್ಧಾಂತದ ಭಾಗವೇನು? ಕಾಂಗ್ರೆಸ್ ಮುಖಂಡರಿಗೆ ಪ್ರಜಾಪ್ರಭುತ್ವವೆಂದರೆ ಒಂದು ಫ್ಯಾಸಿಸ್ಟ್ ಬಂಡೆಯೊಂದಿಗೆ ಒಪ್ಪಂದಕ್ಕೆ ಬರುವುದೆಂದು ಅರ್ಥವೇ?

ಈಗ, ಅಧಿಕಾರದ ಅಂಗಳದಲ್ಲೊಂದು ಪಿಸುದನಿ ಪ್ರತಿಧ್ವನಿಸುತ್ತಿದೆ -1977ರಲ್ಲೂ ಕಾಂಗ್ರೆಸ್ಸನ್ನು ಕೈಬಿಡದ ದಕ್ಷಿಣದ ರಾಜ್ಯಗಳನ್ನು ಕಳಕೊಂಡ ನಂತರ ಈಗ ಮಹಾರಾಷ್ಟ್ರ ಗುಜರಾತ್‌ಗಳಲ್ಲಿ ಅದು ಅಭೇದ್ಯವೆಂದು ತಿಳಿದಿದ್ದ ಕೋಟೆಗಳನ್ನೂ ಕಳಕೊಳ್ಳಲಿದೆ ಎಂದು. ಜತೆಗೆ ಅದರ ಅದೃಷ್ಟದ ನಿರ್ಣಯವಾಗಲಿರುವ 1996 ಧಾವಿಸಿ ಬರುತ್ತಿದೆ. ತೂತಾದ ದೋಣಿ, ಸೋರುವ ದೋಣಿ ದಡಸೇರಬಲ್ಲುದೆ? ಅಥವಾ 'ರಜ್ಜು ಭಯ್ಯಾ"ರ ಸಂಘಟನೆ ಒಂದಿಲ್ಲೊಂದು ರೀತಿಯಲ್ಲಿ ದಡಸೇರಿಸುತ್ತದೆ ಎಂಬ ಬಗ್ಗೆ ಒಪ್ಪಂದವಾಗಿದೆಯೇ? ಒಂದಿಲ್ಲೊಂದು ರೀತಿಯಲ್ಲಿ ಕಾಂಗ್ರೆಸ್ಸಿನೊಡನೆ "ಕಾರ್ಯತಃ ಸಂಬಂಧ ಬೆಸೆಯಬೇಕು" ಎಂಬ ಆರ್.ಎಸ್.ಎಸ್. ಮುಖ್ಯಸ್ಥರ ಸಲಹೆ ಇದನ್ನೇ ಸೂಚಿಸುತ್ತದೆಯಲ್ಲವೇ!

ಮುಂಬರುವ ದಿನಗಳಲ್ಲಿ ನಮ್ಮ ದೇಶಬಾಂಧವರು ಮೈಯೆಲ್ಲಾ ಕಣ್ಣಾಗಿ ದಿಲ್ಲಿಯ ಅಧಿಕಾರಪೀಠಸ್ಥ ಮಂದಿ ಏನೆಲ್ಲಾ ದುಷ್ಟ ಯೋಜನೆಗಳನ್ನು ರೂಪಿಸುತ್ತಿದ್ದಾರೆ ಎಂದು ಕಾಯಬೇಕಾದೀತು.



ಅಧ್ಯಾಯ 20

14ನೇ ಮಹಾಧಿವೇಶನದ ಇತರ ಅಂಶಗಳು

ಸಿಪಿಐ(ಎಂ) ಸರಿಯಾದ ಮಾರ್ಗದಲ್ಲೇ ಮುಂದುವರೆದಿದೆ ಹಾಗೂ ಪರಿಸ್ಥಿತಿ ಬಗ್ಗೆ ನಾವು ಮಾಡಿದ ಅಂದಾಜು ಸರಿಯೆಂಬುದು ನಂತರದ ವಿದ್ಯಮಾನಗಳು ಸಾಬೀತುಪಡಿಸಿವೆ. ಆದರೂ ರಾಜಕೀಯ ಪರಿಸ್ಥಿತಿಯಲ್ಲಿ ಗಮನಾರ್ಹವಾದ ಬದಲಾವಣೆಯನ್ನು ತರಲು ಸಾಧ್ಯವಾಗಲಿಲ್ಲ ಎಂದು 13ನೇ ಮಹಾಧಿವೇಶನದ ನಂತರದ ಕೆಲಸ ಕಾರ್ಯಗಳ ಅನುಭವದ ಆಧಾರದಲ್ಲಿ 14ನೇ ಅಧಿವೇಶನ ಅಭಿಪ್ರಾಯಪಟ್ಟಿತು. ಆಳುವ ಪಕ್ಷದ ವಿರುದ್ಧ ಜನರ ತೃಪ್ತಿ ಹೆಚ್ಚುತ್ತಲೇ ಇತ್ತು. ಬುಡಕಟ್ಟು ಮತ್ತು ನಾನಾ ಜನಾಂಗೀಯ ಜನರಲ್ಲಿ ಹೊಸ ಎಚ್ಚರಉಂಟಾಗಿತ್ತು. ಕೆಲವು ಪ್ರದೇಶಗಳು ಮತ್ತು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಈ ಅತೃಪ್ತಿಯನ್ನು ಚುನಾವಣೆ ಲಾಭಕ್ಕೆ ಬಳಸಲು ಯತ್ನಿಸುತ್ತಿವೆ.

ಭಾರತ ರೂಪುಗೊಳ್ಳಲು ಕಾರಣವಾಗಿರುವ ನಾನಾ ರಾಜ್ಯಗಳ ಭಾವನೆಗಳನ್ನುಗುರುತಿಸಿ ಸ್ಪಂದಿಸಲು ಅಖಿಲ ಭಾರತ ಪಕ್ಷಗಳು ವಿಫಲವಾಗಿರುವುದರ ಫಲ ಇದಾಗಿದೆ. ಇನ್ನೊಂದೆಡೆ, ಗುತ್ತೇದಾರಿ ಬಂಡವಾಳಶಾಹಿಗಳ ಹಿತಾಸಕ್ತಿ ಪ್ರಧಾನವಾಗಿರುವ ರಾಜ್ಯಗಳ ನಡುವಿನ ಸಂಘರ್ಷ ಹಾಗೂ ವೈರುಧ್ಯಗಳನ್ನು ಇದು ಪ್ರತಿಬಿಂಬಿಸುತ್ತದೆ. ದೇಶದ ಪ್ರಜಾಸತ್ತಾತ್ಮಕ ಚೌಕಟ್ಟಿಗೆ ಮಹಾ ಅಪಾಯವನ್ನು ಒಡ್ಡಿರುವಂಥ ರಾಜಕೀಯದಲ್ಲಿ ಅಪರಾಧ ಹೆಚ್ಚುತ್ತಿರುವ ಅಂಶವನ್ನು 14ನೇ ಕಾಂಗ್ರೆಸ್ ಗಮನಿಸಿತು.

ಬದಲಾದ ಜಾಗತಿಕ ಸನ್ನಿವೇಶ ಮತ್ತು ಆಳುವ ಕಾಂಗ್ರೆಸ್(ಐ)ನ ಆರ್ಥಿಕ ನೀತಿಗಳು ನಮ್ಮ ದಶದ ವಿದೇಶಾಂಗ ನೀತಿಯ ಮೇಲೆ ಪರಿಣಾಮ ಬೀರಿವೆ. ಈವರೆಗೆ ಜಾಗತಿಕ ರಂಗದಲ್ಲಿ ತಾನು ನಿರ್ವಹಿಸುತ್ತಿದ್ದ ಪ್ರಮುಖ ಪಾತ್ರವನ್ನು ಭಾರತ ಈಗ ನಿರ್ವಹಿಸುತ್ತಿಲ್ಲ. ಕಂಪೂಚಿಯಾ ಸಮಸ್ಯೆ ಪರಿಹಾರ, ಪಶ್ಚಿಮ ಏಷ್ಯಾ ಬಿಕ್ಕಟ್ಟು ಇತ್ಯರ್ಥ, ಇರಾಕ್ ಮತ್ತು ಕ್ಯೂಬಾ ಮೇಲೆ ಅಮೇರಿಕಾದ ದಿಗ್ಬಂಧನ ಮೊದಲಾದ ವಿಷಯಗಳಲ್ಲಿ ಭಾರತದ ದನಿ ಕೇಳುತ್ತಿಲ್ಲ ಎಂದು 14ನೇ ಮಹಾಧಿವೇಶನ ಹೇಳಿತು. ಅಲಿಪ್ತ ಚಳುವಳಿಯ ಬಾಂಡುಂಗ್ ಶೃಂಗ ಸಮ್ಮೇಳನದ ನಂತರ ಅಂತರ್ರಾಷ್ಟ್ರೀಯ ರಂಗದಲ್ಲಿ ಮಹತ್ವ ಕಳೆದುಕೊಂಡಷ್ಟು(ಮೂಲೆ ಗುಂಪು) ಹಿನ್ನಡೆಯನ್ನು ಭಾರತ ಹಿಂದೆ ಯಾವತ್ತೂ ಅನುಭವಿಸಿರಲಿಲ್ಲ.

ವರ್ಗ ಶಕ್ತಿಗಳ ಧ್ರುವೀಕರಣದಲ್ಲಿ ಬದಲಾವಣೆ ತರುವ ಪ್ರಶ್ನೆ ಅತ್ಯಂತ ಮಹತ್ವದ ಪ್ರಶ್ನೆಯಾಗಿದೆ. ಎಡ ಶಕ್ತಿ ದೇಶದ ಏಕತೆಯನ್ನು ಕಾಪಾಡುವ ಪ್ರಮುಖ ಶಕ್ತಿಯಾಗಿ ಹೊರಹೊಮ್ಮಿದೆ. ಜನತಾದಳ ಮತ್ತು ರಾಷ್ಟ್ರೀಯ ರಂಗದ ಜೊತೆ ಕೆಲವು ಮೂಲಭೂತ ಪ್ರಶ್ನೆಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಒಟ್ಟಾಗಿ ಕೆಲಸ ಮಾಡಲು ದೃಢವಾದ ಆಧಾರವಿದೆ ಎಂದು ಅವುಗಳಲ್ಲಿ(ದಳ ಮತ್ತು ರಂಗ) ಆತ್ಮವಿಶ್ವಾಸವನ್ನು ತುಂಬಲು ಎಡಶಕ್ತಿ ಸಮರ್ಥವಾಯಿತು. ಈ ಎರಡು ರಾಜಕೀಯ ಶಕ್ತಿಗಳ ಜೊತೆ ಹೊಂದಾಣಿಕೆ ಮಾಡಿಕೊಂಡದ್ದರಿಂದ ಕೋಮುಶಕ್ತಿಗಳನ್ನು, ಅದರಲ್ಲೂ ಮುಖ್ಯವಾಗಿ ಬಿಜೆಪಿಯನ್ನು ಪ್ರತ್ಯೇಕಿಸುವ ಗುರಿಯನ್ನು ಸಾಧಿಸಲು ಸಾಧ್ಯವಾಯಿತು. ಮೈತ್ರಿ ಕೂಟ ರೂಪುಗೊಂಡದ್ದು ಹಾಗೂ ಒಂದೆಡೆ ಎಡಶಕ್ತಿಗಳ ನಡುವಿನ ಹೊಂದಾಣಿಕೆ ಮತ್ತೊಂದೆಡೆ ಜನತಾದಳ ಮತ್ತು ರಾಷ್ಟ್ರೀಯರಂಗಗಳ ಹೊಂದಾಣಿಕೆ ತುಂಬಾ ಮಹತ್ವದ್ದಾಗಿದೆ. ಬಂಡವಾಳಶಾಹಿ-ಭೂಮಾಲಿಕ ವರ್ಗಗಳ ಪಕ್ಷಗಳಲ್ಲಿದ್ದ ಕಮ್ಯುನಿಸ್ಟ್ ವಿರೋಧಿ ಭಾವನೆ ಕ್ರಮೇಣ ಕಡಿಮೆಯಾಗುತ್ತಿದೆ. ರಾಷ್ಟ್ರೀಯ ಏಕತೆಯ ಪ್ರಶ್ನೆಯನ್ನು ಮುಂದಿಟ್ಟು ಜನತಾದಳ ಅಧಿಕಾರಕ್ಕೆ ಬಂದಿತ್ತು ಎಂಬುವನ್ನೂ ಮರೆಯಬಾರದು. ಆದರೆ, ಬಂಡವಾಳಶಾಹಿ ವರ್ಗದ ಏಕಸ್ವಾಮ್ಯ ಹಾಗೂ ಏಕಸ್ವಾಮ್ಯವಲ್ಲದ ವಿಭಾಗಗಳ ನಡುವೆ ವಿಭಜನೆಯಾಗಿದೆ ಮತ್ತು ಏಕಸ್ವಾಮ್ಯೇತರ ವಿಭಾಗ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಭಾಗವಾಯಿತು ಎಂದು ಭಾವಿಸುವುದು ತಪ್ಪಾಗುತ್ತದೆ. ಇನ್ನೂ ಬಂಡವಾಳಶಾಹಿ-ಭೂಮಾಲಿಕ ವರ್ಗಗಳ ಪಕ್ಷಗಳ ಹಿಂದೆ ಇರುವ ಬಹುತೇಕ ಭಾರತೀಯರ ಪ್ರಜ್ಞೆಯ ಮಟ್ಟವನ್ನು ಪರಿಗಣಿಸಿದರೆ ಇಂಥ ಪರಿಸ್ಥಿತಿ(ಅಂದರೆ ಏಕಸ್ವಾಮ್ಯೇತರ ವಿಭಾಗ ಎಡ-ಪ್ರಜಾಸತ್ತಾತ್ಮಕ ರಂಗಕ್ಕೆ ಬರುವುದು) ಉಂಟಾಗುವ ಘಟ್ಟವಿನ್ನೂ ಬಂದಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಆದರೆ ಆಳುವ ವರ್ಗಗಳ ನಾನಾ ರಾಜಕೀಯ ಕೂಟಗಳ ನಡುವೆ ಘರ್ಷಣೆ ಹಾಗೂ ವೈರುಧ್ಯಗಳನ್ನು ಎಡ ಹಾಗೂ ಪ್ರಜಾಸತ್ತಾತ್ಮಕ ಚಳುವಳಿಯ ಮುನ್ನಡೆಗಾಗಿ ನಾವು ಕುಶಲತೆಯಿಂದ ಬಳಸಿಕೊಳ್ಳಬೇಕು. ಸಂಸದೀಯ ಹೋರಾಟದ ಅವಕಾಶಗಳನ್ನು ಪೂರ್ಣವಾಗಿ ಬಳಸಿಕೊಳ್ಳಬೇಕು ಹಾಗೂ ವರ್ಗ ಮತ್ತು ಸಾಮೂಹಿಕ ಸಂಘಟನೆಗಳಲ್ಲಿನ ನಮ್ಮ ಕೆಲಸದೊಂದಿಗೆ ಅದನ್ನು ಏಕೀಕರಿಸಬೇಕು. ಜನಸಮೂಹದ ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸುವುದು ಭಾರೀ ಅಗತ್ಯದ ಕಾರ್ಯವಾಗಿದೆ.

ಬಂಡವಾಳಶಾಹಿ ಪ್ರತಿಪಕ್ಷಗಳೊಂದಿಗೆ ಸೇರಿ ಕೆಲಸ ಮಾಡುವಾಗ ನಾವು ಅವುಗಳ ವರ್ಗ ದೃಷ್ಟಿಯನ್ನು ಎಂದಿಗೂ ಮರೆಯಬಾರದು. ಬಂಡವಾಳಶಾಹಿ ಪ್ರತಿಪಕ್ಷಗಳೊಂದಿಗಿನ ಮೈತ್ರಿ ಮತ್ತು ಎಡ-ಪ್ರಜಾಸತ್ತಾತ್ಮಕ ರಂಗದ ಘೋಷಣೆ ಒಂದೇ ಎಂದು ಭಾವಿಸಬಾರದು. ಅಂಥ ಗೊಂದಲಕ್ಕೆ ಅವಕಾಶ ಕೊಡಬಾರದು. ಆ ಪಕ್ಷಗಳಿಂದ ಪ್ರತ್ಯೇಕವೆಂದು ಗುರುತಿಸಿಕೊಳ್ಳುವ ಅಗತ್ಯ ಬಂದಾಗ ನಾವು - ಹಾಗೆ ಮಾಡಲಿಲ್ಲ ಎಂಬುದು ನಮ್ಮ ಪಕ್ಷದ ಅನುಭವ ತೋರಿಸಿಕೊಡುತ್ತದೆ. ಏಕತೆಯ ಹೆಸರಿನಲ್ಲಿ ನಾವು ಭಿನ್ನಾಭಿಪ್ರಾಯಗಳನ್ನು ಮೃದುಗೊಳಿಸಿದೆವು. ಒಂದಲ್ಲ ಒಂದು ನೆಪದಲ್ಲಿ ನಾವು ಸಂಸದೀಯ ವ್ಯವಸ್ಥೆಗೆ (Parliamentarianism) ಬಲಿ ಬಿದ್ದೆವು ಕೂಡ. ತುರ್ತು ಪರಿಸ್ಥಿತಿ ನಂತರದ ಅವಧಿಯಲ್ಲಿ ಬೂರ್ಜ್ವಾ-ಭೂಮಾಲಕ ಪಕ್ಷಗಳು ನಮಗೆ ಶರತ್ತುಗಳು ವಿಧಿಸಲು ಸಮರ್ಥರಾದವು. ಅಗತ್ಯವಾದ ಕೆಲವು ರಾಜಿಗಳನ್ನು ಮಾಡಿಕೊಳ್ಳಬೇಕೇನೋ ಹೌದು. ಆದರೆ ನಾವು ನಮ್ಮ ವರ್ಗ ದೃಷ್ಟಿಕೋನ ಮತ್ತು ಸೈದ್ಧಾಂತಿಕ ನಿಲುವುಗಳನ್ನು ಎಂದಿಗೂ ಮರೆಯಬಾರದು.

'ಸಂಘಟನೆ ಮತ್ತು ಕಾರ್ಯಭಾರಗಳು ಕುರಿತು ವರದಿ'ಯನ್ನು 14ನೇ ಮಹಾಧಿವೇಶನ ಅಂಗೀಕರಿಸಿತು. ಪಾಲಿಟ್ ಬ್ಯೂರೋ ಕೇಂದ್ರ ಸಮಿತಿ ಮತ್ತು ಸಾಲ್ಕಿಯಾ ಪ್ಲೀನಂ ಮಾರ್ಗದರ್ಶನಗಳು ಮೊದಲಾದವುಗಳು ಉತ್ತಮ ಫಲಿತಾಂಶವನ್ನೇ ನೀಡಿವೆ ಎಂದು ಈ ವರದಿ ಹೇಳಿತು. ಪಕ್ಷದ ಸದಸ್ಯತ್ವ 1978ರಲ್ಲಿ 1,61,000 ಇದ್ದದ್ದು 1991ರಲ್ಲಿ 5,79,000ಕ್ಕೆ ಏರಿತು. ಪಕ್ಷದ ನೇತೃತ್ವ ಸಾಮೂಹಿತ ಸಂಘಟನೆಗಳ ಸದಸ್ಯತ್ವ ಇದೇ ಅವಧಿಯಲ್ಲಿ ಆರು ಪಟ್ಟು ಹೆಚ್ಚಿತು(ಅಂದರೆ 40 ಲಕ್ಷದಿಂದ 2.87 ಕೋಟಿಗೆ) ಸಾಲ್ಕಿಯಾ ಪ್ಲೀನಂನ ನಿರ್ಣಯಗಳು ಒತ್ತು ನೀಡಿದ ಫಲವಾಗಿ ಈ ವಿಸ್ತರಣೆ ಸಾಧ್ಯವಾಯಿತು. ಆದರೆ ಈ ಬೆಳವಣಿಗೆ ಕೂಡಾ ಹಿಂದಿನ ಕೆಲವು ಸಮಸ್ಯೆಗಳನ್ನು ಮುಂದುವರೆಸಿಕೊಂಡು ಹೋಯಿತು ಹಾಗೂ ಕೆಲವು ಹೊಸ ಸಮಸ್ಯೆಗಳೂ ಉದ್ಭವವಾದವು. ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿ ಸದಸ್ಯರ ಸಂಖ್ಯೆ ಹೆಚ್ಚಿದ್ದರಿಂದ ಸದಸ್ಯತ್ವದಲ್ಲಿ ಏರಿಕೆಯಾಯಿತು. ತಮಿಳುನಾಡಿನಲ್ಲಿ ಕೂಡಾ ಈ ವಿಚಾರದಲ್ಲಿ ಗಮನಾರ್ಹ ಪ್ರಗತಿಯಾಯಿತು. ಅದರ ನಂತರದ ಸ್ಥಾನ ಆಂಧ್ರಪ್ರದೇಶದ್ದು ಒಟ್ಟು ಸದಸ್ಯತ್ವದಲ್ಲಿ ಪ.ಬಂಗಾಳ ಮತ್ತು ಕೇರಳದ ಸದಸ್ಯರ ಅನುಪಾತ ಈಗಲೂ ಹೆಚ್ಚಾಗುತ್ತಿದೆ. ಬಿಹಾರದಲ್ಲಿ ಪಕ್ಷದ ಸಾಮೂಹಿಕ ಸಂಘಟನೆಗಳ ಸದಸ್ಯತ್ವದ ಸಂಖ್ಯೆ ಗಮನಾರ್ಹವಾಗಿ ಏರಿದೆ; ಆದರೆ ಪಕ್ಷದ ಸದಸ್ಯತ್ವ ಸ್ವಲ್ಪ ಮಾತ್ರ ಹೆಚ್ಚಿದೆ. ಮೂಲಭೂತ ವರ್ಗಗಳಂಥ(Basic Classes) ಸದಸ್ಯರನ್ನು ಏಕಪ್ರಕಾರವಾಗಿ ನೊಂದಾಯಿಸಲಾಗುತ್ತಿದೆ. ಆದರೆ ದುಡಿಯುವ ವರ್ಗದ ಪ್ರಮಾಣವನ್ನು ಹೆಚ್ಚಿಸುವುದನ್ನು ಸುಧಾರಿಸುವುದಕ್ಕೆ ಸಾಕಷ್ಟು ಗಮನ ನೀಡಲಾಗಿಲ್ಲ. ಹಿಂದಿ ಮಾತನಾಡುವ ಪ್ರದೇಶಗಳಲ್ಲಿ ಪಕ್ಷ ಮುನ್ನಡೆ ಸಾಧಿಸಿದೆ. ಆದರೆ ಒಟ್ಟಾರೆಯಾಗಿ ಹೇಳುವುದಾದರೆ ರಾಜ್ಯ ಸಮಿತಿಗಳು ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿಗಳ ಕಾರ್ಯ ನಿರ್ವಹಣೆಯಲ್ಲಿ ಕೊರತೆಯಿದೆ.

ಸಾಮೂಹಿಕ ಸಂಘಟನೆಗಳ ಕಾರ್ಯವನ್ನು ಈ ವರದಿ ವಿಶ್ಲೇಷಿಸಿತು. ಪ್ರಜಾಸತ್ತಾತ್ಮಕ ಕೇಂದ್ರವಾದ (democratic centralism)ಕ್ಕೆ ಸಂಬಂಧಿಸಿದಂತೆ ಪಕ್ಷದ ಕಾರ್ಯನಿರ್ವಹಣೆ ಮತ್ತು ಪಕ್ಷ ಸಂಘಟನೆಗಳಲ್ಲಿ ಅಧಿಕಾರಶಾಹಿಯ ಅನಿಷ್ಟವನ್ನೂ ವರದಿ ಪರಿಶೀಲಿಸಿತು. ಪಕ್ಷದ ಸೈದ್ಧಾಂತಿಕ ಕಾರ್ಯನಿರ್ವಹಣೆಯ ಪರಿಸ್ಥಿತಿ ಮತ್ತು ಅದರಲ್ಲಿ ಲೋಪದೋಷ-ಕೊರತೆಗಳ ಬಗ್ಗೆಯೂ ಅಂದಾಜು ಮಾಡಿತು.

ಪಕ್ಷದ ಮುಂದಿರುವ ಕಾರ್ಯಭಾರಗಳೇನು ಎಂಬುದನ್ನು ಗುರುತಿಸಿದ ವರದಿ ಸಾಮೂಹಿಕ ಹೋರಾಟ, ಪಕ್ಷ ಕಟ್ಟುವ ಮುಖ್ಯ ಕೆಲಸಕ್ಕೆ ಒತ್ತು, ಸೈದ್ಧಾಂತಿಕ ಕೆಲಸವನ್ನು ಹೆಚ್ಚಿಸುವುದು ಹಾಗೂ ಪಕ್ಷದ ನಿಲುವು ನೀತಿಗಳನ್ನು ಸ್ವತಂತ್ರವಾಗಿ ಪ್ರತಿಬಿಂಬಿಸುವ ಪ್ರಮುಖ ಕ್ಷೇತ್ರಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಲು ಕರೆ ನೀಡಿತು.

(ಮುಗಿಯಿತು)

ಉತ್ತರ ಕನ್ನಡ ಜಿಲ್ಲಾ ಸಿಪಿಐ(ಎಂ) ಸಮ್ಮೇಳನ

ಕಳೆದ ಸಂಚಿಕೆಗಳಲ್ಲಿ ೧೫ನೇ ರಾಜ್ಯ ಸಮ್ಮೇಳನದ ಪೂರ್ವಭಾವಿಯಾಗಿ ರಾಜ್ಯದೆಲ್ಲೆಡೆ ನಡೆದ ಶಾಖಾ ಮಟ್ಟದಿಂದ ಜಿಲ್ಲಾ ಮಟ್ಟದವರೆಗಿನ ಸಿಪಿಐ(ಎಂ) ಸಮ್ಮೇಳನಗಳ ವರದಿಗಳನ್ನು ಓದಿರುವಿರಿ. ಕೆಲವು ವರದಿಗಳು ನಮಗೆ ತಡವಾಗಿ ತಲುಪುತ್ತಿವೆ.

ಸಿಪಿಐ(ಎಂ) ಉತ್ತರ ಕನ್ನಡ 3ನೇ ಜಿಲ್ಲಾ ಸಮ್ಮೇಳನ 30, 31 ಜನವರಿ 1995ರಂದು ಹೊನ್ನಾವರದಲ್ಲಿ ನಡೆಯಿತು.

ಉದ್ಘಾಟನಾ ಸಮಾರಂಭದಲ್ಲಿ ಸ್ವಾಗತ ಸಮಿತಿ ಕಾರ್ಯದರ್ಶಿಯವರಾದ ಸುರೇಶ್ ತಾಂಡೇಲ ಸ್ವಾಗತ ಮಾಡಿದರು. ಉದ್ಘಾಟಕರಾಗಿ ಎನ್.ಕೆ.ಉಪಾಧ್ಯಾಯರು ಮಾತನಾಡಿ ಉ.ಕ. ಜಿಲ್ಲೆಯ ಬಗ್ಗೆ 1944-1945ನೇ ವರ್ಷದಿಂದ ಕೆಂಬಾವುಟದಡಿಯಲ್ಲಿ ಹೋರಾಟವನ್ನು ನೆನಪಿಸಿದರು. ಭೂ ಹೋರಾಟದ ಮೂಲಕ ಕಮ್ಯುನಿಸ್ಟ್ ಚಳವಳಿ ಪ್ರಾರಂಭವಾಗಿ ಉಳುವವನಿಗೆ ಭೂ ಒಡೆತನ ಸಿಗಬೇಕೆಂಬ ಅಂದಿನ ಕಾಲದ ಹೋರಾಟದ ಹಿನ್ನಲೆಯನ್ನು ಉಳಿಸಿಕೊಂಡು ಹೋಗಲು ಇಂದು ನೀವು ಪ್ರಯತ್ನಪಟ್ಟು ಜನತೆಯ ಬೇಡಿಕೆಗೆ ಸ್ಪಂದಿಸಬೇಕಾಗಿದೆಯೆಂಬುದರ ಬಗ್ಗೆ ಮನವರಿಕೆ ಮಾಡಿದರು. ಆ ಹೋರಾಟದಲ್ಲಿ ತಮ್ಮ ಪಾತ್ರವಿರುವುದನ್ನು ಜ್ಞಾಪಿಸಿಕೊಂಡರು. ಈಗ ಹೊಸ ಯುವಕರು ಈ ಪಕ್ಷವನ್ನು ಕಟ್ಟಲು ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಂದೆ ಬರುತ್ತಿದ್ದಾರೆ. ಹಲವಾರು ಯೋಜನೆಗಳು ಈ ಜಿಲ್ಲೆಯಲ್ಲಿ ಬರುತ್ತಿರುವುದರಿಂದ ಕೈಗಾರಿಕೆ ಮುಂದುವರಿಯುತ್ತಿದೆ. ಹಲವಾರು ರಾಜಕೀಯ ಪಕ್ಷಗಳ ಮಧ್ಯದಲ್ಲಿ ನಾವು ಕೆಲಸ ಮಾಡಬೇಕಾಗಿದೆ. ನಾವು ಜನರ ಶೋಷಣೆ ವಿರುದ್ಧ ಕೆಂಬಾವುಟದಡಿಯಲ್ಲಿ ನಮ್ಮ ಪಕ್ಷ ಮುಂದೆ ನಿಲ್ಲುತ್ತದೆ ಎಂದು ತಮ್ಮ ಉದ್ಘಾಟನಾ ಭಾಷಣದಲ್ಲಿ ವಿವರಿಸಿದರು.


ಮುಖ್ಯ ಅತಿಥಿಗಳಾಗಿ ವಿ.ಜೆ.ಕೆ. ನಾಯರ್ ರವರು ಮಾತನಾಡುತ್ತಾ ಎರಡನೇ ಜಿಲ್ಲಾ ಸಮ್ಮೇಳನದ ವೇಳೆಗೆ ಕಮ್ಯುನಿಸ್ಟ್ ಪಕ್ಷದಲ್ಲಿ ಆದ ಹಿನ್ನಡೆ, ಈ ಮೂರು ವರ್ಷಗಳ ಬದಲಾವಣೆಗಳನ್ನು ಅಂತರ್‍ರಾಷ್ಟ್ರೀಯ ಪ್ಯಾರಿಸ್ ಕಮ್ಯುನಿಸಂನಿಂದ ಹಿಡಿದು 70 ವರ್ಷ ಸೋವಿಯೆತ್ ಒಕ್ಕೂಟದ ಆಡಳಿತದವರೆಗೆ ಕೆಲವು ಮುಖ್ಯ ಘಟನೆಗಳನ್ನು ವಿವರಿಸಿದರು. ದೇಶದಲ್ಲಿ ಕೇಂದ್ರ ಸರ್ಕಾರ ಪಿ.ವಿ. ನರಸಿಂಹರಾವ್ ಸರಕಾರದ ಧೋರಣೆಯ ಬಗ್ಗೆ ಮಾತನಾಡಿದರು. ಈ ಎಲ್ಲ ಸಮಸ್ಯೆಗಳನ್ನು ಗಮನದಲ್ಲಿರಿಸಿ ಸಮ್ಮೇಳನದಲ್ಲಿ ಬಂದ ಪ್ರತಿನಿಧಿಗಳು ಮಾತನಾಡಿ ಚರ್ಚೆ ನಡೆಸಬೇಕೆಂದು ಕರೆ ನೀಡಿದರು. ಸಮ್ಮೇಳನದ ವೇದಿಕೆಗೆ ಹೊನ್ನಾವರ ಪ್ರದೇಶದ ರೈತ ಹೋರಾಟದಲ್ಲಿ ಭಾಗವಹಿಸಿ ನಮ್ಮ ಪಕ್ಷದಿಂದ 1952ರ ಚುನಾವಣೆಯಲ್ಲಿ ಪ್ರದೇಶದಲ್ಲಿ ಸ್ಪರ್ಧಿಸಿದಂತ ದಿಬ್ಬಣ್ಣಶೆಟ್ಟಿ ವೇದಿಕೆಯಂದಿಡಲಾಗಿತ್ತು. ಸಮ್ಮೇಳನದಲ್ಲಿ ಒಟ್ಟು 52 ಪ್ರತಿನಿಧಿಗಳು ಭಾಗವಹಿಸಿದ್ದರು.


ಒಟ್ಟು 17 ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡರು. ಚರ್ಚೆಯ ನಂತರ ಕಾರ್ಯದರ್ಶಿಯವರು ಜಿಲ್ಲಾ ಸಮಿತಿ ಪರವಾಗಿ ಉತ್ತರವನ್ನು ನೀಡಿದರು. ನಂತರ ನಿರ್ಣಯ ಮಂಡಳಿ ಪರವಾಗಿ ಶಾಂತರಾಮ ನಾಯಕ ನಿರ್ಣಯಗಳನ್ನು ಮಂಡಿಸಿದರು. 1) ಜಿಲ್ಲಾ ಅಭಿವೃದ್ಧಿ ಯೋಜನೆಗಳ ಕುರಿತು 2) ಸ್ವತಂತ್ರ ಭಾರತದ ಆರ್ಥಿಕ ನೀತಿಯನ್ನು ಹರಾಜು ಮಾಡುತ್ತಿರುವ ನರಸಿಂಹರಾವ್ ತೋಲಗಬೇಕು 3) ಹೊನ್ನಾವರ ಶರಾವತಿ ಸೇತುವೆ ಪುನರ್ನಿರ್ಮಾಣಕ್ಕೆ ಆಗ್ರಹ 4) ಕನಿಷ್ಠ ವೇತನ ಜಾರಿಗೆ ಒತ್ತಾಯ 5) ಜಿಲ್ಲೆಯಲ್ಲಿ ಶಾಂತಿ ಸೌಹಾರ್ದಕ್ಕೆ ಪಣ 6) ಸಾರಾಯಿ ಆಂದೋಲದ ಬಗ್ಗೆ ಈ ರೀತಿ ನಿರ್ಣಯವನ್ನು ಸಮ್ಮೇಳನ ಸರ್ವಾನುಮತದಿಂದ ಅಂಗೀಕರಿಸಿತು.


ಕ್ರೆಡನ್ಶಿಯಲ್ ವರದಿಯನ್ನು ಸುಭಾಶ ಕೊಪ್ಪಿಕರ ವಿವರಿಸಿದರು. ಈ ಸಮ್ಮೇಳನ ಪಿ.ಜಿ.ಮಶಾಲ್ದಿ, ಟಿ.ಎಸ್.ನಾಯ್ಕ, ಅಕ್ರಮ ಖಾನ್‌ರವರ ಅಧ್ಯಕ್ಷ ಮಂಡಳಿಯಲ್ಲಿ ನಡೆಯಿತು. ಚರ್ಚೆ ಉತ್ತರ ನಡೆದು ಕೊನೆಯಲ್ಲಿ ಹೊಸ ಹನ್ನೊಂದು ಜನರ ಜಿಲ್ಲಾ ಸಮಿತಿಯ ಸದಸ್ಯರಲ್ಲಿ 8 ಜನ ಸದಸ್ಯರನ್ನು ರಾಜ್ಯ ಸಮ್ಮೇಳನಕ್ಕೆ ಆಯ್ಕೆ ಮಾಡಲಾಯಿತು. ಹಾಗೂ ಹೊಸದಾಗಿ ಆಯ್ಕೆಯಾದ ಜಿಲ್ಲಾ ಸಮಿತಿಗೆ ಕಾರ್ಯದರ್ಶಿಯಾಗಿ ಟಿ.ಎಸ್. ನಾಯ್ಕ ಸರ್ವಾನುಮತದಿಂದ ಆಯ್ಕೆಗೊಂಡರು. ಹೊಸದಾಗಿ ಆಯ್ಕೆಯಾದ ಜಿಲ್ಲಾ ಸಮಿತಿಯ ಸದಸ್ಯರಾಗಿ ಮಂಜುನಾಥ ಪುಲಕರ, ಪಿ.ಜಿ. ಮಶಾಲ್ದಿ, ಶಾಂತಾರಾಮ ನಾಯಕ, ಅಕ್ರಮಖಾನ್, ಸುರೇಶ್ ತಾಂಡೇಲ, ತಿಲಕಗೌಡ, ಸುಭಾಷ್ ಕೊಪ್ಪಿಕರ, ಎಂ.ಬಿ.ನಾಯಕ, ಮಾಧವ ಶೇರಿಗಾರ ಕೊನೆಯದಾಗಿ ಅಧ್ಯಕ್ಷ ಮಂಡಳಿ ಪರವಾಗಿ ಪಿ.ಜಿ.ಮಶಾಲ್ದಿ ಅಕ್ರಮ್ ಖಾನ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸ್ವಾಗತ ಸಮಿತಿ ಪರವಾಗಿ ತಿಲಕಗೌಡ ವಂದನಾರ್ಪಣೆಯೊಂದಿಗೆ ಸಮ್ಮೇಳನ ಯಶಸ್ವಿಯಾಗಿ ಮುಕ್ತಾಯವಾಯಿತು. ಸಂಜೆ ಬೃಹತ್ ಮೆರವಣಿಗೆ ಸಾರ್ವಜನಿಕ ಸಭೆ ನಡೆಸಲಾಯಿತು.


ಕರ್ನಾಟಕ ಸುದ್ದಿ ಸಮಾಚಾರ


15ನೇ ರಾಜ್ಯ ಸಮ್ಮೇಳನ ಆರಿಸಿದ ಕಾರ್ಯದರ್ಶಿ ಮಂಡಳಿ



ಪಿ. ರಾಮಚಂದ್ರರಾವ್



ಎನ್.ಕೆ. ಉಪಾಧ್ಯಾಯ



ಎಸ್.ಸೂರ್ಯನಾರಾಯಣರಾವ್



ಕೆ.ಆರ್. ಶ್ರೀಯಾನ್


ಸಿ.ನಂಜುಂಡಪ್ಪ


ವಿ.ಜೆ.ಕೆ. ನಾಯರ್


ಜಿ.ವಿ. ಶ್ರೀರಾಮರೆಡ್ಡಿ


ನಿತ್ಯಾನಂದ ಸ್ವಾಮಿ


ಜಿ.ಎನ್. ನಾಗರಾಜ್

ಇತ್ತೀಚೆಗೆ ಮುಕ್ತಾಯಗೊಂಡ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನದ ಪ್ರತಿನಿಧಿಗಳ ವಿವರ ನೀಡುವ ಅರ್ಹತಾ ಪರಿಶೀಲನಾ ವರದಿ

ಒಟ್ಟು ಪ್ರತಿನಿಧಿಗಳು	231
ಗಂಡಸರು	220
ಹೆಂಗಸರು	11

ವಯಸ್ಸು

20ರಿಂದ 25	13
26-35	77
36-45	80
46-55	32
56-65	20
66-75	8
76ರ ಮೇಲೆ	1

ಅತೀ ಹಿರಿಯ ಪ್ರತಿನಿಧಿಗಳು
ಕಾಂ.ಎನ್.ಕೆ. ಉಪಾಧ್ಯಾಯ
(79 ವರ್ಷ - 17-2-1916)

ಅತೀ ಕಿರಿಯ ಪ್ರತಿನಿಧಿ
ಕಾಂ. ಮಹಮ್ಮದ್ ರಫೀಕ್ ಮೊಕಾಶಿ
(21 ವರ್ಷ-1.7.1974)

ವಿದ್ಯಾಭ್ಯಾಸ

ಶಿಕ್ಷಣ ಇಲ್ಲ	4
ಪ್ರಾಥಮಿಕ	27
ಮಾಧ್ಯಮಿಕ	21
ಎಸ್‌ಎಸ್‌ಎಲ್‌ಸಿ	55
ಪಿಯುಸಿ	19
ಪದವೀಧರ	70
ಉನ್ನತ ಪದವೀಧರ	

ವಿವಾಹಿತ/ಅವಿವಾಹಿತ

ಮದುವೆಯಾದವರು	172
ಮದುವೆ ಆಗದವರು	49

ಮಕ್ಕಳ ಸಂಖ್ಯೆ

ಮಕ್ಕಳಿಲ್ಲದವರು	80
1 ಮಗು	32
2 ಮಕ್ಕಳು	49
3 ಮಕ್ಕಳು	33
4 ಮಕ್ಕಳು	19
5 ಮಕ್ಕಳು	15
6 ಮಕ್ಕಳು	3

ವರ್ಗ ಮೂಲ

ಕಾರ್ಮಿಕ ವರ್ಗ	105
ಕೃಷಿ-ಕೂಲಿಕಾರರು	8
ಬಡ ರೈತರು	34
ಮಧ್ಯಮ ರೈತ	25
ಶ್ರೀಮಂತ ರೈತ	1
ಭೂ ಮಾಲಕ	-
ಬಂಡವಾಳಶಾಹಿ	-
ಮಧ್ಯಮ ವರ್ಗ	56
ಪುಟ್ಟ ಬಂಡವಾಳಶಾಹಿ	1

ಆದಾಯ -ವಾರ್ಷಿಕ

ಏನೂ ಇಲ್ಲ	38
5000ದವರೆಗೆ	33
5001-10000	68
10001-20000	38
20001-30000	17
30001-40000	15
40001-50000	6
50001ರ ಮೇಲೆ	16

ಪಕ್ಷಕ್ಕೆ ಸೇರಿದ ವರ್ಷ

1964ರ ಮೊದಲು	28
65-70	10
71-77	33
78-85	72
86ರ ನಂತರ	86

ಪಕ್ಷದಲ್ಲಿ ಸ್ಥಾನ

ರಾಜ್ಯ ಸಮಿತಿ	27
ಜಿಲ್ಲಾ ಸಮಿತಿ	81
ರೀಜನಲ್/ಪ್ರಾದೇಶಿಕ	20
ತಾಲ್ಲೂಕು/ನಗರ	20
ಶಾಖೆ	83

ಸಾಮೂಹಿಕ ಸಂಘಟನೆಯಲ್ಲಿ ಸ್ಥಾನ

ಅಖಿಲ ಭಾರತ	8
ರಾಜ್ಯ ಮಟ್ಟ	64
ಜಿಲ್ಲಾ/ತಾಲೂಕು/ಇತರೆ	112
ಏನೂ ಇಲ್ಲ	47

ಚುನಾಯಿತ ಸ್ಥಾನ

ಎಂ.ಎಲ್.ಎ.	1
ಕಾರ್ಪೊರೇಶನ್	ಇಲ್ಲ
ನಗರಸಭೆ/ಮುನಿಸಿಪಾಲಿಟಿ	3
ಪಂಚಾಯಿತಿ	16
ಏನೂ ಇಲ್ಲ	212

ಪಕ್ಷಕ್ಕೆ ಪ್ರವೇಶ ಯಾವ ರಂಗದಿಂದ

ಕಾರ್ಮಿಕ ರಂಗ	108
ಯುವರಂಗ	28
ಸಾಂಸ್ಕೃತಿಕ ರಂಗ	13
ಕಿಸಾನ್ ರಂಗ	20
ವಿದ್ಯಾರ್ಥಿ	49
ಕೃಷಿ ಕೂಲಿಕಾರರು	3
ಮಹಿಳಾ	4
ಇತರೆ	5
ನೇರವಾಗಿ	1

ಜೈಲುವಾಸ

1ವರ್ಷಕ್ಕೆ ಮೇಲ್ಪಟ್ಟು	6
1ತಿಂಗಳಿಂದ 12 ತಿಂಗಳು	10
1 ವಾರದಿಂದ 4 ವಾರ	36
1 ಗಂಟೆಯಿಂದ 6 ದಿನ	46
ಇಲ್ಲಾ	133
ಅತೀ ಹೆಚ್ಚು ಕಾಂ.ಎನ್.ಕೆ.ಉಪಾಧ್ಯಾಯ - 7 ವರ್ಷ	

ಭೂಗತ ಜೀವನ

1 ವರ್ಷಕ್ಕೆ ಮೇಲ್ಪಟ್ಟು	4
1 ತಿಂಗಳಿಂದ 1 ವರ್ಷ	7
ತಿಂಗಳೊಳಗೆ	9
ಇಲ್ಲಾ	211
ಪೂರ್ಣ ಕಾಲದ ಕಾರ್ಯಕರ್ತರು	**84**

ಕೆಲಸ ಮಾಡುವ ರಂಗ

ಪಕ್ಷದ ಸಂಘಟನೆ	15
ಟ್ರೇಡ್ ಯೂನಿಯನ್	57
ಕಿಸಾನ್ ಸಭಾ	19
ಕೃಷಿ ಕೂಲಿಕಾರ	6
ಮಧ್ಯಮ ನೌಕರ	4
ವಿದ್ಯಾರ್ಥಿ	12
ಯುವಕ	22
ಮಹಿಳಾ	3
ಸಾಂಸ್ಕೃತಿಕ	2
ಇತರ	8
ಒಂದಕ್ಕಿಂತ ಹೆಚ್ಚು ರಂಗ	83

ಪಕ್ಷದ ರಾಜ್ಯ ಸಮ್ಮೇಳನಗಳಲ್ಲಿ ಭಾಗವಹಿಸಿದ್ದವರು

11 ಮತ್ತು ಹೆಚ್ಚು	8
6 ರಿಂದ 10	17
5	14
4	15
3	32
2	37
1	104

ಎಲ್ಲಾ ಸಮ್ಮೇಳನಗಳಲ್ಲಿ ಭಾಗವಹಿಸಿದ್ದವರು ಕಾಂ.ಸೂರಿ, ಕಾಂ.ಎನ್.ಕೆ.

ಯಾವ ಗುಂಪಿಗೆ ಸೇರಿದ್ದು

ಎಸ್.ಸಿ.	22
ಎಸ್.ಟಿ.	10
ಬಿ.ಸಿ.	32
ಅಲ್ಪಸಂಖ್ಯಾತ	28
ಇತರೆ	139

15ನೇ ಮಹಾಧಿವೇಶನಕ್ಕೆ ರಾಜ್ಯದ ಪ್ರತಿನಿಧಿಗಳು

ತಿದ್ದುಪಡಿ

ಹಿಂದಿನ ಸಂಚಿಕೆಯಲ್ಲಿ(ಪುಟ 8 ರಲ್ಲಿ) 15ನೇ ರಾಜ್ಯ ಸಮ್ಮೇಳನದಲ್ಲಿ ಚಂಡೀಗಢದಲ್ಲಿ ನಡೆಯುವ ಮಹಾಧಿವೇಶನದಲ್ಲಿ ರಾಜ್ಯದ ಪ್ರತಿನಿಧಿಗಳ ಪಟ್ಟಿಯಲ್ಲಿ ಕಾಂ. ನಿತ್ಯಾನಂದಸ್ವಾಮಿಯವರ ಹೆಸರು ಬಿಟ್ಟು ಹೋಗಿದೆ. ಇದಕ್ಕಾಗಿ ಕ್ಷಮೆ ಕೋರುತ್ತೇವೆ. ಕರ್ನಾಟಕದಿಂದ ಒಟ್ಟು 8 ಪ್ರತಿನಿಧಿಗಳು ಹಾಗೂ 2 ವೀಕ್ಷಕರು 15ನೇ ಮಹಾಧಿವೇಶನದಲ್ಲಿ ಭಾಗವಹಿಸುತ್ತಾರೆ.

ಐಕ್ಯರಂಗ

ಪಂಚಾಯತೀ ರಾಜ್ಯ

ವಿಶೇಷ ಲೇಖನ

ಪಶ್ಚಿಮ ಬಂಗಾಳದಲ್ಲಿ ಎಡರಂಗ ನೇತೃತ್ವದಲ್ಲಿ

ಪಂಚಾಯತೀ ರಾಜ್ಯ ನಿಜವಾಗಿಯೂ ಜನರ ರಾಜ್ಯವಾದದ್ದು ಹೇಗೆ?

ಪಂಚಾಯತಿ ರಾಜ್ಯ, ವಿಕೇಂದ್ರೀಕೃತ ರಾಜಕೀಯ ಅಧಿಕಾರ, ಕೆಳಹಂತದ ಆಡಳಿತದಲ್ಲಿ ಜನರ ಪಾತ್ರದ ಬಗ್ಗೆ ಎಲ್ಲಾ ಬಂಡವಾಳಶಾಹಿ ರಾಜಕೀಯ ಪಕ್ಷಗಳು ಅತಿರಂಜಿತವಾದ ಹೇಳಿಕೆ, ಭಾಷಣ ಮಾಡುತ್ತಿರುವಾಗಲೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕಳೆದ ಹದಿನೆಂಟು ವರ್ಷಗಳಿಂದ ಮೂರು ಹಂತದ ಪಂಚಾಯತಿ ಪದ್ಧತಿಯನ್ನು ಜಾರಿಗೊಳಿಸಿದೆ. ಇದು ಅದರ ಅನುಭವದ ಕೆಲವು ಮುಖ್ಯಾಂಶಗಳನ್ನು ಕಾಂ. ಚಂದ್ರಶೇಖರ ಬಾಳೆ ಈ ಲೇಖನದಲ್ಲಿ ಕೊಟ್ಟಿದ್ದಾರೆ.

-ಚಂದ್ರಶೇಖರ್ ಬಾಳೆ

1965ರಿಂದ 1977ರ ಕಾಲ ಘಟ್ಟದ ಹನ್ನೆರಡು ವರ್ಷಗಳು ಪಶ್ಚಿಮ ಬಂಗಾಳದ ರೈತರು, ಭೂ ರಹಿತ ಕೃಷಿ ಕೂಲಿಕಾರರ, (ಭೂಮಾಲೀಕರ ಭೂಮಿತಿಯನ್ನು ಪಾಲಿಗೆ ಮಾಡುವ) ಪಾಲು ಬೆಳೆಗಾರರ ವಿರೋಚಿತ ಹೋರಾಟದ ವರ್ಷಗಳೆಂದರೆ ತಪ್ಪಾಗಲಿಕ್ಕಿಲ್ಲ, ಗ್ರಾಮೀಣ ದುಡಿಯುವ ಜನತೆಯ ವರ್ಗ ಹೋರಾಟ ನಗರದ ಕಾರ್ಮಿಕ ವರ್ಗದ ಬೆಂಬಲ ಹಾಗೂ ಐಕ್ಯ ಹೋರಾಟಗಳಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಿಂದಾಗಿ, ಬಹುಸಂಖ್ಯಾತ ದುಡಿಯುವ ಜನತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ದುಡಿಯುವ ವರ್ಗದ ಪಕ್ಷವೆಂದು ಗುರುತಿಸಿ 1977ರಲ್ಲಿ ಎಡರಂಗ ಸರ್ಕಾರವನ್ನು ಆಡಳಿತಕ್ಕೆ ತಂದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಎಡರಂಗ ಆಡಳಿತಕ್ಕೆ ಬಂದ ಕಾಲಘಟ್ಟದಲ್ಲಿ ಗ್ರಾಮೀಣ ದುಡಿಯುವ ಜನರ ಹೋರಾಟದಿಂದ ವ್ಯಗ್ರರಾದ ಭೂಮಾಲೀಕರು, ಪಾಲು ಬೆಳೆಗಾರರಿಂದ ಭೂಮಿಯನ್ನು ಕಿತ್ತುಕೊಳ್ಳುವಲ್ಲಿ ಮುಂಚೂಣಿಯಲ್ಲಿದ್ದ ಭೂಮಾಲೀಕ, ಪಾಳೇಗಾರಿಕೆಯ ಹಿಡಿತವನ್ನು ಛಿದ್ರಗೊಳಿಸುತ್ತಿದ್ದ ಜನರ ಹೊಸ ವರ್ಗ ಜಾಗೃತಿಯನ್ನು ದಮನ ಮಾಡಲು ಕಾಂಗ್ರೆಸ್ ಸೇರಿದಂತೆ ಎಲ್ಲಾ ಬಂಡವಾಳಶಾಹಿ ರಾಜಕೀಯ ಪಕ್ಷಗಳ-ಶಕ್ತಿಗಳ ಹಿಂದಿರುವ ಭೂಮಾಲೀಕರು ಗೂಂಡಾ ಪಡೆಗಳನ್ನೂ, ಪೋಲೀಸರನ್ನು ಬಳಸಿ ಹಳ್ಳಿ ಹಳ್ಳಿಗಳಲ್ಲಿ ದೌರ್ಜನ್ಯ ಮಾಡುತ್ತಿದ್ದ ಕಾಲಘಟ್ಟವಾಗಿತ್ತು.

> *1977ರಲ್ಲಿ ಎಡರಂಗ ಅಧಿಕಾರಕ್ಕೆ ಬಂದಾಗ ಗ್ರಾಮೀಣ ಪ್ರದೇಶದಲ್ಲಿ ಆದರ ಮುಂದಿದ್ದ ಸಾಮಾಜಿಕ, ಆರ್ಥಿಕ, ರಾಜಕೀಯ ಸವಾಲನ್ನು ಸ್ವೀಕರಿಸಿ ಆದಕ್ಕೆ ಉತ್ತಮವಾಗಿ ಪಂಚಾಯತೀ ರಾಜ್ಯ ಪದ್ಧತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿತು*

ಗ್ರಾಮೀಣಾಭಿವೃದ್ಧಿಗಾಗಿ ರಚಿಸಲಾದ ಎಲ್ಲಾ ಸಂಸ್ಥೆಗಳು, ಪಂಚಾಯತಿ, ಸಹಕಾರಿ ಸಂಘ, ಇತರ ಸಂಸ್ಥೆಗಳು ಭೂಮಾ ಲೀಕರ ಕೈಯಲ್ಲಿ ಹಾಗೂ ಭೂಮಾಲೀಕರ ಮೂಗಿನ ನೇರಕ್ಕೆ ಕೆಲಸ ಮಾಡುವ ನೌಕರರ ಕೈಯಲ್ಲಿದ್ದು, ಬಹುಸಂಖ್ಯಾತ ದುಡಿಯುವ ರೈತರು, ಕೃಷಿ ಕೂಲಿಕಾರರು, ಪ್ರತಿಯೊಂದಕ್ಕೂ ಭೂಮಾಲೀಕರ ಮುಂದೆ ತಲೆ ಬಗ್ಗಿಸಿ ಕೈ ಚಾಚುವ ಅಸಹಾಯಕ ಪರಿಸ್ಥಿತಿಯಿತ್ತು.

ರಾಜ್ಯದ ನೀರಾವರಿ, ವಿದ್ಯುತ್, ಭೂ ಸುಧಾರಣೆ, ವಸತಿ, ಗೃಹಕೈಗಾರಿಕೆ, ಆಹಾರ ಉತ್ಪಾದನೆ, ಗ್ರಾಮೀಣ ಶಿಕ್ಷಣ ಸೇರಿದಂತೆ ತೀರಾ ಹಿಂದುಳಿದಿದ್ದು, ತೀರಾ ಹೀನಾಯವಾದ ಬಡತನ ಹಾಗೂ ಗ್ರಾಮೀಣ ನಿರುದ್ಯೋಗ ಮು ಖಕ್ಕೆ ರಾಚುವಂತಹ ಕಾಲಘಟ್ಟದಲ್ಲಿ, ರಾಜ್ಯದ ದುಡಿಯುವ ಜನತೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದಲ್ಲಿ ವಿಶ್ವಾಸವನ್ನಿಟ್ಟು, ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಪಡೆಯುವ ಭರವಸೆಯನ್ನು ಚುನಾವಣೆ ಮೂಲಕ ತೋರಿದ್ದರು.

ಇಂತಹ ಗುರುತರವಾದ, ಸಾಮಾಜಿಕ, ಆರ್ಥಿಕ, ರಾಜಕೀಯ ಜವಾಬ್ದಾರಿ ಎಡರಂಗ ಸರಕಾರದ ಮುಂದಿರುವಾಗಲೇ, ಸವಾಲಾಗಿ ಅದನ್ನು ಸ್ವೀಕರಿಸಿ ಅದನ್ನು ಎದುರಿಸಲು ಪಂಚಾಯತಿ ರಾಜ್ಯ ಪದ್ಧತಿಯನ್ನು ಕಟ್ಟು ನಿಟ್ಟಾಗಿ ಜಾರಿಗೆ ತರಲು, ಪಂಚಾಯಿತಿಯ ಎಲ್ಲಾ ಹಂತಗಳಲ್ಲಿ ದುಡಿಯುವ ಜನತೆಯನ್ನು ಪಾಲುಗೊಳ್ಳುವಂತೆ ಮಾಡುವ ಮುಖಾಂತರ ಅಸಹಾಯಕರಾಗಿದ್ದ ಭೂಮಾಲೀಕರ ಕರುಣೆಯಲ್ಲಿ ಬದುಕುತ್ತಿದ್ದ ಜನತೆಗೆ ತಲೆ ಎತ್ತಿ, ಎದೆ ಸೆಟೆದು ನಿಂತು ತನ್ನ ಕಷ್ಟಗಳಿಗೆ ತಾನೇ ಪರಿಹಾರವನ್ನು ಸೂಚಿಸಲು, ಅದಕ್ಕೆ ಬೇಕಾದ ಸಂಪನ್ಮೂಲ ರಾಜ್ಯ ಸರಕಾರದಿಂದ ಪಡೆದು ತಾನೇ ಜಾರಿಗೊಳಿಸುವ ಅವಕಾಶವನ್ನು ಪಡೆಯಲು ಸಾಧ್ಯ ವಾಯಿತು, ಈ ಬಡ ದುಡಿಮೆಗಾರರು ಈಗ ಸ್ವತಂತ್ರ ಜೀವಿಗಳಾಗಿ ತಮ್ಮ ಕಾಲ ಮೇಲೆ ನಿಂತು, ತನ್ನ ಉತ್ಪಾದನೆಯನ್ನು ಹೆಚ್ಚಿಸಿ, ರಾಜ್ಯದ ಉತ್ಪಾದನೆಯನ್ನು, ರಾಷ್ಟ್ರದ ಉತ್ಪಾದನೆಯನ್ನು ಹೆಚ್ಚಿಸುವ ಮುಖಾಂತರ ಇಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಪಶ್ಚಿಮ ಬಂಗಾಳದ ಪಂಚಾಯತಿ ರಾಜ್ಯ ಯಶಸ್ವಿಗೊಳಿಸುವಂತಾಗಿದೆ. ಈಯಶಸ್ಸನ್ನು ಎಲ್ಲರೂ ಚರ್ಚಿಸುವಂತಾಗಿದೆ.

ಪಶ್ಚಿಮ ಬಂಗಾಳ ಪಂಚಾಯತಿಗಳಿಂದ ಮಾತ್ರವೇ ಇದು ಹೇಗೆ ಸಾಧ್ಯವಾಯಿತು

1978ರಲ್ಲಿ ಮಂಡಲ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತಿಗಳಿಗೆ ಚುನಾವಣೆಗಳು ನಡೆದವು. ಹಿಂದಿನ ಹದಿನೈದು ವರ್ಷಗಳಿಂದ ಕಾಂಗ್ರೆಸ್ ಪಕ್ಷ ಪಂಚಾಯತಿ ಚುನಾವಣೆಗಳನ್ನು ನಡೆಸಿರಲಿಲ್ಲವೆಂಬುದನ್ನು ಇಲ್ಲಿ ಗಮನಿಸಬೇಕಾಗಿದೆ.

ಈ ಚುನಾವಣೆಯಲ್ಲಿ ದುಡಿಯುವ ಜನ ಸಾಮಾನ್ಯರು ಸಿಪಿಐ(ಎಂ)ನ ಮತ್ತು ಭೂಮಾಲೀಕ, ಶ್ರೀಮಂತ ರೈತರು, ಗೂಂಡಾ ಶಕ್ತಿಗಳು ಕಾಂಗ್ರೆಸ್ ಹಾಗೂ ಇತರ ಬಂಡವಾಳಶಾಹಿ ಪಕ್ಷಗಳ ಅಭ್ಯರ್ಥಿಗಳಾಗಿದ್ದರು. ಪಾಳೇಗಾರಿ ಶಕ್ತಿಗಳ ವಿರುದ್ಧ ಮೊದಲ ಬಾರಿಗೆ ತಲೆ ಎತ್ತಿ ಸ್ಪರ್ಧಿಸಲು ಸಿಕ್ಕ ಅವಕಾಶವನ್ನು ಬಳಸಿಕೊಂಡ ದುಡಿಯುವ ಜನತೆ ಭೂಮಾಲೀಕ ಬಂಡವಾ ಳಶಾಹಿ ರಾಜಕೀಯ ಅಭ್ಯರ್ಥಿಗಳನ್ನು ಧೂಳಿಪಟ ಮಾಡಿದರು. ಶೇ.70 ಭಾಗದ ಪಂಚಾಯತಿಗಳಲ್ಲಿ ಎಡರಂಗ ಗೆದ್ದು ಶೇ. 30ರಷ್ಟು ಸ್ಥಾನಗಳಲ್ಲಿ ಕಾಂಗ್ರೆಸ್ ಹಾಗೂ ಇತರ ಬಂಡವಾಳಶಾಹಿ ರಾಜಕೀಯ ಪಕ್ಷಗಳು ಗೆದ್ದು ಬಂದವು.

ಪ್ರತಿಯೊಂದು ಭೂಮಾಲೀಕರಿಗೆ ಡೊಗ್ಗು ಸಲಾಮು ಹೊಡೆಯಬೇಕಾಗಿದ್ದ ಕೃಷಿಕೂಲಿಕಾರ, ಬಡರೈತರೇ ಈಗ ಬಹುಸಂಖ್ಯೆಯ ಮಂಡಲ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷರಾದರು, ಅಟ್ಟಹಾಸದಿಂದ ಮೆರೆದಾಡುತ್ತಿದ್ದ ಭೂಮಾಲೀಕರು, ದುಡಿಯುವವರ ಜೋಪಡಿಗಳಿಗೆ ಬಂದು ಮಾತನಾಡುವ ರಾಜಕೀಯ ಪರಿವರ್ತನೆಯಾಯಿತು.

ಆದರೆ ಆರ್ಥಿಕ ಬಲವಿಲ್ಲದ ರಾಜಕೀಯ ಬಹಳಸಮಯ ನಿಲ್ಲಲಾರದು, ಕಾರಣ ಗ್ರಾಮೀಣ ದುಡಿಯುವವರ ಕೈಗೆಭೂಮಿ, ಕೆಲಸ, ಕೃಷಿಗೆ ಬೇಕಾದ ನೀರು, ವಿದ್ಯುತ್, ಸಾಲ ಇತರನಾಗ ರೀಕ ಸೌಲಭ್ಯಗಳನ್ನು ಒದಗಿಸುವಬೃಹತ್ ಯೋಜನೆಯನ್ನು ರೂಪಿಸಿ ಅದಕ್ಕೆ ಬೇಕಾದ ಸಂಪನ್ಮೂಲಗಳನ್ನು ಪಂಚಾಯತಿ ರಾಜ್ಯಕ್ಕೆ ಒದಗಿಸಲು ರಾಜ್ಯ ಸರ್ಕಾರ ತೀರ್ಮಾನಿಸಿತು.

ಈ ಬೃಹತ್ ಯೋಜನೆಯನ್ನು ಜಾರಿಗೆ ಹೇಗೆ ತರಲಾಯಿತು

ಮಂಡಲ ಪಂಚಾಯತಿಯ ಪ್ರತಿಯೊಂದು ಗ್ರಾಮದಲ್ಲಿ ಡಂಗುರ ಹಾಕಿ ಗ್ರಾಮ ಸಭೆಗಳನ್ನು ನಡೆಸಿ ಜನರ ಬೇಡಿಕೆಗಳನ್ನು ಸಂಗ್ರಹಿಸಲಾಯಿತು.

ಭೂರಹಿತರ ಸಂಖ್ಯೆ, ಹೆಸರು, ಕಾಮಗಾರಿಯ ಅವಶ್ಯಕತೆಯಿರುವವರ ಸಂಖ್ಯೆ, ಹೆಸರು, ವಸತಿ ರಹಿತರ ಸಂಖ್ಯೆ, ಹೆಸರು, ಭೂ ಹಿಡುವಳಿ, ಅಂದರೆ ಸಣ್ಣ, ಮಧ್ಯಮ ಶ್ರೀಮಂತ ರೈತರ ಸಂಖ್ಯೆ ಅವರಿಗಿರುವ ಭೂಮಿಯ ಮೊತ್ತ, ಈ ಭೂಮಿಯಲ್ಲಿ ಸಾಗುವಳಿ ಮಾಡುವವರ ಹೆಸರು(ಪಾಲು ದಾರರು ಅಥವಾ ಗೇಣಿದಾರರು) ಗ್ರಾಮದಲ್ಲಿರುವ ನೀರಾವರಿ, ಹಾಗೂ ಇತರ ಯೋಜನೆಗಳು, ಮುಂದೆ ಮಾಡಲು ಸಾಧ್ಯವಾದ ಯೋಜನೆ, ಅದಕ್ಕೆ ಗ್ರಾಮದಲ್ಲಿರುವ ಸಂಪನ್ಮೂಲಗಳೇನು, ಬಡ ಹಾಗೂ ಮಧ್ಯಮ ರೈತರಿಗೆ ಹಣದ ಅವಶ್ಯಕತೆ, ಈಗಿರುವ ಸಾಲ ಕೊಡುವ ಸಂಸ್ಥೆಗಳು ಹಾಗೂ ಖಾಸಗೀ ಲೇವಾದೇವಿಗಾರರ ವಿವರ ಸೇರಿದಂತೆ ಸಂಪೂರ್ಣ ಮಾಹಿತಿಗಳನ್ನು ಮಂಡಲ ಪಂಚಾಯತಿಯ ಸದಸ್ಯರು, ತಾಲೂಕಿನ ಅಧಿಕಾರಿಗಳ ಹಾಗೂ ಭೂ ಪಂಚಾಯ್ತಿ ಸದಸ್ಯರ ಸಮ್ಮುಖದಲ್ಲಿ ಅತೀ ಕಡಿಮೆ ಸಮಯದಲ್ಲಿ ಮಾಹಿತಿಗಳನ್ನು ಸಂಗ್ರಹಿಸಲಾಯಿತು. ಜೊತೆಗೆ ಗ್ರಾಮದಲ್ಲಿ ಸಂಗ್ರಹವಾಗಿ ತೆರಿಗೆಯ ವಿವರವನ್ನು ಪಡೆಯಲಾಯಿತು.

ತಾಲೂಕು ಪಂಚಾಯತ್

ಪಶ್ಚಿಮ ಬಂಗಾಳದಲ್ಲಿ ಮಂಡಲ ಪಂಚಾಯತ್‌ಗಳ ಮೇಲೆ ತಾಲೂಕ ಪಂಚಾಯತಿಗಳು, ಮಂಡಲಪಂಚಾಯತಿಯ ಅಧ್ಯಕ್ಷರುಗಳು ಸೇರಿ ತಾಲೂಕ ಪಂಚಾಯತಿಯನ್ನುರಚಿಸುತ್ತಾರೆ.

ತಾಲೂಕಾ ಪಂಚಾಯತಿಯ ಸದಸ್ಯರು (ಮಂಡಲಪಂಚಾ ಯತಿ ಅಧ್ಯಕ್ಷರು ಗ್ರಾಮಗಳಿಗೆ ಸಂಬಂಧಿಸಿದ ತಾಲೂಕಿನ ಎಲ್ಲಾ ಅಧಿಕಾರಿಗಳು ಸೇರಿ ತಾಲೂಕ ಯೋಜನಾ ಸಮಿ ತಿಯನ್ನು ರಚಿಸಿ, ಮಂಡಲ ಪಂಚಾಯತಿಯ ಮುಖಾಂತರ ತಾಲೂಕಿನಲ್ಲೂ ಗ್ರಾಮಗಳಿಂದ ಬಂದ ಮಾಹಿತಿಯನ್ನು ಸಂಪನ್ಮೂಲದ ವಿವರವನ್ನು ಮುಂದಿಟ್ಟುಕೊಂಡು ಎಂಟು ತಿಂಗಳ ಮುಂಚೆ ರಾಜ್ಯ ಸರ್ಕಾರ ಪ್ರ ಜಿಲ್ಲೆಗೆ ಕೊಡುವ ಹಣ, ಆ ಮುಖಾಂತರ ತಾಲೂಕುಗಳಿಗೆ ಕೊಡುವ ಒಟ್ಟು ಹಣವನ್ನು ಘೋಷಿಸಿತು. ಅದನ್ನು ಮುಂದಿಟ್ಟುಕೊಂಡು ತಾಲೂಕು ಪಂಚಾಯ ಯೋಜನಾ ಸಮಿತಿ ಗ್ರಾಮವಾರು ಕಾರ್ಯಕ್ರಮ ರೂಪಿಸಿ, ಅದನ್ನು ಜಿಲ್ಲಾ ಪಂಚಾಯತಿಯ ಪರವಾಗಿ ಪಡೆದು, ಮಂಡಲ ಪಂಚಾಯತಿಗಳಿಗೆ ಕಳಿಸುತ್ತದೆ.

ಮಂಡಲ ಪಂಚಾಯತಿಗಳು, ತಿರುಗಿ ಮತ್ತೆ ಗ್ರಾಮ ಸಭೆಗಳನ್ನು ಕರೆದು ಜನರ ಮುಂದೆ ಮಂಡಿಸುತ್ತಾರೆ. ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಅಗತ್ಯ ಬಿದ್ದರೆ ಕಾರ್ಯಕ್ರಮಗಳನ್ನು ಮಂಡಲ ಪಂಚಾಯತಿ ಸಭೆ ಕರೆದು ತಿದ್ದುಪಡಿ ಮಾಡಿ ಜಾರಿಗೆ ತರಲಾಗುತ್ತದೆ.

ಜಿಲ್ಲಾ ಪಂಚಾಯತಿ

ನೇರವಾಗಿ ಚುನಾಯಿತರಾದ ಜಿಲ್ಲಾ ಪಂಚಾಯತ್ ಸದಸ್ಯರು, ತಾಲೂಕ ಪಂಚಾಯತ್ ಅಧ್ಯಕ್ಷರು ಶಾಸಕರು, ಪಾರ್ಲಿಮೆಂಟ್ ಸದಸ್ಯರು ಸೇರಿದಂತೆ ಜಿಲ್ಲಾ ಪಂಚಾಯತ್ ರಚಿತವಾಗುತ್ತದೆ.

ಈ ಎಲ್ಲಾ ಸದಸ್ಯರನ್ನೊಳಗೊಂಡು, ಜಿಲ್ಲೆಯ ಗ್ರಾಮೀಣ ಇಲಾಖೆಗಳ ಜಿಲ್ಲಾ ಅಧಿಕಾರಿಗಳನ್ನೊಳಗೊಂಡು ಜಿಲ್ಲಾ ಯೋಜನಾ ಸಮಿತಿಯನ್ನು ರೂಪಿಸಲಾಗುತ್ತದೆ.

ತಾಲೂಕು ಯೋಜನಾ ಸಮಿತಿಯಿಂದ ಬಂದ ವರದಿಗಳನ್ನು (ತಾಂತ್ರಿ ತೊಂದರೆಗಳನ್ನು, ಇತರ ತಪ್ಪುಗಳನ್ನು ಬಿಟ್ಟು) ಮುಂದಿಟ್ಟೇ ಜಿಲ್ಲಾ ಯೋಜ ರೂಪಿಸಿ ರಾಜ್ಯ ಸರ್ಕಾರಕ್ಕೆ ಕಳಿಸಿ ಕೊಡಲಾಗುತ್ತದೆ. ಸಾಮಾನ್ಯವಾಗಿ ಬದಲಾವಣೆಯಿಲ್ಲದೆ ಈ ಯೋಜನೆಗಳನ್ನು ಮಂಜೂರಿ ಮಾಡಲಾಗುತ್ತದೆ.

ಹಣದ ದುರುಪಯೋಗವಾಗಿದೆಯೇ?

ಈ ಯೋಜನೆಗಳ ಜಾರಿಯಾಗುವುದು, ಹಣದ ದುರ್ಬಳಕೆಯಾಗದಂ ತಡೆಯುವುದು ಹೇಗೆ?

> *1978ರಲ್ಲಿ ನಡೆದ ಪಂಚಾಯತೀ ಚುನಾವಣೆಗಳಲ್ಲಿ ದುಡಿಯುವ ಜನ ಸಾಮಾನ್ಯರು ಸಿಪಿಐ(ಎಂ)ನ ಅಭ್ಯರ್ಥಿಗಳಾದರು. ಭೂಮಾಲಿಕ, ಶ್ರೀಮಂತ ರೈತರು, ಗೂಂಡಾ ಶಕ್ತಿಗಳು ಕಾಂಗ್ರೆಸ್ ಮತ್ತಿತರ ಬಂಡವಾಳಶಾಹೀ ಪಕ್ಷಗಳ ಅಭ್ಯರ್ಥಿಗಳಾದರು*

ಎಂಟು ತಿಂಗಳ ಮುಂಚೆ ಜಿಲ್ಲೆ ಗ್ರಾಮೀಣಾಭಿವೃದ್ಧಿಗಾಗಿ ಕೇಂದ್ರ ಸರಕಾ ರಾಜ್ಯ ಸರಕಾರದಿಂದ ಸಿಗುವ ಹಣ, ಜಿ ತಾಲೂಕು, ಗ್ರಾಮಗಳಿಂದ ಬರುವ ಸಂ ನ್ಮೂಲವನ್ನು ಸೇರಿಸಿ ಒಟ್ಟು ಮೊತ್ತವ ಬಿಡುಗಡೆ ಮಾಡುವುದಾಗಿ ಘೋಷಿಸಿ ನಾ ಕಂತುಗಳಲ್ಲಿ ಹಣವನ್ನು ಬಿಡುಗ ಮಾಡಲಾಗುತ್ತದೆ.

ಮೂರು ತಿಂಗಳಿಗೊಂದು ಕಂತಿನ ಹ ಹೊಸ ಬಾಬತ್ತಿಗಾಗಿ ಬಂದಿರುತ್ತದೋ ಅದರ ಪ್ರಗತಿಯನ್ನು ಗ್ರಾಮ ಸಭೆಗ ಚರ್ಚಿಸಿ ಹಣದ ಬಳಕೆ ದುರ್ಬಳಕೆಯನ್ನು ಚರ್ಚಿಸಿ ನಂತರವೇ ಎರಡನೇ ಕಂ ಹಾಗೆಯೇ ಮೂರು, ನಾಲ್ಕನೇ ಕಂತಿನ ಹಣವನ್ನು ಬಿಡುಗಡೆ ಮಾಡಲಾಗುತ್ತ

ಪಂಚಾಯತಿ ಸಂಸ್ಥೆಗೆ ಮತನೀಡಿದ ಮತದಾರರೇ ಪ್ರತಿಯೊಂದು ಕೆಲಸವ ಆಡಳಿತದ ಗುಣಮಟ್ಟವನ್ನು ವಿಮರ್ಶೆ ಮಾಡಲು ಅವಕಾಶ ಕೊಟ್ಟಿರು

ಜಿಲ್ಲಾ ಪಂಚಾಯತ್ -ತಾಲೂಕು ಪಂಚಾಯತ್ ಚುನಾವಣೆಗಳ ಮಹತ್ವ

ಪುಟ 1ರಿಂದ

ಚುಕ್ಕಾಣಿ ಹಿಡಿಯುವ ಅವಕಾಶ ನಮ್ಮ ಸಿಪಿಐ(ಎಂ) ಪಕ್ಷಕ್ಕೆ ಇಲ್ಲದಿದ್ದರೂ ಕೂಡಾ ಸಿಪಿಐ(ಎಂ) ಪಕ್ಷದಿಂದ ಆರಿಸಿ ಬರುವ ಅಭ್ಯರ್ಥಿಗಳು ಈ ಚುನಾಯಿತ ಘಟಕಗಳಲ್ಲಿ ನಡೆಯುವ ಅಧಿಕಾರದ ದುರುಪಯೋಗವನ್ನು ತಡೆಗಟ್ಟಲುಜನರ ಹಣ ಜನರ ಅಭಿವೃದ್ಧಿಗಾಗಿಯೇ ಖರ್ಚಾಗುವಂತೆ ನೋಡಿಕೊಳ್ಳಲು ಭ್ರಷ್ಟಾಚಾರಗಳನ್ನು ಬಯಲಿಗೆಳೆದು ಸ್ವಲ್ಪ ಮಟ್ಟಿಗಾದರೂ ನೀರು, ರಸ್ತೆ ಶಿಕ್ಷಣ, ಆರೋಗ್ಯ, ಮೊದಲಾದ ಅತ್ಯಾವಶ್ಯಕ ಅವಶ್ಯಕಗಳನ್ನು ಪೂರೈಸಲು ಸಾಧ್ಯವಾಗಬಹುದು.

ಜಿಲ್ಲಾ-ತಾಲೂಕು ಪಂಚಾಯತುಗಳ ಜವಾಬ್ದಾರಿ

ಬಹಳ ಮಹತ್ತರವಾದ ಜವಾಬ್ದಾರಿ ಜಿಲ್ಲಾ ಮತ್ತು ತಾಲೂಕ ಪಂಚಾಯತಿಗಳಿಗಿದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಅನುಸೂಚಿ 1 (58ನೇ ಪ್ರಕರಣ) ಅನುಸೂಚಿ 2(145ನೇ ಪ್ರಕರಣ) ಅನುಸೂಚಿ 3(184ನೇ ಪ್ರಕರಣಗಳನ್ನು) ಅಭ್ಯಾಸ ಮಾಡಿದರೆ ಜಿಲ್ಲಾ ಮತ್ತು ತಾಲೂಕ ಪಂಚಾಯತಗಳ ಮಹತ್ವ ಅವುಗಳ ಜವಾಬ್ದಾರಿಯನ್ನು ಮನಗಾಣಬಹುದು. ಉದಾ: ಕೃಷಿ ವಿಸ್ತರಣೆ, ತೋಟಗಾರಿಕೆ, ಭೂ ಸುಧಾರಣೆ, ಭೂ ಸಾರ ಸಂರಕ್ಷಣೆ, ಸಣ್ಣ ನೀರಾವರಿ, ಜಲಾನಯನ ಅಭಿವೃದ್ಧಿ, ಅಂತರ್ಜಲ ಮೂಲಗಳ ಅಭಿವೃದ್ಧಿ ಪಶುಸಂಗೋಪನೆ, ಖಾದಿ ಗ್ರಾಮ, ಗುಡಿ ಕೈಗಾರಿಕೆ, ಆಹಾರ, ನೀರಿನ ವ್ಯವಸ್ಥೆ, ರಸ್ತೆ, ಕಟ್ಟಡಗಳ ನಿರ್ಮಾಣ, ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ, ತಾಂತ್ರಿಕ ತರಬೇತಿ, ವೃತ್ತಿ ಶಿಕ್ಷಣ, ಮಾರುಕಟ್ಟೆಗಳು, ಜಾತ್ರೆಗಳು, ಆರೋಗ್ಯ, ಮತ್ತು ಕುಟುಂಬ ಕಲ್ಯಾಣ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ಸಾರ್ವಜನಿಕ ವಿತರಣೆ ವ್ಯವಸ್ಥೆ, ದುರ್ಬಲ ವರ್ಗಗಳ ಕಲ್ಯಾಣ, ವಿದ್ಯುತ್ ಪೂರೈಕೆ ಮುಂತಾದ ಜವಾಬ್ದಾರಿಗಳನ್ನು ಇವುಗಳಿಗೆ ವಹಿಸಿಕೊಡಲಾಗಿದೆ. ಉಚ್ಚ ಶಿಕ್ಷಣ, ದೊಡ್ಡ ಕೈಗಾರಿಕೆ, ದೊಡ್ಡ ದೊಡ್ಡ ನೀರಾವರಿ, ಮುಖ್ಯರಸ್ತೆಗಳನ್ನು ಬಿಟ್ಟು ಹೆಚ್ಚಿನ ಆಡಳಿತಾತ್ಮಕ ಜವಾಬ್ದಾರಿಗಳನ್ನೆಲ್ಲ ಜಿಲ್ಲಾ ಮತ್ತು ತಾಲೂಕ ಪಂಚಾಯತಿಗಳಿಗೆ ವಹಿಸಿಕೊಡಲಾಗಿದೆ. ಪ್ರತಿವರ್ಷ ಆಯಾ ಜಿಲ್ಲೆಯ, ಆಯಾ ತಾಲೂಕಿನ ಯೋಜನೆಗಳನ್ನು ರೂಪಿಸಿ ಅವುಗಳಿಗೆ ಬೇಕಾದ ಸಂಪನ್ಮೂಲ ಕ್ರೋಢಿಕರಿಸಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಚುನಾಯಿತ ಸಮಿತಿಗಳಿಗಿವೆ. ಹಾಗೆಯೇ ಇಡೀ ಜಿಲ್ಲೆಯಲ್ಲಿ ಹಬ್ಬಿರುವ ಗ್ರಾಮ ಪಂಚಾಯತಿಗಳ ಮೇಲ್ವಿಚಾರಣೆಯ ಜವಾಬ್ದಾರಿ ಕೂಡಾ ಜಿಲ್ಲಾ ಪಂಚಾಯತ್ ಗಳಿಗಿವೆ.

ಇಡೀ ಜಿಲ್ಲೆಯ ಜವಾಬ್ದಾರಿ ಹೊಂದಿರುವ ಜಿಲ್ಲಾ ಪಂಚಾಯತ್ ಮತ್ತು ತಾಲೂಕಗಳ ಜವಾಬ್ದಾರಿ ಪಡೆದಿರುವ ತಾಲೂಕ ಪಂಚಾಯತ್‌ಗಳಿಗೆ ಜನಪರವಾಗಿ ದುಡಿಯುವ ಒಲವು ಉಳ್ಳವರು, ನಿಸ್ವಾರ್ಥ ಸೇವೆ ಮಾಡುವ ಅಭಿಲಾಷೆ ಉಳ್ಳವರು, ಸಾರ್ವಜನಿಕ ಹಣ ದುರುಪಯೋಗವಾಗಬಾರದೆಂದು ನಂಬುವವರು, ಅಂಥದರ ವಿರುದ್ಧ ಹೋರಾಡುವ ಧೈರ್ಯ ಇದ್ದವರು ಚುನಾವಣೆಯಲ್ಲಿ ಗೆದ್ದು ಬಂದರೆ ಜಿಲ್ಲಾ ಮತ್ತು ತಾಲೂಕ ಪಂಚಾಯತಿಗಳು ನಿಜವಾಗಿಯೂ ಜನಪರವಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಸಾಧ್ಯವಾಗಬಹುದು. ಅಂಥ ವ್ಯಕ್ತಿಗಳನ್ನು ನೀವು ಮಾರ್ಕ್ಸ್ ವಾದಿ ಕಮ್ಯು ನಿಸ್ಟ್ ಪಾರ್ಟಿಯಲ್ಲಿಯೇ ಕಾಣಬಹುದಾಗಿ

ಸಮಸ್ಯೆಗಳು

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇ ತೃದ ಪಶ್ಚಿಮ ಬಂಗಾದ ಎಡರಂಗ ಸರಕ ಕಳೆದ 18 ವರ್ಷಗಳಿಂದ ಜಿಲ್ಲಾ ಪಂಚಾಯ ತಾಲೂಕ ಪಂಚಾಯತಿ ಗ್ರಾಮ ಪಂಚಾಯ ವ್ಯವಸ್ಥೆಯ ಮೂಲಕ ಭೂ ಮಸೂದೆಗನು ರವಾಗಿ ಭೂಮಿ ವಿತರಣೆ ಮಾಡುವ ಹ ಪಂಚಾಯತಿಗಳಿಗೆ ಒಪ್ಪಿಸಿದೆ. ಕರ್ನಾಟಕ ಸರ ಅಂಥ ಹಕ್ಕನ್ನು ನಮ್ಮ ಪಂಚಾಯತಿಗ ಕೊಟ್ಟಿಲ್ಲ, ಆ ಹಕ್ಕು ಇಲ್ಲದಿದ್ದರು ಕೂ ಮನೆಯಿಲ್ಲದವರಿಗೆ ನಿವೇಶನಗಳನ್ನು ಒ ಸುವ ಜವಾಬ್ದಾರಿಯನ್ನು ಕೊಡಲಾಗಿದೆ.

ಕರ್ನಾಟಕ ಪಂಚಾಯತ್ ವ್ಯವಸ್ಥೆಯ ಹಲವಾರು ಕುಂದು ಕೊರತೆಗಳಿವೆ; ಅವ ತಿದ್ದುಪಡಿ ಅಗತ್ಯ. ಹಾಗೆಯೇ ಗ್ರಾಮ ಪಂ ಯಿತಿಯಿಂದ ಹಿಡಿದು ಜಿಲ್ಲಾ ಪಂಚಾಯ ರೆಗೆ ಅಧಿಕಾರಿಗಳ ಹಿಡಿತ ಬಿಗಿಯಾಗಿದೆ. ಆ ಬಂದ ಕಮಿಟಿಗಳಿಗೆ ಹೆಚ್ಚಿನ ಅಧಿಕಾರ ಅ

ಭ್ರಷ್ಟ ಮಧ್ಯವರ್ತಿಗಳನ್ನು ತಡೆದು, ಜನರಿಗಾಗಿ ಮಂಜೂರಾದ ಹಣದ ಶೇ. 95 ಭಾಗ ಸದ್ಬಳಕೆಯಾಗಲು ಸಾಧ್ಯವಾಗಿದೆ.

ಕಾಮಗಾರಿಗೆ ಬಂದ ಹಣ, ಕೂಲಿಕಾರರ ಸಹಕಾರಿ ಸಂಘದಿಂದ ಜಾರಿಗೆ ತರಲಾಗುತ್ತದೆ.

ವಸತಿಗಾಗಿ ಬಂದ ಹಣ, ವಸತಿ ರಹಿತರಿಗೆ ಸಹಕಾರಿ ಸಂಘ ಮಾಡಿ ಅವರಿಗೆ ಕೂಲಿಕೊಟ್ಟು ಅವರಿಂದಲೇ ಕಟ್ಟಿಸಲಾಗುತ್ತದೆ.

ಪೋಲೀಸ್, ಬೃಹತ್ ನೀರಾವರಿ ಈ ಇಲಾಖೆಗಳನ್ನು ಬಿಟ್ಟು ಬೇರೆಲ್ಲಾ ಇಲಾಖೆಗಳ ಹಣವನ್ನು ಪಂಚಾಯತುಗಳಿಗೆ ನೀಡಿರುವುದರಿಂದ ಅಧಿಕಾರಿಗಳಿಗೆ ಕೇವಲ ಉಸ್ತುವಾರಿಯ ಅಧಿಕಾರ ಮಾತ್ರವಿದ್ದುದರಿಂದ ಜನರೆ ಜನರ ಪರವಾಗಿ ಅಧಿಕಾರವನ್ನು ಬಳಸುವಂತಾಯಿತು

ಸಾಮಾಜಿಕ ಆರೋಗ್ಯಕ್ಕಾಗಿ ಬಂದ ಹಣವನ್ನು ರೈತರಿಗೆ ನೇರವಾಗಿ ಕೊಟ್ಟು ಪ್ರತಿವರ್ಷದ ಪ್ರಗತಿಯನ್ನು ಪರಿಶೀಲಿಸಲಾಗುತ್ತದೆ.

ಈ ರೀತಿಯಲ್ಲಿ ಪೋಲೀಸ್ ಇಲಾಖೆ, ಬೃಹತ್ ನೀರಾವರಿಯೊಂದನ್ನು ಬಿಟ್ಟು ಪ್ರತಿಯೊಂದರ ಹಣವನ್ನು ಮಂಡಲ ಪಂಚಾಯತಿಗೆ ನೀಡಲಾಯಿತು. ಅಧಿಕಾರಿಗಳಿಗೆ ಉಸ್ತುವಾರಿ ಮಾಡುವ ಅಧಿಕಾರ ಬಿಟ್ಟರೆ, ಹಣದ ವ್ಯವಹಾರ ಮಾಡುವ ಅಧಿಕಾರವಿಲ್ಲ, ಇದರಿಂದ ಜನರೇ ಅಧಿಕಾರವನ್ನು ಬಳಸುವಂತಾಗಿದೆ.

ಇದರಿಂದಾಗಿ ಹೆಚ್ಚುವರಿ ಭೂಮಿಯಿದ್ದವರು ಸುಳ್ಳು ದಾಖಲೆಗಳಿಂದ, ಲಂಚ ಕೊಟ್ಟು ಭೂಮಿಯನ್ನು ಉಳಿಸಿಕೊಳ್ಳಲಾಗಲಿಲ್ಲ, ಕಾರಣ ಹನ್ನೆರಡು ಲಕ್ಷ ಐವತ್ತು ಸಾವಿರ ಎಕರೆ ಹೆಚ್ಚುವರಿ ಭೂಮಿಯನ್ನು ಭೂರಹಿತರಿಗೆ ಹಂಚಲು ಸಾಧ್ಯವಾಯಿತು.

ಪಾಲಿಗೆ ಮಾಡುವ 23ಲಕ್ಷ ಪಾಲುದಾರರಿಗೆ ಭೂಮಿಯನ್ನು ಕಾಯಂಗೊಳಿಸಲು ಸಾಧ್ಯವಾಯಿತು.

ಭೂಆದಾಯವಿಲ್ಲದ ಇನ್ನುಳಿದ ಭೂರಹಿತರನ್ನೂ ಹಾಗೂ ಕರಕುಶಲ ಕೆಲಸ ಮಾಡಿ ಜೀವನ ನಡೆಸಲು ಅಸಾಧ್ಯವೆಂದಿದ್ದವರನ್ನೂ ಗುರುತಿಸಿ, ಹೈನುಗಾರಿಕೆ, ರೇಷ್ಮೆ ಉತ್ಪಾದನೆ, ಮೀನು ಸಾಗಾಣಿಕೆಯ ಮುಖಾಂತರ ಶಾಶ್ವತ ಉದ್ಯೋಗವನ್ನು ಒದಗಿಸಿ ಅವರ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸಲಾಯಿತು.

ಎಲ್ಲಾ ರೈತ-ಕೃಷಿ ಕೂಲಿಕಾರರನ್ನು ಅಗತ್ಯವಾಗಿ ಸಹಕಾರಿ ಸಂಘಗಳಿಗೆ ಸದಸ್ಯರನ್ನಾಗಿ ನೊಂದಾಯಿಸಿ, ಅವಶ್ಯಕತೆಯ ಆಧಾರದಲ್ಲಿ ಬಡ್ಡಿಯಿಲ್ಲದ ಸಾಲವನ್ನು ನೀಡಲಾಯಿತು.(ಜೂನ್ ಒಂದರೊಳಗೆ ಪಾವತಿ ಮಾಡಲೇಬೇಕು-ಇಲ್ಲ ವಾದಲ್ಲಿ ಬಡ್ಡಿ ತೆರಬೇಕು) ಈ ಮುಖಾಂತರ ಭೂಮಾಲೀಕರ ಬಡ್ಡಿ ಲೇವಾದೇವಿಗಾರರನ್ನು ನಿರ್ಮೂಲನ ಮಾಡಲಾಯಿತು. ಆರ್ಥಿಕವಾಗಿ ಹಿಂದುಳಿದ ಬಡರೈತ, ಮಧ್ಯಮ ರೈತರಿಗಾಗಿಯೇ ಚಿಕ್ಕ ನೀರಾವರಿ, ಸಬ್ಸಿಡಿಯಲ್ಲಿ ವಿದ್ಯುತ್, ಸಾಲ, ಆಹಾರ ಧಾನ್ಯಗಳ ಉತ್ಪಾದನೆಗಾಗಿಯೇ ವಿಶೇಷ ಬೀಜಗಳ ಸಬ್ಸಿಡಿ ನೀಡಲಾಗಿ, ಇಂದು ಅತೀ ಹಿಂದುಳಿದ ರಾಜ್ಯವೆಂಬ ಹಣೆಪಟ್ಟಿಯಿಂದ ಪಶ್ಚಿಮ ಬಂಗಾಳ ಅತೀ ಮುಂದುವರಿದ ರಾಜ್ಯವಾಗಿ ವಿದ್ಯುತ್ಪಾದನೆಯಲ್ಲಿ, ನೀರಾವರಿ ಯೋಜನೆಯಲ್ಲಿ, ಆಹಾರ ಉತ್ಪಾದನೆಯಲ್ಲಿ ಇದರ ಪರಿಣಾಮವಾಗಿ ಕೃಷಿ ಆಧಾರಿತ ಸಣ್ಣ ಕೈಗಾರಿಕೆಯಲ್ಲಿ ರಾಷ್ಟ್ರದಲ್ಲಿಯೇ ಮೊದಲನೇ ಸ್ಥಾನಕ್ಕೇರಿದೆ.

ಈ ರೀತಿಯ ಮಂಡಲ ಪಂಚಾಯತಿ ಪದ್ಧತಿಯ ಮುಖಾಂತರ ಸಿಪಿಐ(ಎಂ) ನಾಯಕತ್ವದ ಎಡರಂಗ ಸರ್ಕಾರ ಬಂಡವಾಳಶಾಹಿ ಭೂಮಾಲೀಕ ಪದ್ಧತಿಯ ಕೇಂದ್ರ ಸರ್ಕಾರದ ಎಲ್ಲಾ ಅಡೆತಡೆಗಳ ಪರಿಧಿಯೊಳಗಡೆ ಕೂಡಾ ಭೂಮಾಲೀಕ ಒಡಿತದಲ್ಲಿದ್ದು ಗ್ರಾಮೀಣ ಪಶ್ಚಿಮ ಬಂಗಾಳವನ್ನು ದುಡಿಯುವ ರೈತರ ಕೈಯಲ್ಲಿ ಕೊಟ್ಟಿತು. ಅವರ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸಿ ಶೇ. 75 ಭಾಗದ ಭೂಮಿ ಬಡ ಹಾಗೂ ಮಧ್ಯಮ ರೈತರ ಕೈಯಲ್ಲಿ ಸೇರುವಂತೆ ಮಾಡಿತು. ಆ ಮುಖಾಂತರವೇ ಆಹಾರ ಧಾನ್ಯದ ಉತ್ಪಾದನೆಯಲ್ಲಿ ನೆಗೆತವನ್ನು ಸಾಧಿಸಿ ಗ್ರಾಮೀಣ ಬಡವರು ವಲಸೆ ಹೋಗದಂತೆ ತಡೆದು, ನಾಗರೀಕ ಸೌಲಭ್ಯಗಳನ್ನು ಕೊಡಲು ಎಲ್ಲಾ ಪ್ರಯತ್ನ ಮಾಡಿದ್ದರ ಪರಿಣಾಮವಾಗಿ, ರಾಷ್ಟ್ರದಲ್ಲಿ ಅಂತರಾಷ್ಟ್ರೀಯವಾಗಿಯೂ ಗಮನವನ್ನುಆಕರ್ಷಿಸಿದೆ.

ಮತ ನೀಡಿದ ಮತದಾರರೇ ಪ್ರತಿಯೊಂದು ಕೆಲಸವನ್ನು, ಆಡಳಿತದ ಗುಣಮಟ್ಟವನ್ನು ವಿಮರ್ಶೆ ಮಾಡಲು ಅವಕಾಶ ಕೊಟ್ಟದ್ದರಿಂದ ಕಾಂಟ್ರಾಕ್ಟರುಗಳು, ಮಧ್ಯವರ್ತಿಗಳ ಆಟ ನಡೆಯದೇ ಮಂಜೂರಾದ ಹಣದ ಶೇ. 95 ಭಾಗ ಸದ್ಬಳಕೆಯಾಯಿತು

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿಯೂ ಮುಂದಿನ ದಿನಗಳಲ್ಲಿ ಈ ದಾರಿಯನ್ನು ರಾಜ್ಯದಲ್ಲಿ ಜಾರಿಗೆ ತರುವಂತೆ ಒತ್ತಾಯಿಸಲು, ಇರುವ ಸಂಪನ್ಮೂಲಗಳನ್ನು ಜನತೆಗೆ ತಲುಪಿಸಲು ಸಿಪಿಐ(ಎಂ) ಅಭ್ಯರ್ಥಿಗಳನ್ನು ತಾಲೂಕು ಹಾಗೂ ಜಿಲ್ಲಾ ಪಂಚಾಯತಿಗೆ ಆಯ್ಕೆ ಮಾಡಲು ರಾಜ್ಯದ ಗ್ರಾಮೀಣ ಜನತೆ ಮುಂದಾಗಬೇಕಿದೆ.

ಇದಕ್ಕೆ ಹಲವಾರು ಕುಂದು ಕೊರತೆಗಳಿದ್ದರೂ ಕೂಡಾ ಈಗಿರುವ ಪಂಚಾಯತ್ ರಾಜ್ ಅಧಿನಿಯಮಗಳ ಪ್ರಕಾರ ಜನರ ಅವಶ್ಯಕತೆಗಳನ್ನು ಸ್ವಲ್ಪ ಮಟ್ಟಿಗಾದರೂ ಪೂರೈಸಲು ಸಾಧ್ಯವಿದೆ.

ಈ ಚುನಾವಣೆಯ ಸಮಯದಲ್ಲಿ ಮತ್ತೊಂದು ಮಹತ್ವದ ವಿಷಯವನ್ನು ಗಮನಿಸುವುದು ಅತ್ಯಗತ್ಯ. ರಾಜ್ಯ ಸರ್ಕಾರ ಹಣದ ಅಭಾವವನ್ನೆದುರಿಸುತ್ತಿದೆ. ಕೇಂದ್ರ ಸರ್ಕಾರ ಸಂಗ್ರಹಿಸುತ್ತಿರುವ ಸಂಪನ್ಮೂಲಗಳಿಂದ (ಅಬಕಾರಿ ಸುಂಕ, ಸಂಪತ್ತು ತೆರಿಗೆ, ಆದಾಯ ತೆರಿಗೆ ಮೊದಲಾದ) ರಾಜ್ಯಗಳಿಗೆ ಅವುಗಳ ಅವಶ್ಯಕತೆಗಳನ್ನು ಹೊಂದಿಕೊಂಡು ಅವುಗಳಿಗೆ ಸಲ್ಲತಕ್ಕ ಸಹಾಯ ಧನವನ್ನು ಕೊಡಲು ನಿರಾಕರಿಸುತ್ತಿದೆ, ಹೀಗೆ ಇನ್ನು ವಿವಿಧ ಜವಾಬ್ದಾರಿಗಳನ್ನು ನೀಗಿಕೊಳ್ಳಲು ರಾಜ್ಯ ಸರ್ಕಾರವೇ ಹಣದ ಕೊರತೆಯನ್ನು ಎದುರಿಸುತ್ತಿರುವಾಗ ಜಿಲ್ಲಾ, ತಾಲೂಕು ಪಂಚಾಯತಿಗಳಿಗೆ ನ್ಯಾಯಯುತವಾಗಿ ಸಲ್ಲತಕ್ಕ ಹಣದ ಸಹಾಯ ಲಭ್ಯವಾಗದಿರಬಹುದು. ಸಕಾಲದಲ್ಲಿ ಸರಕಾರದಿಂದ ಸಂಪನ್ಮೂಲ ದೊರೆಯದಿರಬಹುದು. ಅಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಜಿಲ್ಲಾ ತಾಲೂಕಿನ ಪಂಚಾಯತಿಗಳ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋಗುವುದು ಕಷ್ಟಕರವಾಗಬಹುದು, ಆಗ ಕೇಂದ್ರ ಸರ್ಕಾರದ ವಿರುದ್ಧ ರಾಜ್ಯ ಸರ್ಕಾರದ ವಿರುದ್ಧ ಹೋರಾಡಲು ನೈತಿಕ ಶಕ್ತಿ ಹೊಂದಿದ ಜಿಲ್ಲಾ ಮತ್ತು ತಾಲೂಕ ಪಂಚಾಯತಿ ಸದಸ್ಯರು ಆರಿಸಿ ಬರಬೇಕು.

ಬಂಧುಗಳೇ, ಜಿಲ್ಲಾ ಪಂಚಾಯತ್ ಮತ್ತು ತಾಲೂಕ ಪಂಚಾಯತ್‌ಗಳ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಿಕೊಂಡು ಹೋಗುವಂತೆ ಮಾಡಬೇಕಾದರೆ ಈ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಗಳು ಆರಿಸಿ ಬರುವುದು ಅತ್ಯಗತ್ಯ

ರೂಪಾಯಿಗೆ ನಡುಕ ಜ್ವರ

ಮೆಕ್ಸಿಕೋದಲ್ಲಿ ಪೆಸೊ ಕುಸಿದು ಅಲ್ಲಿಯ ಹೈರಾಣಾಗಿ ಹೋದದ್ದು ಈಗ ಇತ್ತೀಚಿನ ಕತೆ. ಅದರ ನಂತರ ಕೆಲವೇ ದಿನಗಳಲ್ಲಿ ಭಾರತದ ರೂಪಾಯಿಗೆ ನಡುಕ, ಜ್ವರ ಬಂದಿರುವಂತಿದೆ. ಉದಾರೀಕರಣದ ಹಿನ್ನೆಲೆಯಲ್ಲಿ ರೂಪಾಯಿಯನ್ನು ಪೂರ್ಣ ಪರಿವರ್ತಿತಗೊಳಿಸಿದ ಮೇಲೆ ರೂಪಾಯಿ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭದ್ರವಾಗಿತ್ತು. ಸ್ಥಿರವಾಗಿತ್ತು.

ಹೀಗೆಲ್ಲ ಎಂದರೆ ಏನು ಎಂದಿರಾ? ಬಹಳ ಸರಳವಾಗಿ ಹೇಳುವುದಾದರೆ ಬೇರೆ ದೇಶದಲ್ಲಿ ಬೇರೆ ಬೇರೆ ಹಣವಿರುತ್ತದೆ. ನಮ್ಮಲ್ಲಿ ರೂಪಾಯಿಯಿದೆ. ಅಮೇರಿಕದ ಹಣ ಡಾಲರ್. ಬ್ರಿಟನ್ನಿನದು ಪೌಂಡು. ಜಪಾನಿನದ್ದು ಯೆನ್ ಹೀಗೆ.

ಈ ಹಣಗಳ ಬೆಲೆಯೂ ಬೇರೆ ಬೇರೆ ಇರುತ್ತದೆ ಅಂದರೆ ನಮ್ಮ ರೂಪಾಯಿ ಒಂದು ಅಮೇರಿಕದ ಡಾಲರಿಗಾಗಲಿ ಬ್ರಿಟನ್ನಿನ ಪೌಂಡಿಗಾಗಲಿ ಅಥವಾ ಇನ್ನಾವುದೇ ದೇಶದ ಹಣಕ್ಕಾಗಲಿ ಸಮವಾಗಿರುವುದಿಲ್ಲ. ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಮ್ಮ ಆರ್ಥಿಕ ಎಷ್ಟು ತಾಕತ್ತಿನದ್ದು ಎನ್ನುವುದರ ಮೇಲೆ ರೂಪಾಯಿಯ ಬೆಲೆ ಅವಲಂಬಿಸಿರುತ್ತದೆ. ಇಂದಿನ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅತಿ ಬಲಶಾಲಿಯಾದದ್ದು ಅಮೇರಿಕದ ಡಾಲರ್. ಆದ್ದರಿಂದ ಹೆಚ್ಚಿನ ಜಾಗತಿಕ ವ್ಯಾಪಾರಗಳು ಈ ಡಾಲರ್‌ನಲ್ಲಿ ಆಗುತ್ತದೆ. ಇರಲಿ.

ಬಹಳ ದಿನಗಳ ಕಾಲ ಒಂದು ಅಮೇರಿಕನ್ ಡಾಲರ್‌ನ ರೂಪಾಯಿ ಬೆಲೆ 31 ಚಿಲ್ಲರೆ ಇತ್ತು. ಅಂದರೆ 31 ಚಿಲ್ಲರೆ ರೂಪಾಯಿಗಳಿಗೆ ಒಂದು ಡಾಲರ್ ಖರೀದಿಸಬಹುದಾಗಿತ್ತು. ಒಂದು ಡಾಲರ್ ಖರೀದಿಸಲು ಹೆಚ್ಚು ರೂಪಾಯಿಗಳು ಬೇಕಾದರೆ ಆಗ ಡಾಲರ್ ಬಲಿಷ್ಠ ಮತ್ತು ರೂಪಾಯಿ ದುರ್ಬಲ ಎನ್ನುತ್ತೇವೆ.

ಈಗ ಏನಾಗಿದೆ ಎನ್ನುವುದಕ್ಕೆ ಬರೋಣ. ಈಗ ಒಮ್ಮೆಲೇ ಒಂದು ಡಾಲರ್ ಕೊಳ್ಳಲು 32 ಚಿಲ್ಲರೆ ರೂಪಾಯಿ ಕೊಡಬೇಕಾಗಿ ಬಂದಿದೆ. ರೂಪಾಯಿ ದುರ್ಬಲವಾಗಿದೆ. ಇದರ ಅರ್ಥ ಏನೆಂದರೆ ಜಾಗತಿಕ ಮಾರುಕಟ್ಟೆಯಲ್ಲಿ ನಾವು ಬಹುತೇಕ ವಸ್ತುಗಳನ್ನು/ಸೇವೆಗಳನ್ನು ಡಾಲರ್ ನೀಡಿ ಕೊಳ್ಳಬೇಕಾಗುತ್ತದೆ. ಡಾಲರ್ ಅನ್ನು ರೂಪಾಯಿ ನೀಡಿ ಕೊಳ್ಳಬೇಕು. ಡಾಲರ್ ಬೆಲೆ ಏರಿತು ಎಂದರೆ ನಾವು ಡಾಲರ್ ನೀಡಿ ಕೊಳ್ಳುವ ಎಲ್ಲ ವಸ್ತುಗಳ/ಸೇವೆಗಳ ಬೆಲೆ ಏರಿದಂತೆಯೇ. ಈ ಬೆಲೆಗಳು ಡಾಲರ್ ಲೆಕ್ಕದಲ್ಲಿ ಏರಿರದೇ ಇರಬಹುದು. ಆದರೆ ರೂಪಾಯಿ ಲೆಕ್ಕದಲ್ಲಿ ಏರಿರುತ್ತದೆ.

ಮೆಕ್ಸಿಕೋದ ಪೈಸೋಗೆ ಆದದ್ದೂ ಇದೇ. ಆದ್ದರಿಂದಲೇ ರೂಪಾಯಿಯ ಪೂರ್ಣ ಪರಿವರ್ತನೆ ತಂದಾಗ ಇಂತಹ ಸಾಧ್ಯತೆಗಳ ಬಗ್ಗೆ ಎಚ್ಚರಿಕೆ ನೀಡಿದ್ದರು ನಮ್ಮ ಅರ್ಥಶಾಸ್ತ್ರಜ್ಞರು. ಭಾರತೀಯ ರಿಸರ್ವ್ ಬ್ಯಾಂಕ್ ಹೆಚ್ಚೆಚ್ಚು ಡಾಲರ್ ಗಳನ್ನು ಬಿಡುಗಡೆ ಮಾಡಿ (ಮಾರಾಟ ಮಾಡಿ) ರೂಪಾಯಿಯ ಮೌಲ್ಯವನ್ನು ಕಾಯ್ದುಕೊಂಡಿತ್ತು. ಈಗ ಅದು ರಿಸರ್ವ್ ಬ್ಯಾಂಕ್‌ನ ಕೈ ಮೀರಿ ಹೋಗಿರುವುದು ಸ್ಪಷ್ಟ.

ಉದಾರೀಕರಣದ ಪರಿಣಾಮವಾಗಿ ಇನ್ನೂ ಎಂತಹ ಕಷ್ಟದ ದಿನಗಳು ಬರಲಿವೆ ಅಲ್ಲವೇ?

ಮುಂಗಾರು ವಿಫಲವಾದರೆ ಬಿರುಗಾಳಿ

ಆಗಲೇ ಹಣದುಬ್ಬರ ಗಗನಕ್ಕೇರಿ ಕುಳಿತಿದೆ. ಬೆಲೆ ಏರಿಕೆಗೆ ಮಿತಿಯೇ ಇಲ್ಲವಾಗಿದೆ. ದೇಶದ ಬಡಜನ ದಿನದಿಂದ ದಿನಕ್ಕೆ ಬಡವರಾಗುತ್ತ ಹೋಗುತ್ತಿದ್ದಾರೆ. ಕೆಲವೇ ಕೆಲವು ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಿದ್ದಾರೆ. ಇದೂ ಎಂತಹ ದಿನಗಳಲ್ಲಿ? ಸತತವಾಗಿ ಏಳು ಮುಂಗಾರುಗಳು ಅನುಕೂಲಕರವಾಗಿ ಆಗಿದ್ದ ದಿನಗಳಲ್ಲಿ. ಈಗ ಮುಂಗಾರು ವಿಫಲವಾದರೆ ಏನಾಗಬಹುದು?

ಹಣದುಬ್ಬರದ ಪ್ರಮಾಣ ಶೇ. 25 ರಿಂದ 30ಕ್ಕೆ ಏರಬಹುದೆಂಬ ಎಚ್ಚರಿಕೆಯನ್ನು ಖ್ಯಾತ ಅರ್ಥಶಾಸ್ತ್ರಜ್ಞ ಡಾ। ಬಿ.ಬಿ.ಭಟ್ಟಾಚಾರ್ಯ ನೀಡಿದ್ದಾರೆ.

ದೆಹಲಿಯ ಆರ್ಥಿಕ ಬೆಳವಣಿಗೆ ಸಂಸ್ಥೆಯಲ್ಲಿ ವಿತ್ತೀಯ ಅರ್ಥಶಾಸ್ತ್ರಜ್ಞ ಪ್ರಾಧ್ಯಾಪಕರಾಗಿರುವ ಭಟ್ಟಾಚಾರ್ಯರು ಮುಂಗಡ ಪತ್ರಕ್ಕೆ ಪೂರ್ವಭಾವಿಯಾಗಿ ಪತ್ರಿಕೆಗಳಿಗೆ ನೀಡಿದ ಸಂದರ್ಶನದಲ್ಲಿ ಈ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆಗಳು ಕಡಿಮೆ ಇದ್ದರೂ ಹಣದುಬ್ಬರದ ಪ್ರಮಾಣ ಶೇ. 11ರಷ್ಟು ಇರುವುದು ತೀವ್ರ ಆತಂಕದ ವಿಷಯ ಎಂದಿದ್ದಾರೆ.

ಅತ್ಯಂತ ಅನುಕೂಲಕರ ಪರಿಸ್ಥಿತಿಯಲ್ಲಿ ಉದಾರೀಕರಣದ ಪರಿಣಾಮ ಇದಾದರೆ ಪ್ರತಿಕೂಲ ಪರಿಸ್ಥಿತಿಯಲ್ಲಿ ಏನಾಗಬಹುದು.

ವಿಷವನ್ನು ಸುಂದರ ಬಾಟಲಿಯಲ್ಲಿ ತುಂಬಿ ಕೊಡಿ

ವಿಷವನ್ನು ಸುಂದರ ಬಾಟಲಿಯಲ್ಲಿ ತುಂಬಿದರೆ ಹೇಗೆ? ವಿಷ ವಿಷವೇ ಅಲ್ಲವೆ? ಹೌದು ಆದರೂ ಅಂತಹ ಪ್ರಯತ್ನಗಳನ್ನು ಮಾಡುವ ಸನ್ನಾಹದಲ್ಲಿ ಕೆಲವರಿದ್ದಾರೆ ಯಾರು?

ಕೋಪನ್ ಹೇಗನ್‌ನಲ್ಲಿ ಸಾಮಾಜಿಕ ಅಭಿವೃದ್ಧಿಗಾಗಿ ಜಾಗತಿಕ ಶೃಂಗ ಸಭೆಯೊಂದು ನಡೆಯಲಿದೆ. ಇಲ್ಲಿ ಜಾಗತಿಕ ಅಭಿವೃದ್ಧಿಯ ಗುತ್ತಿಗೆ ಪಡೆದ ಗುತ್ತೇದಾರರಾದ ಐ.ಎಂ.ಎಫ್. ಮತ್ತು ವಿಶ್ವ ಬ್ಯಾಂಕ್‌ಗಳಿಗೂ ಅವರ ರಚನಾತ್ಮಕ ಹೊಂದಾಣಿಕೆಗೆ ಕಾರ್ಯಕ್ರಮವನ್ನು ಬದಲಾಯಿಸಬೇಕೆಂಬ ಕರೆ ನೀಡಲಾಗುತ್ತದಂತೆ.

ನಮ್ಮ ನರಸಿಂಹರಾಯರ ಸರ್ಕಾರ ಈ ಕರೆ ಕೊಡುವಲ್ಲಿ ಮುಂದೆ ಇರುವಂತೆ ಕಾಣುತ್ತದೆ ಏನು? ಬದಲಾವಣೆ ಕೇಳುತ್ತಿದ್ದಾರೆ ಎಂದು ಕೇಳಿದರೆ ಉತ್ತರ ಹೀಗಿದೆ. "ಸಾಮಾಜಿಕ ಬಡ ಮತ್ತು ದುರ್ಬಲ ವರ್ಗಗಳ ಜನರಿಗೆ ನೋವು ನೀಡಬಹುದಾದ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಬೇಡಿ"

ಸಾಮ್ರಾಜ್ಯಶಾಹಿಗಳ ಈ ಸಂಸ್ಥೆಗಳ ಉದ್ದೇಶವೇ ಅದು. ಬಡವರನ್ನು ಹಿಂದೆ ಶ್ರೀಮಂತರ ತೆಕ್ಕೆಗೆ ಸಂಪತ್ತನ್ನು ತಳ್ಳುವುದು. ದೇಶೀ ಶ್ರೀಮಂತರಿಂದ ತಮ್ಮ ಪಾಲು ಪಡೆಯುವುದು ಹೇಗೆಂದು ಸಾಮ್ರಾಜ್ಯಶಾಹಿಗಳಿಗೆ ಹೇಳಿಕೊಡುವುದು ಬೇಡ. ಹಾಗಿರುವಾಗ ಇಂತಹ ಬೇಡಿಕೆಗೆ ನಕಾರ ಸೂಚಿಸಲು ಅರ್ಥಶಾಸ್ತ್ರದಲ್ಲಿ ಹೊಸ ಹೊಸ ಪರಿಕಲ್ಪನೆಗಳನ್ನೇ ಅವರು ಸೃಷ್ಟಿಸುತ್ತಾರೆ. ಇರಲಿ ಆದರೆ ನರಸಿಂಹರಾಯರ ಸರ್ಕಾರಕ್ಕೆ ಏಕೀ ಕಾಳಜಿ?

ಆಂಧ್ರಪ್ರದೇಶ ಕರ್ನಾಟಕಗಳ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಸೋತಿದ್ದಾಗಿದೆ. ಇನ್ನೂ ಹಲವು ರಾಜ್ಯಗಳಲ್ಲಿ ಅದು ಸೋಲಲಿದೆ. ಮುಂದಿನ ಲೋಕಸಭಾ ಚುನಾವಣೆಗಳಿಗಾದರೂ ತಯಾರಿ ಮಾಡಿಕೊಳ್ಳಬೇಡವೇ?

ಬಡವರ ಬಗ್ಗೆ ಎಂತಹ ಕಾಳಜಿ ನರಸಿಂಹರಾಯರೇ!!

ಮೇಯುವವರದ್ದೇ ಬೇಲಿ

ದೇಶದ ರಕ್ಷಣೆ ದೇಶದ ಸಾರ್ವಭೌಮತೆಯ ರಕ್ಷಣೆಯ ಪ್ರಶ್ನೆ ಎಂಬುದನ್ನು ನೀವು ಒಪ್ಪುತ್ತೀರಾ? ಇಂತಹದ್ದನ್ನು ನಾವೇ ಮಾಡಿಕೊಳ್ಳಬೇಕು ಅಲ್ಲವೇ? ಉದಾರೀಕರಣದ ಸರ್ಕಾರ ಈಗ ದೇಶದ ರಕ್ಷಣಾ ವ್ಯವಸ್ಥೆಯನ್ನೇ ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡ ಹೊರಟಿದೆ.

ರಕ್ಷಣಾ ವ್ಯವಸ್ಥೆಯಲ್ಲಿ ಬಹುಮುಖ್ಯ ಇಲಾಖೆಯಾದ ಎಲೆಕ್ಟ್ರಾನಿಕ್ಸ್ ಇಲಾಖೆಯ ಮುಖ್ಯಸ್ಥ ಎನ್.ವಿಠಲ್ ಹೇಳುವಂತೆ ಭಾರತ ಸರ್ಕಾರ ಜಂಟಿ ಪ್ರಯತ್ನ ಮತ್ತು

ನರಸಿಂಹರಾವ್ ಸರಕಾರದ 45ನೇ ತಿಂಗಳಲ್ಲಿ



-ಜೆ.ಎಸ್. ಮಣಿ

ಶೇ. 100ರಷ್ಟು ಹೂಡಿಕೆಯ ಪ್ರಯತ್ನ ಮತ್ತು ರಕ್ಷಣಾ ವಲಯಕ್ಕೆ ಸಂಬಂಧಪಟ್ಟ ಉತ್ಪಾದನೆಯಲ್ಲಿ ಅನುವು ಮಾಡಿಕೊಡಲು ತಯಾರಿದೆಯಂತೆ.

ಸಾಮಾನ್ಯವಾಗಿ ದೇಶದ ರಕ್ಷಣಾ ವ್ಯವಸ್ಥೆ ಪೂರ್ಣವಾಗಿ ಸರ್ಕಾರದ ಹತೋಟಿಯಲ್ಲಿರುತ್ತದೆ ಅಷ್ಟೇ ಗುಟ್ಟಾಗಿಯೂ ಇರಬೇಕಾದದ್ದು ಅವಶ್ಯ. ಇಲ್ಲಿ ಲಾಭದ ಪ್ರಶ್ನೆ ಇರುವುದಿಲ್ಲ, ಯಾಕೆಂದರೆ ದೇಶದ ರಕ್ಷಣೆ ಅಷ್ಟು ಮುಖ್ಯ. ಲಾಭ ಪಿಪಾಸಿಗಳಾದ ಬಹುರಾಷ್ಟ್ರೀಯ ಕಂಪನಿಗಳ ಕೈಗೇ ಇಂತಹ ಸೂಕ್ಷ್ಮ ಕೆಲಸವೊಪ್ಪಿಸಿದರೆ ದೇಶದ ಮುಂದಿನ ಗತಿಯೇನು?

ಬಡವರ ಮುಳುಗಿಸಲು ನಮಗೆ ಆತಂಕವಾಗುತ್ತದೆ

ಬಡವರನ್ನು ಮುಳುಗಿಸುವವರೇ ಇಂತಹ ಮಾತನ್ನು ಆಡಿದರೆ ಏನಂತೀರಿ?

ಸಂಸತ್ ಸದನಗಳ ಅಧಿವೇಶನ ಪ್ರಾರಂಭವಾಗಿದೆ. ಕೇಂದ್ರ ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ರಾಷ್ಟ್ರಾಧ್ಯಕ್ಷರು ಮಾಡಿದ್ದಾರೆ. ಆ ಭಾಷಣದಲ್ಲಿ ಇಂತಹ ಮಾತುಗಳನ್ನು ಅವರು ಆಡಿದ್ದಾರೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ಬಗ್ಗೆ ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಈ ಭಾಷಣದ ಸಂದರ್ಭದಲ್ಲೇ ಹಣದುಬ್ಬರ ಇನ್ನೂ ಹೆಚ್ಚುತ್ತಲೇ ಇದೆ.

ಇದಲ್ಲದೆ ಹೀಗಾದುದರ ಬಗ್ಗೆ ಹಲವು ವಿವರಣೆಗಳು ಇತರೆ ಹಲವು ಬಣ್ಣದ ಮಾತುಗಳೂ ಇವೆ. ಹೊಸ ಆರ್ಥಿಕ ನೀತಿಯ ಸಮರ್ಥನೆ ಸಹ ಇದೆ. ಸಂಸತ್ತು ಇದರ ಮೇಲೆ ಚರ್ಚೆ ನಡೆಸುತ್ತದೆ ಆಗ ಈ ಮಾತುಗಳ ಇನ್ನೊಂದು ಮುಖವೂ ಬಯಲಿಗೆ ಬಂದೀತು.

ಬೆಲೆ ಪರಿಸ್ಥಿತಿಯ ಮೇಲೆ ತೀವ್ರ ನಿಗಾ ಇಡಲಾಗಿದೆಯಂತೆ ಆದರೂ ಬೆಲೆಗಳು ಏರುತ್ತಿವೆಯಲ್ಲ, ಬಹುಶಃ ಇದಕ್ಕೆ ಎರಡು ಅರ್ಥವಿದ್ದೀತು. ಸರ್ಕಾರ ಎಷ್ಟು ನಿಗಾ ವಹಿಸಿದರೂ ಬೆಲೆ ಏರಿಕೆ ಸಾಧ್ಯವಿಲ್ಲ, (ಅದು ಅನುಸರಿಸುವ ಆರ್ಥಿಕ ನೀತಿಯೇ ಅಂತಹದು) ಅಥವಾ ಸರ್ಕಾರ ಇಷ್ಟು ನಿಗಾ ವಹಿಸಿದ್ದರಿಂದ ಬೆಲೆ ಇಷ್ಟಕ್ಕೆ ನಿಂತಿದೆ. ಇಲ್ಲವಾದರೆ ಗಗನದಲ್ಲಿ ಇರುತ್ತಿದ್ದವು. (ಈಗಲೂ ಅವು ಇರುವುದು ಗಗನದಲ್ಲೇ).

ಹೇಗೇ ಇರಲಿ ಉದಾರೀಕರಣ ಮತ್ತು ಖಾಸಗೀಕರಣಗಳನ್ನೊಳಗೊಂಡ (ಇವೆಲ್ಲ ಜಾಗತೀಕರಣಕ್ಕಾಗಿ) ಆರ್ಥಿಕ ಸುಧಾರಣೆಗಳಿಂದ ಇಂತಹ ಪರಿಸ್ಥಿತಿ ಉದ್ಭವವಾಗಿದೆ ಎಂಬುದನ್ನು ನೇರ ಮಾತುಗಳಲ್ಲಿ ಅಲ್ಲವಾದರೂ ಪರೋಕ್ಷವಾಗಿ ಸರ್ಕಾರ ಒಪ್ಪಿಕೊಂಡಿದೆ. ಬಡವರ ಬಗೆಗೆ ಅದು ವಹಿಸುತ್ತಿರುವ ಕಾಳಜಿ ಸುಳ್ಳು ಕಾಳಜಿ ಎಂಬುದೂ ಈ ಮಾತುಗಳಿಂದ ಸ್ಪಷ್ಟ. ಆರ್ಥಿಕ ನೀತಿಯೇ ಬಡವರ ವಿರುದ್ಧವಾಗಿರುವಾಗ ನಾವು ಬಡವರಿಗೆ ನೋವಾಗದಂತೆ ಆರ್ಥಿಕ ಸುಧಾರಣೆ ಮಾಡುತ್ತೇವೆಂದರೆ ಅದಕ್ಕೆ ಅರ್ಥವೇನು?

ಹೊಸ ಆರ್ಥಿಕ ನೀತಿಗಳು ಎಲ್ಲರಿಗೂ ಫಲ ನೀಡುವಂತಾಗಬೇಕಂತೆ. ಈ ಮಾತನ್ನು ಹೀಗೆ ಅರ್ಥೈಸಬಹುದೆ. 'ಹೊಸ ಆರ್ಥಿಕ ನೀತಿಯಿಂದ ಬಡವರಿಗೆ ಇನ್ನೂ ಹೆಚ್ಚಿನ ಬಡತನ ಶ್ರೀಮಂತರಿಗೆ ಇನ್ನೂ ಹೆಚ್ಚಿನ ಶ್ರೀಮಂತಿಕೆ. ಎಲ್ಲರಿಗೂ ಹೊಸ ಆರ್ಥಿಕ ನೀತಿಯ ಫಲ ಹೇಗಿದೆ ಇದು?



ಚುನಾವಣೆ ಬಹಿಷ್ಕಾರ ಕರೆ ಘೀಸಿಂಗ್‌ಗೆ ತಿರುಗುಬಾಣ

ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಗುಡ್ಡಗಾಡು ಪ್ರದೇಶಗಳಲ್ಲಿ ಮಾರ್ಚ್ 26ರಂದು ಪಂಚಾಯಿತಿ ಚುನಾವಣೆ ನಡೆಯಲಿದೆ. ಡಾರ್ಜಿಲಿಂಗ್ ಗೂರ್ಖಾ ಗುಡ್ಡಗಾಡು ಮಂಡಳಿಯ ಅಧ್ಯಕ್ಷರೂ ಆಗಿರುವ ಗೂರ್ಖಾ ರಾಷ್ಟ್ರೀಯ ವಿಮೋಚನಾ ರಂಗದ (ಜಿ.ಎನ್.ಎಲ್.ಎಫ್.) ನಾಯಕ ಸುಭಾಶ್ ಘೀಸಿಂಗ್ ಚುನಾವಣೆಗಳನ್ನು ಬಹಿಷ್ಕರಿಸುವಂತೆ ಕರೆ ನೀಡಿದ್ದರು.

ಆದರೆ ಸ್ವತಃ ಜಿ.ಎನ್.ಎಲ್.ಎಫ್. ಮುಖಂಡರು ಹಾಗೂ ಕಾರ್ಯಕರ್ತರೇ ಮುಖಂಡನ ಈ ಕರೆಯನ್ನು ತಿರಸ್ಕರಿಸಿದ್ದಾರೆ. ಇದು ಘೀಸಿಂಗ್‌ಗೆ ನುಂಗಲಾರದ ತುತ್ತಾಗಿದೆ. ಅವರ ಅಧಿಕಾರದ ಕುರ್ಚಿ ಅಲುಗಾಡ ತೊಡಗಿದೆ.

ಡಾರ್ಜಿಲಿಂಗ್ ಬೆಟ್ಟ ಪ್ರದೇಶದ ಸುಮಾರು 400 ಗ್ರಾಮ ಪಂಚಾಯಿತಿ ಸ್ಥಾನಗಳಿಗಾಗಿ ಈಗಾಗಲೇ 3000ಕ್ಕೂ ಹೆಚ್ಚು ಅಭ್ಯರ್ಥಿಗಳು ನಾಮಪತ್ರಗಳನ್ನು ಸಲ್ಲಿಸಿಯಾಗಿದೆ.

ರಾಜ್ಯ ಸರಕಾರದೊಂದಿಗೆ ಕಾಲು ಕೆರೆದು ಜಗಳಮಾಡುವ ಘೀಸಿಂಗ್ ಪ್ರವೃತ್ತಿಯಿಂದಾಗಿ ಜಿಎನ್‌ಎಲ್‌ಎಫ್ ಬಗ್ಗೆ ಸಹಾನುಭೂತಿ ಹೊಂದಿದ್ದವರು ಕೂಡಾ ಆ ಸಂಸ್ಥೆಯನ್ನು ದೂರಮಾಡುತ್ತಿರುವುದು ಸ್ಪಷ್ಟವಾಗಿದೆ. ಘೀಸಿಂಗ್ ನೀತಿಯಿಂದಾಗಿ ಡಾರ್ಜಿಲಿಂಗ್ ಬೆಟ್ಟ ಪ್ರದೇಶದ ಅಭಿವೃದ್ಧಿ ಪ್ರಕ್ರಿಯೆ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ ಎನ್ನುವುದು ಜನರ ಭೀತಿಯಾಗಿದೆ.

ಅಭಿವೃದ್ಧಿಯನ್ನು ತೀವ್ರಗೊಳಿಸುವ ಉದ್ದೇಶದಿಂದ ಸ್ವಾಯುತ್ತ ಮಂಡಳಿ ಅಸ್ತಿತ್ವಕ್ಕೆ ಬಂದಿತ್ತು ಎನ್ನುವುದು ಇಲ್ಲಿ ಸ್ಮರಿಸಬಹುದು.

"ಸರ್ವಾಧಿಕಾರಿ ಧೋರಣೆ"

ಈ ನಡುವೆ, ಸುಭಾಷ್ ಘೀಸಿಂಗ್‌ರ ಸರ್ವಾಧಿಕಾರಿ ಧೋರಣೆ ಮತ್ತಷ್ಟು ಬಯಲಿಗೆ ಬಂದಿದೆ. ಭಿನ್ನಾಭಿಪ್ರಾಯ ವ್ಯಕ್ತಪಡಿಸಿ ಪಂಚಾಯಿತಿ ಚುನಾವಣೆ ಪಕ್ಷೇತರರಾಗಿ ಸ್ಪರ್ಧಿಸಿದ ಗುಡ್ಡಗಾಡು ಮಂಡಳಿಯ ಜಿ.ಎನ್.ಎಲ್.ಎಫ್. ಕೌನ್ಸಿಲರ್ ಚಿವೇನ್ ಷೇರ್ಪಾರನ್ನು ಘೀಸಿಂಗ್ ಪಕ್ಷದಿಂದ ಉಚ್ಚಾಟಿಸಿದ್ದಾರೆ.

ಘೀಸಿಂಗ್ ನಿಲುವನ್ನು ಒಪ್ಪದ ಮೂವರು ಜಿ.ಎನ್.ಎಲ್.ಎಫ್. ಕಾರ್ಯದರ್ಶಿಗಳನ್ನೂ ಅವರ ಸ್ಥಾನದಿಂದ ತೆಗೆದು ಹಾಕಲಾಗಿದೆ. ಅವರು ಕೂಡಾ ಬಂಡಾಯದ ಬಾವುಟವನ್ನು ಹಾರಿಸಲು ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದಾರೆ.

"ಟೊಳ್ಳುತನ ಬಯಲಿಗೆ"

ಘೀಸಿಂಗ್ ಅವರ ದುರಹಂಕಾರಕ್ಕೆ ಪೆಟ್ಟು ಕೊಡುವ ಇನ್ನೊಂದು ವಿದ್ಯಮಾನವೂ ಇತ್ತೀಚೆಗೆ ಸಂಭವಿಸಿದೆ.

ಡಾರ್ಜಿಲಿಂಗ್‌ನ ಸ್ಥಾನಮಾನದ ಬಗ್ಗೆ ಅವರು ಸುಪ್ರೀಂಕೋರ್ಟಿಗೆ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ತಿರಸ್ಕರಿಸಿದೆ. ಇದು ಅವರ ಆಟಾಟೋಪಗಳ ಟೊಳ್ಳುತನವನ್ನು ಬಯಲುಮಾಡಿದೆ.

ಡಾರ್ಜಿಲಿಂಗ್ ಬೆಟ್ಟ ಪ್ರದೇಶಗಳಲ್ಲಿ ಪಂಚಾಯಿತಿ ಚುನಾವಣೆಗಳು ಸುಗಮವಾಗಿ ನಡೆಯುವುದಕ್ಕೆ ಘೀಸಿಂಗ್ ನೇತೃತ್ವದ ಜಿಎನ್‌ಎಲ್‌ಎಫ್ ಅಡ್ಡಿ ಪಡಿಸುವ ಅಪಾಯವಿದೆ. ಅದನ್ನು ಎದುರಿಸುವ ವಿಶ್ವಾಸವನ್ನು ಅಲ್ಲಿನ ಪ್ರಜಾಸತ್ತಾತ್ಮಕ ಸಂಘಟನೆಗಳು ಹೊಂದಿವೆ.

ರಾಜಸ್ತಾನ: ಸ್ಥಳೀಯ ಸಂಸ್ಥೆ ಚುನಾವಣೆಗಳು

ಜನವರಿ 20, 30 ಮತ್ತು ಫೆಬ್ರುವರಿ ಮೂರರಂದು ಒಟ್ಟು ಮೂರು ಹಂತಗಳಲ್ಲಿ ರಾಜಸ್ತಾನದಲ್ಲಿ ಜಿಲ್ಲಾ ಪರಿಷತ್ ಮತ್ತು ಪಂಚಾಯತ್ ಸಮಿತಿಗಳಿಗೆ ಚುನಾವಣೆಗಳು ನಡೆದವು. ಈ ಚುನಾವಣೆಗಳಲ್ಲಿ ಬುಡಕಟ್ಟು ಪ್ರದೇಶಗಳಲ್ಲಿ ಸಿಪಿಐ(ಎಂ) ಗಮನಾರ್ಹ ಗೆಲುವನ್ನು ಸಾಧಿಸಿದೆ.

ಉದಯಪುರ ಜಿಲ್ಲೆಯ ಮಹದ್ ಮತ್ತು ಬಾರ್ಲಿ ಪಂಚಾಯತಿಗಳು ಸಿಪಿಐ(ಎಂ) ಪಾಲಾಗಿವೆ. ಮಹದ್, ಸದಾ, ಬಖಾರಿಯಾ, ಪನ್ರಾವಾ, ನಲ್ವಾ, ಗರನ್‌ದಾಸ್, ಅವೋರ್ಕ, ಅಮಿವಾರಾ, ಸುಲ್ತಾನಜಿ, ಖೈರವಾಡಾ, ಸಿನ್ವಾರ್ ಮತ್ತು ಇತರ ಎರಡು ಗ್ರಾಮಪಂಚಾಯಿತಿಗಳ ಸರಪಂಚ್ ಹುದ್ದೆಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಅಲ್ಲದೆ 120ಕ್ಕೂ ಹೆಚ್ಚು ಕಾರ್ಯಕರ್ತರು ನಾನಾ ಪಂಚಾಯಿತಿಗಳ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ.

ಜಿಲ್ಲಾ ಪರಿಷತ್ ಚುನಾವಣೆಗಳಲ್ಲಿ ಪಕ್ಷ ನಾಲ್ಕು ಹುರಿಯಾಳುಗಳನ್ನು ಕಣಕ್ಕೆ ಇಳಿಸಿತ್ತು. ಈ ಪೈಕಿ ಇಬ್ಬರು ಉಮೇದುವಾರು 5500ಕ್ಕೂ ಹೆಚ್ಚು ಮತಗಳನ್ನು ಪಡೆದು ದ್ವಿತೀಯ ಸ್ಥಾನ ಪಡೆದರು. ಇನ್ನಿಬ್ಬರು ಕೂಡಾ ಅಲ್ಪ ಮತಗಳ ಅಂತರದಿಂದ ಸೋತರು.

ಈ ಚುನಾವಣೆಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳೆರಡೂ ಒಂದೊಂದು ಸ್ಥಾನದಲ್ಲೂ 50 ಸಾವಿರದಿಂದ ಒಂದು ಲಕ್ಷ ರೂಪಾಯಿವರೆಗೆ ಖರ್ಚು ಮಾಡಿದವು. ನಿಷೇಧವಿದ್ದರೂ ಭಾರೀ ಪ್ರಮಾಣದಲ್ಲಿ ಮದ್ಯವನ್ನು ವಿತರಿಸಿತ್ತು ಎನ್ನುವುದು ಗಮನಿಸಬೇಕಾದ ಅಂಶ.

ಸಿಪಿಐ(ಎಂ) ಒಬ್ಬೊಬ್ಬ ಅಭ್ಯರ್ಥಿಗೆ ರೂ. 300ರಿಂದ 400ಕ್ಕಿಂತ ಹೆಚ್ಚಿಗೆ ಹಣವನ್ನು ಖರ್ಚು ಮಾಡಿರಲಿಲ್ಲ, ಕಾಲ್ನಡಿಗೆಯಲ್ಲೇ ತೆರಳಿ ಮತದಾರರನ್ನು ಸಂಪರ್ಕಿಸಿ ಪ್ರಚಾರ ನಡೆಸಲಾಯಿತು.

ಸಿಪಿಐ(ಎಂ) ಅಭ್ಯರ್ಥಿಗಳನ್ನುಸೋಲಿಸಲು ಹಲವೆಡೆ ಕಾಂಗ್ರೆ ಮತ್ತು ಬಿಜೆಪಿ ಕೈ ಜೋಡಿಸಿದ್ದವು. ಈ ಹಿನ್ನೆಲೆಯಲ್ಲಿ ನಮ್ಮ ಪಕ್ಷ ಸಾಧಿಸಿದ ವಿಜಯ ಗಮನಾರ್ಹವಾಗಿದೆ. ಬುಡಕಟ್ಟು ಮತದಾರರು ಕಾಂಗ್ರೆ-ಬಿಜೆಪಿಯ ತಂತ್ರವನ್ನು ಪ್ರತಿರೋಧಿಸಿದ್ದಾರೆ. ಈ ವಲಯದಲ್ಲಿ ಸಿಪಿಐ(ಎಂ) ಮೂರನೇ ಶಕ್ತಿಯಾಗಿ ಹೊರಹೊಮ್ಮಿದೆ.

ಮಹದ್, ಕೊಟ್ರಾ, ಬಾರ್ಲಿ, ಸದಾ ಮತ್ತಿತರ ಕಡೆ ಭಾರೀ ವಿಜಯೋತ್ಸವ ಸಮಾರಂಭಗಳನ್ನು ನಡೆಸಲಾಯಿತು. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹೆಚ್ಚು ಅಧಿಕಾರ, ಬುಡಕಟ್ಟು ಸ್ವಾಯತ್ತ ಸಂಸ್ಥೆಯ ರಚನೆ ಮತ್ತು ಭ್ರಷ್ಟಾಚಾರದ ದಮನಕ್ಕಾಗಿ ಹೋರಾಟ ನಡೆಸುವಂತೆ ನಾಯಕರು ಕಾರ್ಯಕರ್ತರಿಗೆ ಕರೆ ನೀಡಿದರು.

ಆಂಧ್ರ ಪ್ರದೇಶದಲ್ಲಿ ಪಂಚಾಯಿತಿ ಚುನಾವಣೆ

ಆಂಧ್ರಪ್ರದೇಶದಲ್ಲಿ ಕಳೆದ ವರ್ಷಾಂತ್ಯದಲ್ಲಿ ನಡೆದ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದ ತೆಲುಗುದೇಶಂ ಸರಕಾರ ಕೊಟ್ಟ ಮಾತಿನಂತೆ ಪಂಚಾಯಿತಿ ಚುನಾವಣೆಗಳನ್ನು ಘೋಷಿಸಿತ್ತು. ಮಂಡಲ ಮತ್ತು ಜಿಲ್ಲಾ ಪರಿಷತ್‌ಗಳಿಗೆ ಮೂರು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು ಮೊದಲ ಸುತ್ತಿನ ಮತದಾನ ಮಾರ್ಚ್ ಆರರಂದು ನಡೆಯಿತು.

ಕೆಲವು ಕಡೆ ಹಿಂಸಾಕೃತ್ಯಗಳು ನಡೆದುಆರು ಜನರು ಸತ್ತಿದ್ದಾರೆ. ಹಿಂಸಾಚಾರದ ಸಂಬಂಧದಲ್ಲಿ ಕಾಂಗ್ರೆಸ್(ಐ) ಸಂಸತ್ ಸದಸ್ಯ ಡಾ. ರಾಜಶೇಖರ ರೆಡ್ಡಿಯವರನ್ನು ಬಂಧಿಸಿ ಬಿಡುಗಡೆಮಾಡಲಾಗಿದೆ.

SFI ಸಮ್ಮೇಳನಗಳು

ಧಾರವಾಡ ಜಿಲ್ಲಾ ಸಮ್ಮೇಳನ

ಗ್ಯಾಟ್ ಡಂಕೆಲ್ ಒಪ್ಪಂದದಿಂದ ಹಾಗೂ ಐ.ಎಂ.ಎಫ್. ವಿಶ್ವ ಬ್ಯಾಂಕು ಷರತ್ತುಗಳ ಮುಕ್ತ ಮಾರುಕಟ್ಟೆ ಪರಿಣಾಮವಾಗಿ ವಿದೇಶಿ ಬಂಡವಾಳಶಾಹಿ ಬಹುರಾಷ್ಟ್ರೀಯ ಕಂಪನಿಗಳು ನಮ್ಮ ದೇಶದ ಸ್ವಾವಲಂಬನೆಯನ್ನು ಹಾಳು ಮಾಡುತ್ತಿದ್ದು ಇದರ ವಿರುದ್ಧ ವಿದ್ಯಾರ್ಥಿಗಳು ಸಂಘಟಿತರಾಗಿ ಎಲ್ಲಾ ಜನವಿಭಾಗಗಳನ್ನು ಸಂಘಟಿಸುತ್ತಾ ಹೋರಾಟ ಮಾಡುವುದು ಅವಶ್ಯವಾಗಿದೆ ಎಂದು ಜಿಲ್ಲಾ ಸಾಕ್ಷರದೀಪ ಸಮಿತಿಯ ಮಾಜಿ ಕಾರ್ಯದರ್ಶಿ ಸಿ.ಆರ್.ಭಟ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅವರು ನರಗುಂದದಲ್ಲಿ SFIನ 7ನೇ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಾಚಾರ್ಯ ಆರ್.ಡಿ.ಮೊಕಾಶಿ SFIದಂತಹ ಪ್ರಗತಿಪರ ಸಂಘಟನೆಯು ಕಲುಷಿತ ಸಾಮಾಜಿಕ ವಾತಾವರಣವನ್ನು ತಿಳಿಗೊಳಿಸಲು ಶ್ರಮಿಸಬೇಕೆಂದು ತಿಳಿಸಿದರು. ಇನ್ನೊರ್ವ ಅತಿಥಿಯಾಗಿ ಆಗಮಿಸಿದ್ದ ಬಂಡಾಯ ಸಾಹಿತಿ ಮಾರುತಿ ಭೋಸಲೆ ಅವರು ಮಾತನಾಡುತ್ತಾ SFI ಯಾವುದೇ ರಾಜಕೀಯ ಪಕ್ಷದ ಬಾಲಂಗೋಚಿಯಾಗಿರದೆ, ಸ್ವಾತಂತ್ರ್ಯ ವಿಚಾರ, ಕಾರ್ಯಕ್ರಮದ ಆಧಾರದ ಮೇಲೆ ಬೆಳೆಯಬೇಕೆಂದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ರಾಜ್ಯ SFI ಅಧ್ಯಕ್ಷರಾದ ಶಾಂತಾರಾಮ ನಾಯಕರು ಕೇಂದ್ರ ಸರಕಾರದ ಶಿಕ್ಷಣ ನೀತಿಯನ್ನು ಖಂಡಿಸಿದರು. ರಾಜ್ಯ ಕಾರ್ಮಿಕ ಮುಖಂಡರಾದ ನಿತ್ಯಾನಂದಸ್ವಾಮಿ, ಎಫ್.ಎಂ. ನದಾಫ್, SFIನ ಉ.ಕ. ಜಿಲ್ಲಾ ಕಾರ್ಯದರ್ಶಿ ಯುವರಾಜ್ ಕಂಬಾಳಿಮಠ್, SFIನ ಧಾರವಾಡ ಜಿಲ್ಲಾ ಕಾರ್ಯದರ್ಶಿ ಅಬ್ದುಲ್ ರಜಾಕ್ ಮುಲ್ಲಾ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಜಗದೀಶ ಕಗದಾಳ ಸ್ವಾಗತ ಮಾಡಿದರು. ಕುಮಾರಿ ನಿರ್ಮಲಾ ಚಂದ್ರತ್‌ನವರು ನಿರೂಪಣೆ ಮಾಡಿದು. ಕೊನೆಯಲ್ಲಿ ಅಶೋಕ ಲಿಂಗದಾಳ ವಂದಿಸಿದರು.

ಈ ಸಮ್ಮೇಳನದಲ್ಲಿ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಅಬ್ದುಲ್ ರಜಾಕ್ ಮುಲ್ಲಾ, ಉಪಾಧ್ಯಕ್ಷರಾಗಿ ಅಕ್ಕಮಹಾದೇವಿ, ಪಾಟೀಲ, ಅಶೋಕ ಲಿಂಗದಾಳ, ಕಾರ್ಯದರ್ಶಿಯಾಗಿ ಮಹೇಶ ಪತ್ತಾರ, ಸಹ ಕಾರ್ಯದರ್ಶಿಗಳಾಗಿ ಎಚ್.ಪಿ. ನವಲಳ್ಳಿ, ಹನಮಂತ ಜಮಾದಾರ ಮತ್ತು ೯ ಜನ ಸದಸ್ಯರು ಆಯ್ಕೆಯಾದರು.

ಚಿತ್ರದುರ್ಗ ಜಿಲ್ಲಾ ಸಮ್ಮೇಳನ

ಚಿತ್ರದುರ್ಗ: ಸಮೂಹ ಮಾಧ್ಯಮಗಳಿಂದ ಇಂದಿನ ಯುವ ಸಮೂಹದ ಮೇಲೆ ವಿಪರೀತ ಕೆಟ್ಟ ಪರಿಣಾಮ ಬೀರುತ್ತಿದೆ. ನಮ್ಮ ದೂರದರ್ಶನಗಳು ಪಾಶ್ಚಾತ್ಯರ ವಿಕೃತ ಸಂಸ್ಕೃತಿ ಮಾದರಿಗಳನ್ನು ವ್ಯಾಪಕವಾಗಿ ಪ್ರಚಾರ ಮಾಡುವ ವ್ಯಾಪಾರ ಕೇಂದ್ರಗಳಾಗಿವೆ. ಆದರೆ ನಮ್ಮ ವಿದ್ಯಾರ್ಥಿ ಯುವ ಸಮೂಹ ಈ ಪಾಶ್ಚಾತ್ಯಗಳ ಸಂಸ್ಕೃತಿಗೆ ಮಾರು ಹೋಗದೆ ಅಂತಹವುಗಳ ವಿರುದ್ಧ ಬಹಿರಂಗವಾಗಿ ಕಿಡಿಕಾರಬೇಕಾಗಿದೆ ಎಂದು ಖ್ಯಾತ ಬಂಡಾಯ ಸಾಹಿತಿ ಕವಿ ಸತೀಶ್ ಕುಲಕರ್ಣಿ ಕರೆ ನೀಡಿದರು.

ಎಸ್.ಎಫ್.ಐ.ನ 5ನೇ ಜಿಲ್ಲಾ ಸಮ್ಮೇಳನವನ್ನು ಫೆಬ್ರುವರಿ 12 ರಂದು ರೋಟರಿ ಭವನದಲ್ಲಿ ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಖ್ಯ ಅತಿಥಿಗಳಾಗಿದ್ದ ಎಸ್.ಎಫ್.ಐ.ನ ಕೇಂದ್ರ ಸಮಿತಿ ಮುಖಂಡರಾದ ಜಿ.ಸಿ. ಬಯ್ಯಾರೆಡ್ಡಿಯವರು ಮಾತನಾಡಿ ಸರ್ವರಿಗೂ ಶಿಕ್ಷಣ-ಉದ್ಯೋಗ ಸಿಗಬೇಕಾದ ಈ ದೇಶದಲ್ಲಿ ಸ್ವಾತಂತ್ರ್ಯ ಬಂದು 47 ವರ್ಷಗಳು ಕಳೆದರೂ ಕೋಟ್ಯಾಂತರ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇಂತಹ ಸಮಾಜದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಸರ್ವರಿಗೂ ಶಿಕ್ಷಣ ಉದ್ಯೋಗಕ್ಕಾಗಿ ತನ್ನ ಹೋರಾಟವನ್ನು ಇನ್ನೂ ತೀವ್ರಗೊಳಿಸಬೇಕಾಗಿದೆ ಎಂದು ಕರೆ ನೀಡಿದರು.

ಸಮಾರಂಭದಲ್ಲಿ ಮಾಜಿ ಎಸ್.ಎಫ್.ಐ. ಜಿಲ್ಲಾ ಸಂಚಾಲಕ ಮತ್ತು ಕೂಲಿಕಾರರ ಸಂಘಟನೆಯ ಮುಖಂಡ ಡಿ. ಮರಿಯಪ್ಪ, ನಗರ ಸಭಾ ಮಾಜಿ ಸದಸ್ಯ ಜಯಣ್ಣ ಜಾಧವ್ ಮಾತನಾಡಿದರು. ವೇದಿಕೆಯಲ್ಲಿ ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಕೆ. ಮಹಂತೇಶ ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಅಧ್ಯಕ್ಷ ಬಿ. ಸದಾಶಿವಪ್ಪ ವಹಿಸಿದ್ದರು.

ಸಮ್ಮೇಳನಕ್ಕೆ ಶುಭ ಕೋರಿ ಬ್ಯಾಂಕ್ ನೌಕರರ ಸಂಘಟನೆಯ ಮುಖಂಡರಾದ ಹನುಮಂತರಾವ್ ವಿಮಾ ನೌಕರರ ಮುಂದಾಳು ಎ.ಎಸ್. ಮೂರ್ತಿ ಮಾತನಾಡಿದರು. ಸಮ್ಮೇಳನದ ಆರಂಭದಲ್ಲಿ ಜಿಲ್ಲಾ ಅಧ್ಯಕ್ಷ ಬಿ. ಸದಾಶಿವಪ್ಪ ಧ್ವಜಾರೋಹಣ ಮಾಡಿದರು. ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಕೆ.ಎಂ. ಅಂಜನೇಯವರು ಸ್ವಾಗತಿಸಿದರು. ಕೊನೆಯಲ್ಲಿ ಜಿಲ್ಲಾ ಉಪಾಧ್ಯಕ್ಷ ಎಸ್.ಬಿ. ಮಹಬೂಬ್ ಭಾಷಾ ವಂದಿಸಿದರು.

ಸಮ್ಮೇಳನದಲ್ಲಿ ನೂತನ ಅಧ್ಯಕ್ಷರನ್ನಾಗಿ ಮಹಬೂಬ್ ಭಾಷಾ ಕಾರ್ಯದರ್ಶಿಯಾಗಿ ಬಿ. ಸದಾಶಿವಪ್ಪ ಆಯ್ಕೆಯಾದರು. ಸಹ ಕಾರ್ಯದರ್ಶಿಯಾಗಿ ಕುಮಾರಿ ಜೆ. ಲತಾ ಉಪಾಧ್ಯಕ್ಷರಾಗಿ ಮಂಜುನಾಥಸ್ವಾಮಿ ನಾಯಕ ಆಯ್ಕೆಯಾದರು. ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ' ಕೆ. ಮಹಾಂತೇಶ ಜಿಲ್ಲಾ ಸಮಿತಿ ಸದಸ್ಯರಾಗಿ ಓ. ಸೋಮಶೇಖರ್, ಡಿ. ಮಾರಪ್ಪ, ಎ. ಕರುಣಾನಿಧಿ, ಶ್ರೀನಿವಾಸ್. ಎನ್.ಎ. ನರಸಿಂಹಮೂರ್ತಿ, ಎಲ್. ಮಹದೇವಸ್ವಾಮಿ, ಬಸವರಾಜ ಶಾವಿ, ಮಂಜುನಾಥ, ಶಿವಕುಮಾರ ಆಯ್ಕೆಯಾದರು. ಈ ಆಯ್ಕೆಯ ಸಂದರ್ಭದಲ್ಲಿ ಎಸ್.ಎಫ್.ಐ. ಕೇಂದ್ರ ಸಮಿತಿ ಮುಖಂಡರಾದ ಜಿ.ಸಿ. ಬಯ್ಯಾರೆಡ್ಡಿ ಹಾಜರಿದ್ದರು.

ಧಾರವಾಡ ತಾಲೂಕು ಸಮ್ಮೇಳನ

ರೋಣ(ಧಾರವಾಡ): ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ರೋಣ ತಾಲೂಕಾ ಎರಡನೇಯ ಸಮ್ಮೇಳನ ಇತ್ತೀಚೆಗೆ ರೋಣದಲ್ಲಿ ಜರುಗಿತು. ಎಂ.ಎಚ್. ಅರಹುಣಸಿ ಅವರು ಸಮ್ಮೇಳನ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸತ್ತಿಗೇರಿ ವಕೀಲರು, ಮಲ್ಲಾಪೂರ, ಅಬ್ದುಲ್ ರಜಾಕ ಮುಲ್ಲಾ, ಎಸ್.ಎಫ್.ಐ. ಕಾರ್ಯದರ್ಶಿ ಕೆ.ಡಿ. ಯಾವಗಲ್, ಆಗಮಿಸಿದ್ದರು. ಅಧ್ಯಕ್ಷತೆ ಎಚ್.ಪಿ. ನವಲಳ್ಳಿ, ವಹಿಸಿದ್ದರು. ಮಾಲಿಪಾಟೀಲ ಸ್ವಾಗತಿಸಿದರು. ಕಳ್ಳಿಮಠ ಇವರು ವಂದನಾರ್ಪಣೆ ಹೇಳುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಸಮ್ಮೇಳನದಲ್ಲಿ ಆಯ್ಕೆಯಾದ ಹೊಸ ಸಮಿತಿ 11 ಸದಸ್ಯರನ್ನೊಳಗೊಂಡಿದೆ. ಅಧ್ಯಕ್ಷರಾಗಿ ಎಚ್.ಪಿ. ನವಲಳ್ಳಿ, ಕಾರ್ಯದರ್ಶಿಯಾಗಿ ಕಳ್ಳಿಮಠ, ಆಯ್ಕೆಯಾದರು. 8 ಜನ ಸಮಿತಿ ಸದಸ್ಯರಾಗಿ ಆಯ್ಕೆಯಾದರು

ಹೆಚ್.ಡಿ.ಕೋಟೆ ತಾಲೂಕು ಸಮ್ಮೇಳನ

ಫೆಬ್ರವರಿ 20, 1995 ರಂದು ಹೆಚ್.ಡಿ. ಕೋಟೆ ತಾಲೂಕು ಎಸ್.ಎಫ್.ಐ. ಸಮ್ಮೇಳನವು ತಾಲೂಕು ಸಮಿತಿಯ ಕಾರ್ಯದರ್ಶಿ ಅಷ್ರಾಫ್ ಪಾಶರವರು ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಮಾತನಾಡುತ್ತಾ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾಜವಾದಿ ಸಮಾಜವನ್ನು ನಿರ್ಮಾಣ ಮಾಡಲು ವಿದ್ಯಾರ್ಥಿಗಳು ಮುಂದಾಗಬೇಕೆಂದು ಅಷ್ರಾಫ್ ಪಾಶಾ ಕರೆ ನೀಡಿದರು.

ಸಮ್ಮೇಳನದಲ್ಲಿ ತಾಲೂಕು ಸಮಿತಿಯ ಸಹಕಾರ್ಯದರ್ಶಿ ವೆಂಕಟಚಲನಾಯಕರವರು ವರದಿಯನ್ನು ಮಂಡಿಸಿದರು.

ನೂತನ ಪದಾಧಿಕಾರಿಗಳು ಈ ಕೆಳಗಿನಂತಿದ್ದಾರೆ. ಹಾಲೀ ಸಮಿತಿಯ ಕಾರ್ಯದರ್ಶಿ ಅಷ್ರಾಫ್ ಪಾಶರವರನ್ನು ತಾಲೂಕು ಸಮಿತಿಯ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆರಿಸಲಾಯಿತು. ಇತರ ಪದಾಧಿಕಾರಿಗಳಾಗಿ, ಕಾರ್ಯದರ್ಶಿಯಾಗಿ ವೆಂಕಟ ಚಲ ನಾಯ್ಕ, ಸಹಕಾರ್ಯದರ್ಶಿಯಾಗಿ ಬಿ.ಪಿ. ಲೋಕೇಶ್, ಉಪಾಧ್ಯಕ್ಷರಾಗಿ ಜಿ. ನಾಗೇಶ್. ಎಂ.ಸಜ್ಜಾದ್, ರೇ ಕಲ್ಲೇಶ್ ಗೌಡ ಹಾಗೂ 12 ಸದಸ್ಯರ ಸಮಿತಿಯನ್ನು ಆರಿಸಲಾಯಿತು.

15ನೇ ಮಹಾಧಿವೇಶನದತ್ತ...

ರಾಜ್ಯ ಸಮ್ಮೇಳನಗಳು

ಅಸ್ಸಾಂ

ಸಿಪಿಐ(ಎಂ) ಅಸ್ಸಾಂ ರಾಜ್ಯ 15ನೇ ಸಮ್ಮೇಳನ ಫೆಬ್ರವರಿ 14ರಿಂದ 16ರವರೆಗೆ ಗುವಾಹಟಿಯಲ್ಲಿ ನಡೆಯಿತು. ಕಾಂ.ನಂದೇಶ್ವರತಾಲೂಕ್‌ದಾರ್ ಧ್ವಜಾರೋಹಣ ಮಾಡಿದರು. ಪಾಲಿಟ್‌ಬ್ಯೂರೋಸದಸ್ಯ ಎಸ್.ಆರ್. ಪಿಳ್ಳೆ ಸಮ್ಮೇಳನವನ್ನು ಉದ್ಘಾಟಿಸಿದರು.

ರಾಜ್ಯ ಸಮಿತಿ ಕಾರ್ಯದರ್ಶಿ ನಂದೇಶ್ವರ ತಾಲೂಕ್‌ದಾರ್ ವರದಿಯನ್ನುಮಂಡಿಸಿದರು.

245 ಪ್ರತಿನಿಧಿಗಳು ಮತ್ತು 10 ವೀಕ್ಷಕರು ಮೂರು ದಿನಗಳ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. 53 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದರು.

ಸುಳ್ಳು ಆರೋಪ ಹೊರಿಸಿ ಟಾಡಾ ಕಾನೂನಿನ ಪ್ರಕಾರ ಬಂಧಿಸಿರುವ ಸಿಪಿಐ(ಎಂ) ದಿಬ್ರೂಗಢ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ಟ್ರೇಡ್ ಯೂನಿಯನ್ ನಾಯಕ ಕಾಂ.ಸುರೇಶ್ ದೇಕಾ ಅವರನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸುವ ಒಂದು ಗೊತ್ತುವಳಿಯನ್ನು ಸಮ್ಮೇಳನ ಅಂಗೀಕರಿಸಿತು.

ಸಮಾರೋಪದಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಹರಿಕಿಷನ್ ಸಿಂಗ್ ಸುರ್ಜಿತ್ ಅವರೂ ಮಾತನಾಡಿದರು.

ಸಮ್ಮೇಳನದ ಅಂತ್ಯದಲ್ಲಿ ನಡೆದ ಬೃಹತ್ ಬಹಿರಂಗ ರ‍್ಯಾಲಿಯಲ್ಲಿ 12 ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು. ಇದೊಂದು ಪರಿಣಾಮಕಾರಿ ಪ್ರದರ್ಶನವಾಗಿತ್ತು.

ಗೋವಾ

ಸಿಪಿಐ(ಎಂ) ಗೋವಾ ರಾಜ್ಯ ಒಂಭತ್ತನೇ ಸಮ್ಮೇಳನ ವಾಸ್ಕೋಡಗಾಮದ ಸಿಐಟಿಯುಹಾಲ್‌ನಲ್ಲಿ ಫೆಬ್ರುವರಿ 18-19ರಂದು ನಡೆಯಿತು. ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ.ಸೀತಾರಾಮ ಮಂದ್ರೇಕರ್ ಧ್ವಜಾರೋಹಣ ಮಾಡುವುದರೊಂದಿಗೆ ಕಲಾಪ ಆರಂಭವಾಯಿತು.

51 ಪ್ರತಿನಿಧಿಗಳು ಪಾಲ್ಗೊಂಡಿದ್ದ ಸಮ್ಮೇಳನವನ್ನು ಪಾಲಿಟ್ ಬ್ಯೂರೋ ಸದಸ್ಯ ಕಾಂ.ಇ.ಬಾಲಾನಂದನ್ ಉದ್ಘಾಟಿಸಿದರು. ಸೀತಾರಾಮ ಮಂದ್ರೇಕರ್ ಮಂಡಿಸಿದ ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಒಟ್ಟು ಹತ್ತು ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾಂ. ಸೀತಾರಾಂ ಮಂದ್ರೇಕರ್ ರಾಜ್ಯ ಸಮಿತಿ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು. 19ರಂದು ಸಂಜೆ ವಾಸ್ಕೊ ನಗರದಲ್ಲಿ ನಡೆದ ಬಹಿರಂಗ ಸಮ್ಮೇಳನವನ್ನುದ್ದೇಶಿಸಿ ಬಾಲಾನಂದನ್, ಮಂದ್ರೇಕರ್ ಮತ್ತು ತೆಲ್ಮನ್ ಪಿರೇಡ ಭಾಷಣ ಮಾಡಿದರು.

ವಿದ್ಯಾರ್ಥಿಗಳಿಂದ ರಸ್ತೆ ತಡೆ

ಸಿಂಧನೂರು: ಧಡೇಸುಗೂರು ಗ್ರಾಮದಲ್ಲಿ ವೇಗದೂತ ಬಸ್ಸುಗಳನ್ನು ನಿಲುಗಡೆಗೊಳಿಸಬೇಕೆಂದು ಒತ್ತಾಯಿಸಿ ಫೆಬ್ರುವರಿ 20ರಂದು SFI ನೇತೃತ್ವದಲ್ಲಿ ರಸ್ತೆ ತಡೆ ಚಳುವಳಿ ನಡೆಸಲಾಯಿತು. ಧಡೇಸುಗೂರು ಗ್ರಾಮದಿಂದ ಸುಮಾರು 100 ವಿದ್ಯಾರ್ಥಿಗಳು ಸಿಂಧನೂರು ಮತ್ತು ಸಿರುಗುಪ್ಪಾಕ್ಕೆ ಶಾಲಾ ಕಾಲೇಜುಗಳಿಗೆ, ಅಭ್ಯಾಸ ಮಾಡಲು ಹೋಗುತ್ತಿದ್ದು ಶಾಲಾ ಕಾಲೇಜು ಸಮಯಕ್ಕೆ ಬರುವ ಬಳ್ಳಾರಿ, ಇಂಡಿ, ಕೂಡ್ಲಗಿ, ಗುಲ್ಬರ್ಗಾ, ಶಕ್ತಿನಗರ, ಬೆಂಗಳೂರು ಬಸ್ಸುಗಳು ನಿಲುಗಡೆ ಕೊಡದೆ ಇರುವುದರಿಂದ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಎಲ್ಲಾ ಬಸ್ ಗಳನ್ನು ನಿಲುಗಡೆಗೊಳಿಸಬೇಕೆಂದು ಒತ್ತಾಯಿಸಲಾಯಿತು.

ಪೋಲೀಸರು ಮತ್ತು ಸಾರಿಗೆ ಸಂಸ್ಥೆ ಅಧಿಕಾರಿಗಳು ಮಧ್ಯೆ ಪ್ರವೇಶಿಸಿ ಇನ್ನು ಒಂದು ವಾರದೊಳಗೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಒಂದು ಬಸ್ಸನ್ನು ವ್ಯವಸ್ಥೆಗೊಳಿಸುತ್ತೇವೆ. ಮತ್ತು ಮೇಲಧಿಕಾರಿಗಳ ಜೊತೆ ಚರ್ಚಿಸಿ ವೇಗದೂತ ಬಸ್ಸುಗಳನ್ನು ನಿಲುಗಡೆಗೊಳಿಸುತ್ತೇವೆಂದು ಬರವಣಿಗೆ ಮೂಲಕ ಆಶ್ವಾಸನೆ ಕೊಟ್ಟ ನಂತರ ರಸ್ತೆ ತಡೆ ಚಳುವಳಿಯನ್ನು ಹಿಂತೆಗೆದುಕೊಳ್ಳಲಾಯಿತು.

ಈ ಚಳುವಳಿಯ ನೇತೃತ್ವವನ್ನು SFI ತಾಲೂಕು ಮುಖಂಡರಾದ ಜೆ. ಹನಮೇಶ, ಧಡೇಸುಗೂರು SFI ಗ್ರಾಮದ ಘಟಕದ ಅಧ್ಯಕ್ಷ ಬಂದೇನವಾಜ್, ಕಾರ್ಯದರ್ಶಿ ಶ್ರೀನಿವಾಸ ಹಾಗೂ ಖತೀಬ್ ಪಾಷಾ ಫರೂಕ ವಹಿಸಿದ್ದರು.

ಝೂಪಾಟಿಸ್ಟಾ ಗೆರಿಲ್ಲಾ ವಿರುದ್ಧ ಮೆಕ್ಸಿಕೊ ಸರ್ಕಾರದ ಭಾರಿ ದಮನ ಕ್ರಮ

ಲೋಕಸಂಚಾರ

-ಶರತ್‌ಚಂದ್ರ

ಮೆಕ್ಸಿಕೊದ ನಾಣ್ಯ 'ಪೆಸೊ'ದ ಅಪಮೌಲ್ಯ ಹಾಗೂ ಭಾರೀ ಬಂಡವಾಳ ಪಲಾಯನದಿಂದ ತತ್ತರಿಸುತ್ತಿರುವ ಸರ್ಕಾರ ಇನ್ನೊಂದು ಬಿಕ್ಕಟ್ಟಿನಲ್ಲಿ ಸಿಕ್ಕಿ ಬಿದ್ದಿದೆ. ಮೆಕ್ಸಿಕೊದಿಂದ ಬಂಡವಾಳ ಪಲಾಯನಕ್ಕೆ ತಾತ್ಕಾಲಿಕ ಪರಿಹಾರ ಕೊಡಲು ಅಮೇರಿಕನ್ ಸರ್ಕಾರ 40 ಶತಕೋಟಿ ಡಾಲರು ಹಾಕಿದ್ದಕ್ಕೆ ಪ್ರತಿಫಲವೋ ಎಂಬಂತೆ, ಸರ್ಕಾರ ಚಿಯೊಪಾಸ್ ಪ್ರಾಂತ್ಯವನ್ನು ಹೆಚ್ಚು ಕಡಿಮೆ ನಿಯಂತ್ರಿಸುತ್ತಿರುವ ಝೂಪಾಟಿಸ್ಟಾ ಗೆರಿಲ್ಲಾಗಳ ಮೇಲೆ ಭಾರಿ ದಮನ ಕ್ರಮ ಆರಂಭಿಸಿದ್ದಾರೆ. ಈ ವಿದೇಶೀ ಬಂಡವಾಳಿಗರು ಮೆಕ್ಸಿಕೊ ಮೇಲೆ ಹೋರಿಸಿರುವ ಆರ್ಥಿಕ ದುಸ್ಥಿತಿಯನ್ನು ಹಾಗೂ ಅದರಿಂದ ಜನತೆ ಮೇಲೆ ಆಗಿರುವ ಭೀಕರ ಪರಿಣಾಮಗಳ ಬಗ್ಗೆ ಪ್ರತಿಭಟಿಸುವವರನ್ನು ತನ್ನ ಸರ್ಕಾರ ಹತೋಟಿಯಲ್ಲಿಡಬಲ್ಲುದು ಅಂತಹವರನ್ನು ಮಟ್ಟ ಹಾಕಬಲ್ಲುದು. ಆದ್ದರಿಂದ ಮೆಕ್ಸಿಕೋದಲ್ಲಿ ಬಂದು ನಿಮ್ಮ ಬಂಡವಾಳ ಪುನಃ ಹೂಡಿ ಎಂಬ ಸಂದೇಶ ಕೊಡಲು ಹೊಸ ಅಧ್ಯಕ್ಷ ಝೆಡಿಲ್ಲೊ ಈ ದಮನಕ್ರಮ ಆರಂಭಿಸಿದ್ದಾರೆ ಎನ್ನಲಾಗಿದೆ.

ಆದರೆ ಇದರ ಪರಿಣಾಮ ತಿರುವುಮುರುವಾಗುವ ಸೂಚನೆಗಳಿವೆ. ಭಾರಿ ಟ್ಯಾಂಕ್‌ಗಳು, ಹೆಲಿಕಾಪ್ಟರುಗಳು, ಬಾಂಬರ್ ವಿಮಾನಗಳು ಇವುಗಳಿಂದ ಯುದ್ಧೋಪಾದಿಯಲ್ಲಿ ಆರಂಭವಾಗಿರುವ ಈ ದಮನಕ್ರಮವನ್ನು ದೇಶದೊಳಗಿನ ಎಲ್ಲಾ ವಿರೋಧಪಕ್ಷಗಳು, ಅದರಲ್ಲೂ ಸಾಕಷ್ಟು ಪ್ರಬಲವಾಗಿರುವ ಎಡಪಕ್ಷಗಳು ಬಲವಾಗಿ ಟೀಕಿಸಿವೆ. ಅಮೇರಿಕದಲ್ಲೂ ಮಾನವ ಹಕ್ಕು ರಕ್ಷಣಾ ಗುಂಪುಗಳೂ ಮೆಕ್ಸಿಕನ್ ಸರ್ಕಾರವನ್ನು ಬಲವಾಗಿ ಟೀಕಿಸಿವೆ. ಅಮೇರಿಕನ್ ಬಂಡವಾಳಿಗರು ಮೆಕ್ಸಿಕೋವನ್ನು ಬಹಿಷ್ಕರಿಸಬೇಕು ಎಂದೂ ಬಲವಾದ ಒತ್ತಾಯ ತಂದಿವೆ.

ಚಿಯಾಪಾಸ್ ಪ್ರಾಂತ್ಯ ಬಡ ಆದಿವಾಸಿ ಇಂಡಿಯನ್ನರು ಬಹುಸಂಖ್ಯೆಯಲ್ಲಿ ವಾಸಿಸುವ ಪ್ರದೇಶ. ಈ ಆದಿವಾಸಿ ಇಂಡಿಯನ್ನರ ಜಮೀನನ್ನು ಭಾರೀ ಶ್ರೀಮಂತ ಭೂಮಾಲಿಕರು, ಎಸ್ಟೇಟ್ ಕಂಪನಿಗಳು, ಬಹುರಾಷ್ಟ್ರೀಯ ಕಂಪನಿಗಳು ಗನ್ನಿನ ಬಲದಿಂದ ಕಸಿದುಕೊಂಡಿವೆ. ಆದಿವಾಸಿಗಳನ್ನು ಅವರ ಜಮೀನಿನಲ್ಲೇ ಕೂಲಿ ಮಾಡುವಂತೆ ಮಾಡಲಾಗಿದೆ. ಇದನ್ನು ಪ್ರತಿಭಟಿಸುವ ಸಶಸ್ತ್ರ ಚಳುವಳಿಯೇ ಝೂಪಾಟಿಸ್ಟಾ ಚಳುವಳಿ. ಝೂಪಾಟಿಸ್ಟರಿಗೆ ಬಡ ಆದಿವಾಸಿ ಇಂಡಿಯನ್ನರು ಸಕ್ರಿಯ ಬೆಂಬಲ ನೀಡುತ್ತಿದ್ದಾರೆ. 1994ರ ಮೊದಲ ದಿನದಂದು ಆರಂಭವಾದ ಝೂಪಾಟಿಸ್ಟಾ ಗೆರಿಲ್ಲಾ ದಂಗೆಯ ನಂತರವಂತೂ ಚಿಯಾಪಾಸ್ ಪ್ರಾಂತ್ಯ ಹೆಚ್ಚು ಕಡಿಮೆ ಅವರ ನಿಯಂತ್ರಣದಲ್ಲಿತ್ತು. ಭಾರಿ ಕ್ರೂರ ಮಿಲಿಟರಿ ದಾಳಿಯ ನಂತರ ಈ ಪ್ರಾಂತ್ಯದ 11 ಪಟ್ಟಣಗಳನ್ನು ಸೈನ್ಯ ವಶಪಡಿಸಿಕೊಂಡಿದೆ. ಆದರೂ ಐದು ಪ್ರಮುಖ ಗೆರಿಲ್ಲಾ ನಾಯಕರನ್ನು ಸೆರೆಹಿಡಿಯುವುದರಲ್ಲಿ ವಿಫಲವಾಗಿದೆ. ಈ ಗೆರಿಲ್ಲಾ ನಾಯಕರ ಪತ್ತೆ ಮಾಡಲು ಬಡ ಆದಿವಾಸಿ ಇಂಡಿಯನ್ನರ ಮೇಲೆ ಭಾರಿ ಜುಲುಮು ಮಾಡಲಾಗುತ್ತಿದೆ. ಮಹಿಳೆಯರನ್ನು ಥಳಿಸಿದ್ದು, ಬಲಾತ್ಕಾರ ಮಾಡಿದ್ದಲ್ಲದೆ, ಈ ಮಾಹಿತಿ ನೀಡದಿದ್ದರೆ ಅವರ ಮಕ್ಕಳನ್ನು ಅವರ ಕಣ್ಣೆದುರೇ ಕೊಲೆ ಮಾಡುವ ಬೆದರಿಕೆ ಹಾಕಲಾಯಿತು. ಈ ಸಂದರ್ಭದಲ್ಲಿ ಹಲವಾರು ಚಿತ್ರಹಿಂಸೆಯ ಭಾಗವಾಗಿ ಬಡ ಇಂಡಿಯನ್ನರ ಕೈಕಾಲು ಕಡಿದು ಹಾಕಲಾಗಿದೆ. ಸೈನ್ಯ ಚಿಯಾಪಾಸ್ ಪ್ರಾಂತ್ಯದ ಹತೋಟಿ ಪಡೆಯುತ್ತಿದ್ದಂತೆ, ಬಡ ಇಂಡಿಯನ್ನರು ವಾಪಸು ಪಡೆದಿದ್ದ ಜಮೀನನ್ನು ಭೂಮಾಲಕರು, ಎಸ್ಟೇಟ್ ಮಾಲಕರು, ಕಂಪನಿಗಳು ಬಲಪ್ರಯೋಗದಿಂದ ವಾಪಸು ಪಡೆಯುತ್ತಿದ್ದಾರೆ. ಚಿಯಾಪಾಸ್‌ಗೆ ಸ್ಥಳೀಯ ಹಾಗೂ ಅಂತರ್ರಾಷ್ಟ್ರೀಯ ಮಾನವಹಕ್ಕು ಗುಂಪುಗಳಿಗೆ ಪ್ರವೇಶ ನಿರಾಕರಿಸಿರುವುದನ್ನು ವಿಶೇಷವಾಗಿ ಟೀಕಿಸಲಾಗಿದೆ.

ಗೆರಿಲ್ಲಾಗಳು ಸದ್ಯಕ್ಕೆ ಪ್ರತಿರೋಧ ತೋರಿಸದಿದ್ದರೂ, ದುರ್ಗಮ ಪರ್ವತ ಹಾಗೂ ಕಾಡು ಪ್ರದೇಶಗಳಿಗೆ ಮರಳಿದ್ದಾರೆ. ಸಮಯ ನೋಡಿ ಮರುದಾಳಿ ನಡೆಸುತ್ತಾರೆ ಎನ್ನಲಾಗಿದೆ. ಈಗಾಗಲೇ ಸುಸ್ತಾಗಿರುವ ಸೈನ್ಯಕ್ಕೆ ಆಗ ಭಾರಿ ಪ್ರಾಣಹಾನಿ, ಶಸ್ತ್ರಾಸ್ತ್ರಗಳ ಹಾನಿ ಆಗಿ ಸರ್ಕಾರಕ್ಕೆ ಮುಖಭಂಗವಾಗಬಹುದು ಎನ್ನಲಾಗಿದೆ.

ಪಾಕಿಸ್ತಾನದಲ್ಲಿ ಅಮೇರಿಕನ್ ಅಣ್ವಸ್ತ್ರ ನಿರೀಕ್ಷಣಾ ಕೇಂದ್ರದ ವಿರುದ್ಧ ಪ್ರತಿಭಟನೆ

ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಚಾಕ್‌ವಾಲ್‌ನಲ್ಲಿ ಅಮೇರಿಕನ್ ಅಣ್ವಸ್ತ್ರ ನಿರೀಕ್ಷಣಾ ಕೇಂದ್ರವೊಂದು ಜನವರಿ 1995ರಿಂದ ಕೆಲಸ ಮಾಡುತ್ತಿದ್ದು, ಈಗ ಆ ದೇಶದಲ್ಲಿ ತೀವ್ರ ವಿವಾದಕ್ಕೆಡೆಕೊಟ್ಟಿದೆ. ಇಂತಹ ಕೇಂದ್ರ ಸ್ಥಾಪಿಸಲು ಪಾಕಿಸ್ತಾನ ಸರ್ಕಾರ 1994ರಲ್ಲಿ ಅನುಮತಿಕೊಟ್ಟಿದ್ದು, ಪಾಕಿಸ್ತಾನಿ ವಿಶೇಷಜ್ಞರನ್ನು ಈ ಕೇಂದ್ರದಲ್ಲಿ ಕೆಲಸ ಮಾಡಲು ಜಿನೀವಾದಲ್ಲಿ ತರಬೇತಿ ನೀಡಲಾಗಿತ್ತು. ಈ ಕೇಂದ್ರ ದಕ್ಷಿಣ ಏಶ್ಯಾ, ಮಧ್ಯ ಏಶ್ಯಾ, ರಶ್ಯ ಹಾಗೂ ಚೀನಾದಲ್ಲಿ ಯಾವ ಜಾಗದಲ್ಲಿ ಅಣ್ವಸ್ತ್ರ ಪರೀಕ್ಷಣೆ ಸ್ಫೋಟ ನಡೆಸಿದರೂ ಅದನ್ನು ದಾಖಲು ಮಾಡಿ ವಿವರ ಸಂಗ್ರಹಿಸುವ ಸಾಮರ್ಥ್ಯ ಹೊಂದಿದೆ ಎನ್ನಲಾಗಿದೆ. ಇದು ಪಾಕಿಸ್ತಾನದ ಅಣ್ವಸ್ತ್ರ ಕಾರ್ಯಕ್ರಮದ ಮೇಲೆ ಹದ್ದಿನ ಕಣ್ಣಿಡಬಲ್ಲುದು ಎಂಬುದು ಹಾಗೂ ಇಂತಹ ಮುಖ್ಯ ನಿರ್ಧಾರವನ್ನು ಸರ್ಕಾರ ಗುಪ್ತವಾಗಿ ತೆಗೆದುಕೊಂಡದ್ದರ ಸುತ್ತ ರಾಜಕೀಯ ವಲಯಗಳಲ್ಲಿ ತೀವ್ರ ವಿವಾದ ಎದ್ದಿದೆ.

ಈ ಕೇಂದ್ರದ ಬಗ್ಗೆ ಪಾಕಿಸ್ತಾನದ ಜನತೆಗೆ ಸುದ್ದಿ ಬಹಿರಂಗವಾದದ್ದು ನ್ಯೂಯಾರ್ಕ್‌ನ ಪತ್ರಿಕಾ ವರದಿಯೊಂದರಿಂದ, ಹಾಗೂ ಅಮೇರಿಕದ ರಕ್ಷಣಾ ಕಾರ್ಯದರ್ಶಿ ಭಾರತದಲ್ಲಿ ಪತ್ರಿಕಾ ಗೋಷ್ಠಿಯೊಂದರಲ್ಲಿ ಇದನ್ನು ಒಪ್ಪಿಕೊಂಡದ್ದರಿಂದ ಆಕಸ್ಮಿಕವಾಗಿ ಈ ಬಗ್ಗೆ ವಿರೋಧಪಕ್ಷಗಳು, ಹಲವಾರು ಸಂಘಟನೆಗಳು ಭಾರಿ ವಿರೋಧ ವ್ಯಕ್ತಪಡಿಸಿವೆ. ಹಿಂದೆ ಪಾಕಿಸ್ತಾನವನ್ನು ತನ್ನೆಲ್ಲಾ ಅಂತರ್ರಾಷ್ಟ್ರೀಯ ಕುಕೃತ್ಯಗಳಲ್ಲಿ ಬಳಸಿಕೊಂಡು, ಇತ್ತೀಚೆಗೆ ಮಿಲಿಟರಿ ಆರ್ಥಿಕ ನೆರವು ನಿಲ್ಲಿಸಿ ದೇಶವನ್ನು ಅವಮಾನಿಸಿದ್ದ ಅಮೇರಿಕ ಸರ್ಕಾರದ ಜತೆ ಇಂತಹ ಒಪ್ಪಂದ, ಪಾಕ್ ಸಾರ್ವಭೌಮತೆಯನ್ನು ಪೂರ್ಣ ತ್ಯಾಗ ಮಾಡುವ ಕ್ರಮ ಎಂದು ಜನ ಭಾವಿಸುತ್ತಿದ್ದಾರೆ. ಅಲ್ಲದೆ ಈ ನಿರೀಕ್ಷಣಾ ಕ್ರಮಕ್ಕೊಳಗಾಗುವ ಚೀನಾ, ಇರಾನ್, ಮಧ್ಯ ಏಶ್ಯಾದ ಮುಸ್ಲಿಂ ದೇಶಗಳಂತಹ ಮಿತ್ರದೇಶಗಳಿಗೆ ದ್ರೋಹಬಗೆಯುವ ಕ್ರಮ ಇದು. ಈ ದೇಶಗಳ ಅಪನಂಬಿಕೆ, ಕೋಪಗಳಿಗೆ ಅನಗತ್ಯವಾಗಿ ಪಾಕಿಸ್ತಾನ ತನ್ನನ್ನು ಇಡುಮಾಡಿಕೊಂಡಿದೆ ಎಂದು ಟೀಕಾಕಾರರ ಅಭಿಪ್ರಾಯ. ಈ ವಿವಾದ ಈಗಾಗಲೇ ಜನಪ್ರಿಯತೆ ಕಳೆದುಕೊಳ್ಳುತ್ತಿರುವ ಬೆನಜಿರ್ ಸರ್ಕಾರವನ್ನು ತೀರಾ ಇಕ್ಕಟ್ಟಿಗೆ ಸಿಕ್ಕಿಸಿದೆ.

ಇಸ್ಲಾಂ ವಿರೋಧಿ ಪ್ರಚಾರಕ್ಕೆ ಇಬ್ಬರು ಪಾಕಿಸ್ತಾನಿ ಕ್ರಿಶ್ಚಿಯನ್ನರಿಗೆ ಗಲ್ಲುಶಿಕ್ಷೆ ವಿವಾದ

ಪಾಕಿಸ್ತಾನದಲ್ಲಿ ಇಸ್ಲಾಂ ವಿರೋಧಿ ಪ್ರಚಾರ ಮಾಡಿದರೆಂಬ ಆರೋಪದ ಮೇಲೆ ಇಬ್ಬರು ಕ್ರಿಶ್ಚಿಯನ್ನರಿಗೆ ಕೆಳಕೋರ್ಟು ಗಲ್ಲು ಶಿಕ್ಷೆ ವಿಧಿಸಿದ್ದು, ಲಾಹೋರ್ ಹೈಕೋರ್ಟ್ ಈ ತೀರ್ಪಿನ ವಿರುದ್ಧ ಅಪೀಲು ಬಗ್ಗೆ ವಿಚಾರಣೆ ನಡೆಸುತ್ತಿದೆ. ಇದರಲ್ಲಿ ಒಬ್ಬ 14 ವರ್ಷದ ಬಾಲಕನಾಗಿದ್ದರಿಂದ, ಈ ವಿಚಾರಣೆ ತೀವ್ರ ಕೂತುಹಲ ಕೆರಳಿಸಿದ್ದಲ್ಲದೆ, ಸಾಕಷ್ಟು ಬಿಗುವು, ವಿವಾದ ಎಬ್ಬಿಸಿದೆ. ಪಾಕಿಸ್ತಾನದಲ್ಲಿ ಇಸ್ಲಾಂ-ವಿರುದ್ಧ ಪ್ರಚಾರ ಮಾಡುವುದು ತೀವ್ರ ಶಿಕ್ಷಾರ್ಹ ಅಪರಾಧ. ಆಪಾದಿತರ ಪರ ವಕೀಲಿ ನಡೆಸುತ್ತಿದ್ದ ಮಹಿಳಾ ವಕೀಲರಿಗೆ ಮುಸ್ಲಿಂ ಮೂಲಭೂತವಾದಿ ಗುಂಪೊಂದು ಕೋರ್ಟಿನ ಆವರಣದಲ್ಲಿ ಬೆದರಿಕೆ ಹಾಕಿದ್ದು, ಆಕೆಯ ಕಾರು ನಾಶಮಾಡಿದ್ದು ಇನ್ನಷ್ಟು ವಿವಾದ ಎಬ್ಬಿಸಿದೆ. ಆಪಾದಿತರ ಪರ ವಾದಿಸುತ್ತಿರುವ ಮಹಿಳಾ ವಕೀಲರು ಪಾಕಿಸ್ತಾನದ ಮಾನವ ಹಕ್ಕುಗಳ ಕಮೀಶನ್‌ನ ಅಧ್ಯಕ್ಷೆ ಸಹ.

ಇವಲ್ಲದೆ ಈ ಪ್ರಕರಣದ ಸಂಬಂಧದಲ್ಲಿ ಪ್ರಧಾನಿ ಬೆನಜಿರ್ ಭುಟ್ಟೋರ ವಿರುದ್ಧ ಕೋರ್ಟ್ ನಿಂದನೆ ಮೊಕದ್ದಮೆ ಸಹ ವಿಚಾರಣೆಗೆ ಬಂದಿದೆ. ಪ್ರಧಾನಿ ಭುಟ್ಟೋ ಕೆಳಕೋರ್ಟ್‌ನ ತೀರ್ಪು ಪಾಕಿಸ್ತಾನದ ಅಂತರ್ರಾಷ್ಟ್ರೀಯ 'ಇಮೇಜ್'ಗೆ ಒಳ್ಳೆದಲ್ಲ, ಇದರಿಂದ ವಿದೇಶಿಗಳಲ್ಲಿ ಪಾಕ್-ವಿರೋಧಿ ಭಾವನೆ ಉಂಟಾಗಬಹುದು ಎಂದು ತೀರ್ಪನ್ನು ಟೀಕಿಸಿದ್ದರು. ಇದರ ವಿರುದ್ಧ ಕೆಲವು ವ್ಯಕ್ತಿಗಳು ಮೊಕದ್ದಮೆ ಹೂಡಿದ್ದಾರೆ.

ಕ್ರಿಶ್ಚಿಯನ್ ಅಲ್ಪಸಂಖ್ಯಾತರ ವಿರುದ್ಧ ದುರ್ವರ್ತನೆ ಬಗ್ಗೆ ಹಲವಾರು ವರದಿ ಈಗಾಗಲೇ ಬಂದಿದ್ದು, ಇದು ತೀವ್ರ ಕಳವಳಕಾರಿಯಾಗಿದೆ.

ಚೆಚೆನ್ಯಾದಲ್ಲಿ ಕದನ ವಿರಾಮ

ಇಂಗುಸೇಶಿಯಾದ ಉಪಾಧ್ಯಕ್ಷರ ಪ್ರಯತ್ನಗಳಿಂದಾಗಿ, ರಶ್ಯನ್ ಹಾಗೂ ಚೆಚೆನ್ಯಾ ಪಡೆಗಳ ನಡುವೆ ಕದನ ವಿರಾಮ ಏರ್ಪಟ್ಟಿದೆ. ಶಾಂತಿ ಮಾತುಕತೆಗಳಲ್ಲಿ ರಶ್ಯದ ಪರವಾಗಿ ಆಂತರಿಕ ಭದ್ರತಾ ಪಡೆಗಳ ಮುಖ್ಯಸ್ಥ ಹಾಗೂ ಚೆಚೆನ್ ಪಡೆಗಳ ಕಮಾಂಡರ್ ಭಾಗವಹಿಸಿದ್ದರು. ಇಂಗುಸೇಶಿಯಾ ಚೆಚೆನ್ಯಾದ ನೆರೆಯಲ್ಲಿರುವ ಇನ್ನೊಂದು ಸ್ವಾಯುತ್ತ ಪ್ರದೇಶ. ಕದನ ವಿರಾಮ ಏರ್ಪಟ್ಟ ಮೇಲೆ ಮುಂದೆ ಚೆಚೆನ್ಯಾದ ಉಲ್ಬಣಗೊಂಡಿರುವ ಸಮಸ್ಯೆಯನ್ನು ಹೇಗೆ ಬಗೆಹರಿಸಲಾಗುತ್ತದೆ ಎಂಬುದರ ಮೇಲೆ ಎಲ್ಲಾ ಅವಲಂಬಿಸಿರುತ್ತದೆ.

ಈ ನಡುವೆ ಅಧ್ಯಕ್ಷ ಯೆಲ್ಟ್‌ಸಿನ್ ರಶ್ಯನ್ ಪಾರ್ಲಿಮೆಂಟಿಗೆ ಮಾಡಿದ ಭಾಷಣದಲ್ಲಿ ಚೆಚೆನ್ಯಾದಲ್ಲಿ ಆದ ನರಮೇಧಕ್ಕೆ ರಕ್ಷಣಾ ಪಡೆಗಳನ್ನು ಆಪಾದಿಸಿದ್ದಾರೆ. ಇದನ್ನು ಸರಿಪಡಿಸಲು ತಕ್ಕಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಚೆಚೆನ್ಯಾದ ಹಗರಣಕ್ಕೆ ತಮ್ಮ ಅಧ್ಯಕ್ಷೀಯ ಜವಾಬ್ದಾರಿಯಿಂದ ನುಣುಚಿಕೊಂಡು, ಇನ್ನೊಬ್ಬನನ್ನು ಬಲಿಪಶು ಮಾಡುವ ತಂತ್ರವೇ ಇದು ಎಂದು ಹೇಳಲಾಗಿದೆ. ಆದರೆ ರಶ್ಯನ್ ಪಡೆಗಳು, ಚೆಚೆನ್ಯಾದ ಜನ ಹಾಗೂ ಇದರಿಂದ ಇನ್ನಷ್ಟು ದುರ್ಭರ ಆರ್ಥಿಕ ಸ್ಥಿತಿ ಕಂಡಿರುವ ಜನತೆ ಯೆಲ್ಟ್‌ಸಿನ್‌ರನ್ನು ಕ್ಷಮಿಸುವುದಿಲ್ಲ ಎನ್ನುವುದು ಅಷ್ಟೇ ಸ್ಪಷ್ಟ.

ವಿಯೆಟ್ನಾಂ ಆರ್ಥಿಕದಲ್ಲಿ ತೀವ್ರ ಬೆಳವಣಿಗೆ

ವಿಯೆಟ್ನಾಂ ಕೆಲವು ವರ್ಷಗಳ ಹಿಂದೆ ಸಮಾಜವಾದಿ ಚೌಕಟ್ಟಿನೊಳಗೆ ಆರ್ಥಿಕ ಸುಧಾರಣೆಗಳಿಂದ, ಆರ್ಥಿಕ ಬೆಳವಣಿಗೆ ತೀವ್ರವಾಗಿ ಏರುತ್ತಿದೆ. ವಿಯೆಟ್ನಾಂನ ಲಘು ಕೈಗಾರಿಕೆ ಶೇ. 14 ರಷ್ಟು ಬೆಳೆದಿದೆ. ಇದರಲ್ಲಿ ಸರ್ಕಾರಿ ಕ್ಷೇತ್ರದ ಲಘು ಕೈಗಾರಿಕೆಗಳ ಬೆಳವಣಿಗೆ (ಶೇ. 19.38) ಖಾಸಗಿ ಕ್ಷೇತ್ರಕ್ಕಿಂತ (ಶೇ. 12.5) ಹೆಚ್ಚು ಎನ್ನುವುದು ಗಮನಾರ್ಹವಾದದ್ದು. ಲಘುಕೈಗಾರಿಕೆ ಸಾಧಿಸಿದ ರಫ್ತು ಸಹ ಶೇಕಡಾ ೨೫ರಷ್ಟು ಏರಿತು. ವಿದ್ಯುತ್ ಉತ್ಪಾದನೆ ಶೇಕಡಾ 15ರಷ್ಟು ಏರಿದೆ.

ವಿಯೆಟ್ನಾಂನಲ್ಲಿ ವಿದೇಶ ಬಂಡವಾಳ ಹೂಡಿಕೆ ಕಳೆದ ವರ್ಷಕ್ಕಿಂತ ಶೇಕಡಾ 45.4ರಷ್ಟು ಏರಿತು. ಈಗ ಒಟ್ಟು ವಿದೇಶಿ ಬಂಡವಾಳ 4 ಶತಕೋಟಿ ಡಾಲರ್ ಮುಟ್ಟಿದೆ. ತೈವಾನ್ ವಿಯೆಟ್ನಾಂನಲ್ಲಿ ಅತಿಹೆಚ್ಚು ಬಂಡವಾಳ ಹೂಡುತ್ತಿರುವವರಲ್ಲಿ ಮೊದಲ ದೇಶ. ಆ ಮೇಲೆ ಹಾಂಗ್‌ಕಾಂಗ್, ಸಿಂಗಾಪೂರ್, ದಕ್ಷಿಣ ಕೊರಿಯಾ ಹಾಗೂ ಜಪಾನ್ ಅನುಕ್ರಮವಾಗಿ ಹೆಚ್ಚು ಬಂಡವಾಳ ಹೂಡಿರುವ ದೇಶಗಳು. ನೇರ ವಿದೇಶಿ ಬಂಡವಾಳದಿಂದಾಗಿ 65 ಸಾವಿರ ಉದ್ಯೋಗಗಳು ಸೃಷ್ಟಿಯಾಗಿದೆ. ಸುಮಾರು 10ಲಕ್ಷದಷ್ಟು ನಿರ್ಮಾಣ ಕೆಲಸಗಳಲ್ಲಿ ಉದ್ಯೋಗಗಳು ಸೃಷ್ಟಿಯಾಗಿವೆ.

ಕಾರ್ಮಿಕರ ಹೋರಾಟಕ್ಕೆ ಜಯ

ಬೆಂಗಳೂರು: ಫೆಬ್ರವರಿ 8, 1995ರಂದು ಜಂಟಿ ಕಾರ್ಮಿಕ ಆಯುಕ್ತರಾದ ಶಂಕರನಾರಾಯಣರಾವ್ ರವರ ಸಮಕ್ಷಮದಲ್ಲಿ ಶ್ರೀ ವಳ್ಳಿಯಪ್ಪ ಟೆಕ್ಸ್ ಟೈಲ್ಸ್(ಹೆಜ್ಜಾಲ) ಕಾರ್ಖಾನೆಯ ಮಾಲೀಕ ಮಂಡಳಿಯವರು ಸಿಐಟಿಯುಗೆ ಸೇರಿದ ವಳ್ಳಿಯಪ್ಪ ಟೆಕ್ಸ್ ಟೈಲ್ಸ್ ಅಂಡ್ ಅಲ್ಯಾಡ್ ಕಂಪನಿ ವರ್ಕರ್ಸ್ ಯೂನಿಯನ್ ನೊಂದಿಗೆ ಮಧ್ಯಕಾಲದ(ಇಂಟರಿಮ್) ಒಡಂಬಡಿಕೆಗೆ ಬಂದಿರುತ್ತಾರೆ. ಇದರ ಪ್ರಕಾರ ಕಾರ್ಖಾನೆಯ ಕಾರ್ಮಿಕರನ್ನು 20.2.1995 ರಿಂದ 25.2.1995ರ ಒಳಗೆ ಹಂತಹಂತವಾಗಿ ಮುಚ್ಚಳಿಕೆ ಇಲ್ಲದೆ ಕೆಲಸಕ್ಕೆ ಬಿಡಲಾಗುವುದು. ಕಾರ್ಮಿಕರಿಗೆ ಈಗಾಗಲೇ ಕನಿಷ್ಟ ಬೋನಸ್ ಕೊಟ್ಟಿದ್ದು 25.2.1995ರಂದು ತಲಾ ರೂ. 1250.00 ಅಡ್ವಾನ್ಸ್ ಕೊಡಲಾಗುತ್ತದೆ. ಸಂಘದ ಪ್ರತಿನಿಧಿಗಳು ಕಾರ್ಖಾನೆಯಲ್ಲಿ ಕೆಲಸ ಸುಗಮವಾಗಿ ನಡೆದುಕೊಂಡು ಹೋಗಲು ಕಾರ್ಮಿಕರು ಸಹಕರಿಸುತ್ತಾರೆಂದು ಆಶ್ವಾಸನೆ ಕೊಟ್ಟಿರುತ್ತಾರೆ. ಜಂಟಿ ಕಾರ್ಮಿಕ ಆಯುಕ್ತರ ಪರಿಶ್ರಮಕ್ಕೆ ಸಿಐಟಿಯು ಬೆಂಗಳೂರು ಜಿಲ್ಲಾ ಸಮಿತಿಯು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾ ಕಾರ್ಖಾನೆಯಲ್ಲಿ ಮಾಲಿಕರ ಮತ್ತು ನಮ್ಮ ಸಂಘದ ಬಾಂಧವ್ಯ ಬೆಳೆದು ಉತ್ಪಾದನೆ ಹಾಗೂ ಕಾರ್ಮಿಕರ ವೇತನ ಸೌಲಭ್ಯಗಳು ಹೆಚ್ಚಿ ಕೈಗಾರಿಕಾ ಶಾಂತಿ ಭದ್ರವಾಗಿ ನೆಲೆಸುವುದೆಂದು ಆಶಿಸಿದೆ.

ವಿದ್ಯಾರ್ಥಿನಿ ಸಾವು: ತನಿಖೆಗೆ ಸಿಪಿಐ(ಎಂ) ಆಗ್ರಹ

ಕುರುಗೋಡು: ಬಳ್ಳಾರಿ ತಾಲೂಕು ಕುರುಗೋಡು ಗ್ರಾಮದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿ ಓದುತ್ತಿದ್ದ "ಚಂದ್ರಕಲಾ" ಎಂಬ ವಿದ್ಯಾರ್ಥಿನಿಯು ಫೆಬ್ರವರಿ 15ರಂದು ಶಾಲೆಗೆ ಬಂದಾಗ ಶಾಲಾ ಶಿಕ್ಷಕರಾದ ಮಾರುತಿ ಎಂಬುವರು ಚಂದ್ರಕಲಾಳನ್ನು ಅವಾಚ್ಯ ಶಬ್ಧಗಳಿಂದ ಬೈದು ಅವಮಾನಪಡಿಸಿದ್ದಾರೆ. ಚಂದ್ರಕಲಾಳು ಅವಮಾನವನ್ನು ಸಹಿಸದೇ ತಮ್ಮ ಗ್ರಾಮವಾದ ಲಕ್ಷ್ಮೀಪುರ ಕ್ಯಾಂಪಿಗೆ ಹೋಗಿ ವಿಷ ಸೇವಿಸಿದ್ದಾಳೆ. ಸ್ಥಳೀಯ ವೈದ್ಯ ಹಾಗೂ ಪೋಲೀಸರ ನಿರ್ಲಕ್ಷ್ಯದಿಂದಾಗಿ ಸಾವನಪ್ಪಿದ್ದಾಳೆ. ಈ ಘಟನೆಯ ಬಗ್ಗೆ ಫೆಬ್ರವರಿ 16ರಂದು ಶಾಲಾ ಬಾಲಕಿಯರು ಪ್ರತಿಭಟನೆ ಮಾಡಿದಾಗ ಪೋಲೀಸರುಮಧ್ಯೆ ಪ್ರವೇಶ ಮಾಡಿ, ಪ್ರತಿಭಟನೆಯನ್ನು ತಡೆದು ಈ ಕೇಸು ಮುಚ್ಚಿ ಹಾಕುವ ಯತ್ನ ನಡೆದಿದೆ. ಮತ್ತು ಈ ಕೇಸಿಗೆ ಸಂಬಂಧಪಟ್ಟ ಕೆಲವು ಕಾಗದ ಪತ್ರಗಳು ಪೋಲೀಸ್ ಇಲಾಖೆಯಲ್ಲಿ ಇದ್ದು, ವಿಷಯವನ್ನು ಹೊರಗಡೆ ತಿಳಿಸಲು, ಪೋಲೀಸರು ನಿರಾಕರಿಸಿದ್ದಾರೆ. ಆದ್ದರಿಂದ ಘಟನೆಗೆ ಸಂಬಂಧಿಸಿದ ಶಿಕ್ಷಕರು, ವೈದ್ಯಾಧಿಕಾರಿಗಳೂ, ಮತ್ತು ಪೋಲೀಸರನ್ನು ಕೂಡಲೇ ಅಮಾನತ್ತುಗೊಳಿಸಿ ಸಿ.ಓ.ಡಿ. ತನಿಖೆ ನಡೆಸಬೇಕೆಂದು ಸಿಪಿಐ(ಎಂ)ನ ಬಳ್ಳಾರಿ ತಾಲೂಕು ಸಮಿತಿ ಸದಸ್ಯರಾದ ಕೊಗಾಧಿಲಿಂಗಪ್ಪ, ವಿ.ಎಸ್. ಶಿವಶಂಕರ, ಹಾಗೂ ಬಸವನಗೌಡ, ಇವರುಗಳು ಒತ್ತಾಯಿಸಿದ್ದಾರೆ. ಇದನ್ನು ನಿರ್ಲಕ್ಷಿಸಿದಲ್ಲಿ ಎಲ್ಲಾ ಸಾಮೂಹಿಕ ಸಂಘಟನೆಗಳು ಸೇರಿ ಕುರುಗೋಡನ್ನು ಬಂದು ಮಾಡಲಾಗುವುದೆಂದು ಎಚ್ಚರಿಸಿದ್ದಾರೆ.

"ಗ್ರಾಮ ಪಂಚಾಯತಿಗೆ ಮುತ್ತಿಗೆ"

ಕುಪ್ಪೆಪದವು: ಕುಪ್ಪೆಪದವು ಗ್ರಾಮ ಪಂಚಾಯತು ವತಿಯಿಂದ ಆಚಾರಿ ಜೋರ, ನೇಲ್ ಲಚ್ಚಿಲ್, ಹಳೇ ನೀರು, ಮುರ, ಕೆಂಪುಗುಡ್ಡೆ ಮತ್ತು ಕುಪ್ಪೆದವು ಪ್ರದೇಶಗಳಿಗೆ ನಳ್ಳಿ ನೀರು ಮುಖಾಂತರ ನೀರು ವಿತರಣೆಯಾಗುತ್ತಿದ್ದು ಏಳೆಂಟು ದಿನಗಳಿಂದ ಪಂಚಾಯತು ಆಡಳಿತದ ಬೇಜವಾಬ್ದಾರಿಯಿಂದ ಸಾರ್ವಜನಿಕರು ನೀರಿಗಾಗಿ ಬವಣೆ ಪಡುವಂತಾಯಿತು. ಇದನ್ನು ಕೂಡಲೇ ಸರಿಪಡಿಸಬೇಕೆಂದು ಒತ್ತಾಯಿಸಿ ಡಿ.ವೈ.ಎಫ್.ಐ. ಕುಪ್ಪೆಪದವು ಘಟಕದ ನೇತೃತ್ವದಲ್ಲಿ ಫೆಬ್ರವರಿ 8ರಂದು ಗ್ರಾಮ ಪಂಚಾಯತಿನ ತಿಂಗಳ ಸಭೆ ಸೇರುವಾಗ ಸಾರ್ವಜನಿಕರ ಮೆರವಣಿಗೆ ಮುಖಾಂತರ ಪಂಚಾಯತಿಗೆ ಮುತ್ತಿಗೆ ಹಾಕಲಾಯಿತು. ಕೂಡಲೇ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ ಸ್ಪಷ್ಟ ಲಿಖಿತ ಉತ್ತರ ಪಡೆದ ನಂತರ ಚಳುವಳಿಯನ್ನು ನಿಲ್ಲಿಸಲಾಯಿತು.

ಈ ಚಳುವಳಿಯ ನೇತೃತ್ವವನ್ನು ಡಿ.ವೈ.ಎಫ್.ಐ. ಕುಪ್ಪೆಪದವು ಘಟಕದ ಕಾರ್ಯದರ್ಶಿ ಎನ್.ಎ. ಹಸನಬ್ಬ ಸಹ ಕಾರ್ಯದರ್ಶಿ ಬಾಲಕೃಷ್ಣ, ಖಜಾಂಚಿ ಅಚ್ಯುತ್ತ ಆಚಾರಿ, ಕಾರ್ಮಿಕ ನಾಯಕರಾದ ವಾಸುದೇವ ಆಚಾರಿಯವರು ವಹಿಸಿದ್ದು ಪಂಚಾಯತು ಸದಸ್ಯೆ ಬೇಬಿ ನಾಯಕ್‌ರವರು ಮಾರ್ಗದರ್ಶನ ನೀಡಿದರು. ಡಿ.ವೈ.ಎಫ್.ಐ. ದ.ಕ. ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿಯವರು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು.

"ಬೀಡಿ ಕಾರ್ಮಿಕರ ಸಭೆ"

ಇರುವೈಲು: ಕುಪ್ಪೆ ಪದವು ಪ್ರದೇಶ ಬೀಡಿ ಸಂಘದ ವಾರ್ಷಿಕ ಮಹಾಸಭೆಯು ಪೂರ್ವಭಾವಿಯಾಗಿ ಇರುವೈಲು ಗ್ರಾಮದ ಬೀಡಿ ಕಾರ್ಮಿಕರ ಮಹಾಸಭೆಯು ಫೆಬ್ರವರಿ 12, 1995 ರಂದು ಬಿಯಾಂದ ಕೋಡಿ ಆಫೀಸು ವಠಾರದಲ್ಲಿ ಪದ್ಮನಾಭ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಚಟುವಟಿಕೆಗಳ ವರದಿಯನ್ನು ಕುಮಾರಿ ಗಿರಿಜರವರು ಮಂಡಿಸಿದರು. ಸಭೆಯನ್ನು ಉದ್ದೇಶಿಸಿ, ಸಂಘದ ಕಾರ್ಯದರ್ಶಿ ಕಾಂ. ಸದಾಶಿವ ದಾಸ್‌ರವರು ಮಾತನಾಡಿ, ಬೀಡಿ ಕಾರ್ಮಿಕರು ಹೋರಾಟದ ಮುಖಾಂತರ ಹಕ್ಕುಗಳನ್ನು ರಕ್ಷಿಸಲು ಸಂಘಟನೆ ಅಗತ್ಯವಿದೆ ಎಂದರು.

ಸಭೆಯ ಮುಂದಿನ ಸಾಲಿಗೆ ಪದ್ಮನಾಭ ಪೂಜಾರಿ, ಕುಮಾರಿ ಗಿರಿಜ, ಕುಮಾರಿ ವಸಂತಿ ಕಾರ್ಯದರ್ಶಿಗಳಾಗಿರುವ 16 ಮಂದಿಯ ಕಮಿಟಿಯನ್ನು ಆಯ್ಕೆ ಮಾಡಿತು. ಆರಂಭದಲ್ಲಿ ಲಿಂಗಪ್ಪ ಪೂಜಾರಿಯವರು ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು.

ಯುವತಿಗೆ ಕಿರುಕುಳ: ಕ್ರಮಕ್ಕೆ ಜೆ.ಎಂ.ಎಸ್. ಒತ್ತಾಯ

ಹಗರಿಬೊಮ್ಮನ ಹಳ್ಳಿ: ಹಗರಿ ಬೊಮ್ಮನ ಹಳ್ಳಿ ತಾಲೂಕಿನ ರಾಯರಾಳು ತಾಂಡದ ವಾಸಿಯಾದ ರುಕ್ಮಿಣಿ ತಂದೆ ಬಿ. ಸೋಮ್ಲಾನಾಯ್ಕ ಯುವತಿಯ ಹದಿಮೂರನೆ ವಯಸ್ಸಿನವಳಾಗಿದ್ದು ಅದೇ ಗ್ರಾಮದ ಸುಭಾಸನಾಯ್ಕ ಎಂಬ ವಿವಾಹಿತ ಹಾಗೂ ಮಕ್ಕಳು ಹೊಂದಿದವನು ಹುಡುಗಿ ಫೋಟವನ್ನು ಕದ್ದು ತನ್ನ ಭಾವಚಿತ್ರದೊಂದಿಗೆ ಅಂಟಿಸಿ ನಕಲಿ ಫೋಟೋ ಮಾಡಿಸಿ ಈ ಹುಡುಗಿ ಮತ್ತು ಮನೆಯವರಿಗೆ ಚಿತ್ರಹಿಂಸೆ ನೀಡುತ್ತಿದ್ದು ಹುಡುಗಿಯ ಮುಂದಿನ ಭವಿಷ್ಯಕ್ಕೆ ಧಕ್ಕೆಯನ್ನುಂಟು ಮಾಡುವ ಕೆಲಸದಲ್ಲಿ ತೊಡಗಿದ್ದಾನೆ. ಹಾಗೂ ಹುಡುಗಿ ಮುಗ್ಧಳಾಗಿದ್ದು ಅಪ್ರಾಪ್ತ ವಯಸ್ಸಿನವಳಾಗಿದ್ದು, ಇವಳನ್ನು ಮದುವೆಯಾಗುವ ವಿಚಾರ ಅವನ ತಲೆಯಲ್ಲಿ ಇದ್ದು ತನ್ನನ್ನು ಮದುವೆಯಾಗುವಂತೆ ಪರಿಸ್ಥಿತಿಯನ್ನುಂಟು ಮಾಡಲು ಈ ರೀತಿಯ ಪಿತೂರಿ ಕೆಲಸವನ್ನು ನಡೆಸಿದ್ದಾನೆ. ಅಬಲೆಯಾದ ಯುವತಿಗೆ ಮುಂದಿನ ಭವಿಷ್ಯತ್ತಿನ ದೃಷ್ಟಿಯನ್ನಿಟ್ಟುಕೊಂಡು ಸೂಕ್ತ ಕ್ರಮ ವಹಿಸಿ ಕಿರುಕುಳ ನೀಡುತ್ತಿರುವ ಸುಭಾಷನಾಯಕನ ತಂದೆ ರಾಂಡೋ ಯಮನನಾಯ್ಕನ ಮೇಲೆ ತೀವ್ರ ಕ್ರಮ ಜರುಗಿಸಿ ನ್ಯಾಯ ಒದಗಿಸಬೇಕೆಂದು ಹಗರಿಬೊಮ್ಮನ ಹಳ್ಳಿ ತಾಲೂಕಿನ ಜನವಾದಿ ಮಹಿಳಾ ಸಂಘಟನೆ ಒತ್ತಾಯಿಸಿದೆ.

KRNM/BGS-405 MAG (2) PRB DECR 319-78/79
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462
ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಆದಾಯವನ್ನು 'ಜಾಗತೀಕರಿಸದೆ' ಬೆಲೆಗಳನ್ನಷ್ಟೆ 'ಜಾಗತೀಕರಿಸುವ' ಆರ್ಥಿಕ ನೀತಿಗಳು ದೇಶಕ್ಕೆ ಮಾರಕ

ಹೊಸ ಆರ್ಥಿಕ ನೀತಿಗಳ ಬಗ್ಗೆ ಪುನರಾಲೋಚನೆ ಮಾಡಬೇಕಾದ ಪರಿಸ್ಥಿತಿ ಬರುತ್ತಿದೆ ಎಂದು ತಜ್ಞರ ಎಚ್ಚರಿಕೆ

ಬೆಳಗೆದ್ದು ದಿನಪತ್ರಿಕೆ ನೋಡಿದರೆ ಬರೀ ಹೊಸ ಆರ್ಥಿಕ ನೀತಿಯ ಸುದ್ದಿ. ಜೊತೆಗೆ ಬೆಲೆ ಏರಿಕೆ ಹೊಸ ಆರ್ಥಿಕ ನೀತಿಯ ಸಮರ್ಥನೆ ಘಟಾನುಘಟಿಗಳೂ ಹೊಸ ಆರ್ಥಿಕ ನೀತಿಯನ್ನು ಸಮರ್ಥಿಸುವವರೇ. ಆದರೆ ಒಂದು ವಿಷಯ ಇವರೆಲ್ಲ ಸರ್ಕಾರೀ ಅರ್ಥಶಾಸ್ತ್ರಜ್ಞರು. ದೇಶದ ಹಿತ ಬಯಸುವ ಜಗದ್ವಿಖ್ಯಾತ ಈ ಹೊಸ ಆರ್ಥಿಕ ನೀತಿಯ ಬಗ್ಗೆ ಏನು ಹೇಳುತ್ತಾರೆ? ಓದಿ ನೋಡಿ. ಇದು ದೇಶದ ೧೩ ಪ್ರಸಿದ್ಧ ತಜ್ಞರು ನೀಡಿದ ಜಂಟಿ ಹೇಳಿಕೆ.

ದೇಶ ರಾಜಕೀಯ ಅನಿಶ್ಚಿತತೆಯ ಅವಧಿಯತ್ತ ಸಾಗುತ್ತಿರುವ ಸೂಚನೆಗಳು ಬಹಳವಾಗಿವೆ. ಆರ್ಥಿಕ ನೀತಿಗಳೂ ಇದಕ್ಕೆ ಕಾರಣವಾಗಿವೆ. ದೇಶದ ದುರ್ಬಲ ಜನವಿಭಾಗಗಳು 1991ರಿಂದ ಅನುಸರಿಸಿಕೊಂಡು ಬಂದಿರುವ ಆರ್ಥಿಕ ನೀತಿಗಳ ಹೊಡೆತದ ನೋವುಂಡಿವೆ. ಅವರ ಭ್ರಮನಿರಸನ, ಆತಂಕ ಚುನಾವಣಾ ಫಲಿತಾಂಶಗಳಲ್ಲಿ ಅಭಿವ್ಯಕ್ತಿ ಪಡೆದಿವೆ. ಕೇಂದ್ರ ಸರ್ಕಾರವನ್ನೂ ತಟ್ಟುವ ರಾಜಕೀಯ ಬದಲಾವಣೆಗಳು ಸಂಭವಿಸುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ, ಈವರೆಗಿನ ಘಟನೆಗಳು ಅಧಿಕಾರಸ್ಥರು ಹೊಸ ಆರ್ಥಿಕ ನೀತಿಯ ಬಗ್ಗೆ ಪುನಃ ಚಿಂತಿಸುವಂತೆ ಮಾಡಿದರೂ ಆಶ್ಚರ್ಯವೇನಿಲ್ಲ.

ಬಡತನ ಹೆಚ್ಚುತ್ತಿದೆ

ದೇಶ ಆರು ಸತತ ವರ್ಷಗಳಲ್ಲಿ ಒಳ್ಳೆಯ ಮಳೆಯನ್ನು ಕಂಡಿದೆ. ಆದರೂ ಎರಡಂಕಿಯ ಹಣ ದುಬ್ಬರ(ಬೆಲೆಯೇರಿಕೆ)ದಿಂದ ದೇಶ ನರಳುತ್ತಿದೆ. ಆಹಾರ ಪದಾರ್ಥ ಮತ್ತು ಅವಶ್ಯಕ ಪದಾರ್ಥಗಳಲ್ಲೇ ಈ ಬೆಲೆಯೇರಿಕೆ ಹೆಚ್ಚು ಕೇಂದ್ರೀಕೃತವಾಗಿದೆ. ಸ್ಥಿರೀಕರಣ ಮತ್ತು ರಚನಾತ್ಮಕ ಹೊಂದಾಣಿಕೆಗಳೆಂಬ ಆರ್ಥಿಕ ನೀತಿಗಳು ಆರ್ಥಿಕ ಬೆಳವಣಿಗೆಯನ್ನು ಕುಂಠಿತಗೊಳಿಸಿವೆ. ನಿರುದ್ಯೋಗವನ್ನು ಹೆಚ್ಚಿಸಿವೆ ಇದು ಬಡತನವನ್ನು ಎಲ್ಲೆಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿಸಿದೆ.

ವಿದೇಶಿ ವ್ಯಾಪಾರ ಬಾಕಿ ಪರಿಸ್ಥಿತಿ ಉತ್ತಮಗೊಂಡಿದ್ದೇ ಆರ್ಥಿಕ ಸುಧಾರಣೆಗಳ ಯಶಸ್ಸಿನ ಸೂಚನೆ ಎನ್ನಲಾಗುತ್ತಿದೆ. ಇದು ಭ್ರಮೆ ಅಷ್ಟೆ. ವಿದೇಶೀ ವಿನಿಮಯ ಶಿಲ್ಕು ವಿದೇಶೀ ಸಾಲದಿಂದ ಉಂಟಾದದ್ದು 92 ಶತಕೋಟಿ ಡಾಲರುಗಳಿಗೂ ಹೆಚ್ಚು. ಇದಲ್ಲದೆ ವಿದೇಶೀ ಹಣಹೂಡಿಕೆ ಮತ್ತು ಅನಿವಾಸಿ ಭಾರತೀಯರ ಹೂಡಿಕೆಯೂ ಇದಕ್ಕೆ ಸೇರಿದೆ. ಇವೆರಡೂ ಯಾವಾಗೆಂದರೆ ಆಗ ಹೊರಹೋಗಬಹುದು.

ಮೆಕ್ಸಿಕೋದಲ್ಲಿ ಈಗಾಗಲೇ ಆಗಿರುವ ಅನಾಹುತ ಇಂತಹ ಆವಿಯಾಗಬಲ್ಲ ಮೂಲಗಳ ಮೇಲೆ ಅವಲಂಬಿಸಿದರೆ ಒದಗಬಹುದಾದ ಸ್ಥಿತಿಯೇನು ಎಂದು ತಿಳಿಸುತ್ತದೆ.

ಹಣಕಾಸು ವ್ಯವಸ್ಥೆಯ ಹೊಂದಾಣಿಕೆ ಸಾರ್ವಜನಿಕ ಖರ್ಚನ್ನು ಕಡಿಮೆ ಮಾಡುವುದರ ಮೇಲೆ ಒತ್ತು ನೀಡುತ್ತದೆ. ಅನಾವಶ್ಯಕ ಖರ್ಚುಗಳನ್ನು ತಡೆಯುವ ಬಗ್ಗೆ ಯಾರದೂ ತಕರಾರಿಲ್ಲ, ಅಂತಹ ವೆಚ್ಚಗಳನ್ನು ತಡೆಯಲೇಬೇಕು. ಆದರೆ ಸಾಮಾಜಿಕ ವಲಯಗಳ ಮೇಲಿನ ವೆಚ್ಚದ ಮೇಲೆ ಕೊಡಲಿಯೇಟು ಹಾಕಲಾಗುತ್ತಿದೆ. ಇದನ್ನೆಲ್ಲ ಮಾಡಿಯೂ ಕೇಂದ್ರ ಸರ್ಕಾರದ ಹಣಕಾಸು ಖೋತಾ ಹೆಚ್ಚಾಗುತ್ತಲೇ ನಡೆದಿದೆ.

ತೆರಿಗೆ ಪದ್ಧತಿ ಸುಧಾರಣೆಯ ಹೆಸರಿನಲ್ಲಿ ತೆರಿಗೆಗಳನ್ನು ಕಡಿಮೆ ಮಾಡಲಾಗುತ್ತಿದೆ. ತೆರಿಗೆ ತೆರುವವರ ಸಂಖ್ಯೆಯನ್ನು ಕಡಿಮೆಮಾಡಲಾಗುತ್ತಿದೆ. ಇಂತಹ ಕ್ರಮಗಳಿಂದ ದೇಶದ ಹಣಕಾಸು ಬಿಕ್ಕಟನ್ನು ಪರಿಹರಿಸಲಾಗದು. ಇಂತಹ ಕ್ರಮಗಳಿಂದ ಹೆಚ್ಚುವ ಹೊರೆಯನ್ನು ರಾಜ್ಯ ಸರ್ಕಾರಗಳ ಹೆಗಲಿಗೆ ಹಾಕಲಾಗುತ್ತಿದೆ. ಬುಡಮಟ್ಟದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ರಾಜ್ಯ ಸರ್ಕಾರಗಳು ಕೈಗೆತ್ತಿಕೊಳ್ಳಲು ಅಸಮರ್ಥವಾಗುತ್ತಿವೆ. ಕೇಂದ್ರ ಸರ್ಕಾರದ ಹಣಕಾಸು ಹೊರೆಯನ್ನು ಹೊರಬೇಕಾದ ಪರಿಸ್ಥಿತಿಯನ್ನು ಪ್ರತಿರೋಧಿಸಲೇಬೇಕು.

ಮಾರುಕಟ್ಟೆ-ಸ್ಪರ್ಧಾತ್ಮಕತೆ ಎಲ್ಲಿ ಹೋಯಿತು?

ಇದಲ್ಲದೇ ಇತರ ಕೆಲವು ಬೆಳವಣಿಗೆಗಳಿಂದಾಗಿ ನಾವು ಚಿಂತಿತರಾಗಿದ್ದೇವೆ. ಖಾಸಗೀಕರಣದ ಹೆಸರಲ್ಲಿ ಸಾರ್ವಜನಿಕ ಉದ್ದಿಮೆಗಳ ಮಾರಾಟ-ಈ ಉದ್ದಿಮೆಗಳನ್ನು ಗುಟ್ಟಿನಲ್ಲಿ ಮೂರು ಕಾಸಿಗೆ ಮಾರಲಾಗುತ್ತಿರುವುದು ಒಂದು ಉದಾಹರಣೆ. ವಿದ್ಯುತ್ ಪೆಟ್ರೋಲಿಯಂ ಮತ್ತು ದೂರಸಂಪರ್ಕ ವಲಯಗಳಲ್ಲಿ ಹಲವು ಅಂತರ್‌ರಾಷ್ಟ್ರೀಯ ಒಪ್ಪಂದಗಳನ್ನು ಮಾಡಿಕೊಳ್ಳಲಾಗುತ್ತಿದೆ. ಇಲ್ಲೆಲ್ಲ ಮಾರುಕಟ್ಟೆ ನಿಯಮಗಳಿಲ್ಲ, ಸ್ಪರ್ಧಾತ್ಮಕತೆ ಇಲ್ಲ, ದೇಶದ ಹಿತಾಸಕ್ತಿಗಳನ್ನು ನಿರ್ದಯವಾಗಿ ಬಲಿಕೊಡಲಾಗುತ್ತಿದೆ. ಭಾರತದಂತಹ ದೇಶದಲ್ಲಿ ಸರಿಯಾದ ಆಡಳಿತದ ಬಿಗಿ ಇಲ್ಲದೆ ಉದಾರೀಕರಣ ಮಾಡಿದರೆ ಅದು ಕ್ಷೋಭೆಗೆ ಕಾರಣವಾಗುತ್ತದೆ.

> ಈ ಹೇಳಿಕೆ ನೀಡಿದವರು ದೇಶದ ಜಗದ್ವಿಖ್ಯಾತ ಅರ್ಥಶಾಸ್ತ್ರಜ್ಞರಾದ
>
> 1. ಎನ್.ಕೆ. ಚಂದ್ರ
> 2. ಅರುಣ ಘೋಷ್
> 3. ಐ.ಎಸ್. ದುಲಾರಿ
> 4. ಪಿ.ಸಿ. ಜೋಷಿ
> 5. ಕೃಷ್ಣ ರಾಜ್
> 6. ಎನ್. ಕೃಷ್ಣಾಜಿ
> 7. ಕೆ.ಎಸ್. ಕೃಷ್ಣಸ್ವಾಮಿ
> 8. ಸಿ.ಟಿ. ಕುರಿಯನ್
> 9. ಅಶೋಕ್ ಮಿತ್ರ
> 10. ದೀಪಕ್ ನಯ್ಯಾರ್
> 11. ಪ್ರಭಾತ್ ಪಟ್ನಾಯಕ್
> 12. ಕೆ.ಎನ್. ರಾಜ್
> 13. ಎಸ್.ಪಿ. ಶುಕ್ಲಾ

ಸರಕಾರ ಈಚಿನ ದಿನಗಳಲ್ಲಿ ಅಂತರ್‌ರಾಷ್ಟ್ರೀಯ ಮತ್ತು ದ್ವಿಪಕ್ಷೀಯ ಚರ್ಚೆ ಚೌಕಾಸಿಯಲ್ಲಿ ಕೈಲಾಗದವರಂತೆ ಆಡುತ್ತಿರುವುದೂ ನಮ್ಮ ಚಿಂತೆಗೆ ಕಾರಣ. ಈ ಮೂಲಕವೂ ದೇಶದ ಹಿತಾಸಕ್ತಿಗಳನ್ನು ಬಲಿಕೊಡಲಾಗುತ್ತಿದೆ. ಪೇಟೆಂಟ್ ಕಾಯಿದೆಯನ್ನು ಸುಗ್ರೀವಾಜ್ಞೆಯ ಮೂಲಕ ತಿದ್ದುಪಡಿ ಮಾಡಿರುವುದು ಒಂದು ಉದಾಹರಣೆ. ಆಗ ಸಂಸತ್ತಿನಲ್ಲಿ ಚರ್ಚೆ ಮಾಡುವುದಕ್ಕೂ ಅವಕಾಶ ಸಿಗದಂತೆ ನೋಡಿಕೊಳ್ಳಲಾಯಿತು.

ಆರ್ಥಿಕ ನೀತಿ ಹೇಗಿರಬೇಕು?

ಆರ್ಥಿಕ ನೀತಿಗಳತ್ತ ಬರುವುದಾದರೆ ಜನರ ಆದಾಯ ಮತ್ತು ಉದ್ಯೋಗ ಹೆಚ್ಚಿಸುವತ್ತ ಹೆಚ್ಚು ಗಮನ ಆರ್ಥಿಕ ನೀತಿಯ ಪ್ರಧಾನ ಅಂಶವಾಗಿರಬೇಕು. ಆಂತರಿಕ ಬಂಡವಾಳ ಕ್ರೋಢೀಕರಣ ಹೆಚ್ಚಿಸಬೇಕು. ಸಾರ್ವಜನಿಕ ಹಣ ಹೂಡಿಕೆಯೂ ಇದಕ್ಕೆ ಮುಖ್ಯ. ಇದರಿಂದ ಬೆಳವಣಿಗೆಯ ಗತಿ ಹೆಚ್ಚುತ್ತದೆ. ಆಂತರಿಕ ಉಳಿತಾಯ ಹೆಚ್ಚುವುದರಿಂದ ಇದಕ್ಕೆ ಹಣಕಾಸು ದೊರೆಯಬೇಕು. ವಿದೇಶೀ ಬಂಡವಾಳ ಹೂಡಿಕೆ ಒಟ್ಟು ಆಂತರಿಕ ಉತ್ಪಾದನೆಯ ಶೇ. 1ರ ನಾಲ್ಕನೇ ಒಂದಂಶಕ್ಕೂ ಕಡಿಮೆ. ಆದ್ದರಿಂದ ಉಳಿತಾಯದ ಪ್ರಮಾಣದ ಮತ್ತು ಒಟ್ಟು ಉತ್ಪಾದನೆಗಳ ಅನುಪಾತ ನೋಡಿದರೆ ಉಳಿತಾಯ ತೀವ್ರ ಕಡಿಮೆ ಆಗಿರುವುದು ಕಂಡು ಬರುತ್ತದೆ.

ಸಾರ್ವಜನಿಕ ಹಣಹೂಡಿಕೆಯಲ್ಲಿ ಮುಖ್ಯವಾಗಿ ಮೂಲಭೂತ ಸೌಕರ್ಯಗಳು, ಗ್ರಾಮೀಣ ಅಭಿವೃದ್ಧಿ, ಆರೋಗ್ಯ, ಸಾಕ್ಷರತೆ, ಶಿಕ್ಷಣ ಇತ್ಯಾದಿಗಳಲ್ಲಿ ಹೆಚ್ಚಿಸಬೇಕು. ಬಹುರಾಷ್ಟ್ರೀಯ ಕಂಪೆನಿಗಳನ್ನು ಖುಶಿಗೊಳಿಸುವ ತವಕ ಬಿಡಬೇಕು. ಏಕೆಂದರೆ ಇದರಿಂದ ನೇರ ವಿದೇಶೀ ಹಣಹೂಡಿಕೆಯೇನೂ ಬರುವುದಿಲ್ಲ, ಆದರೆ ಅದಿಲ್ಲದೆಯೇ ನಮ್ಮ ಆರ್ಥಿಕದಲ್ಲಿ ಅವರಿಗೆ ಪ್ರಾಬಲ್ಯ ತೋರಿಸಲು ಅವಕಾಶವಾಗುತ್ತದೆ.

ಸರಕಾರ ತನ್ನ ಅನಗತ್ಯ ಖರ್ಚುಗಳನ್ನು ಇಳಿಸಬೇಕು. ಸರ್ಕಾರದ ನೀತಿಗಳಿಂದಾಗಿ ರಾಷ್ಟ್ರೀಯ ಆದಾಯದಲ್ಲಿ ತೆರಿಗೆ ಆದಾಯದ ಪಾಲು ಕಮ್ಮಿಯಾಗುತ್ತಿದೆ. ಅದನ್ನು ಗಮನಾರ್ಹವಾಗಿ ಹೆಚ್ಚಿಸಬೇಕು.

ಕೃಷಿ ವಲಯದಲ್ಲಿ ಹೂಡಿಕೆಯನ್ನು ಹೆಚ್ಚಿಸಬೇಕು.

ಅಪಾಯಕಾರೀ ಸ್ಥಿತಿ

ದೇಶವನ್ನು ಅಂತರರಾಷ್ಟ್ರೀಯ ವ್ಯವಸ್ಥೆಯೊಳಗೆ ನೂಕಲಾಗುತ್ತಿದೆ. ಆದರೆ ವಾಸ್ತವ ಪರಿಸ್ಥಿತಿ ನಾವು ಎಚ್ಚರಿಕೆಯಿಂದರಬೇಕೆನ್ನುತ್ತದೆ. ದೇಶದ ಆರ್ಥಿಕ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇಲ್ಲದಿದ್ದಲ್ಲಿ ಆದಾಯವನ್ನು ಜಾಗತೀಕರಿಸದೆ ಕೇವಲ ಬೆಲೆಯನ್ನು ಜಾಗತೀಕರಿಸಿ ಬಿಡುವ ಸ್ಥಿತಿ ತಲುಪುತ್ತೇವೆ. ಈಗಿರುವ ಜಾಗತಿಕ ವ್ಯವಸ್ಥೆಯಲ್ಲಿ ಒಂದು ಗಮನಾರ್ಹ ಪಾತ್ರವನ್ನು ವಹಿಸುವ ಸಾಮರ್ಥ್ಯವನ್ನು ಪಡೆಯದೆ ನಮ್ಮ ದೇಶದ ಬಗ್ಗೆ ನಿರ್ಣಯ ಕೈಗೊಳ್ಳುವ ಹಕ್ಕನ್ನು ಬಿಟ್ಟು ಬಿಡಬೇಕಾದ ಸ್ಥಿತಿ ಬರುತ್ತದೆ.

ನಾವು ಉತ್ಪಾದಿತ ಸರಕುಗಳ ರಫ್ತನ್ನು ಹೆಚ್ಚಿಸಬೇಕೇ ಹೊರತು ಕೃಷಿ ಉತ್ಪನ್ನಗಳ ರಫ್ತನ್ನಲ್ಲ, ಇದರಿಂದ ದೇಶದೊಳಗೆ ಕೃಷಿ ಉತ್ಪನ್ನಗಳ ಅಭಾವ ಮತ್ತು ಹಣದುಬ್ಬರ ಉಂಟಾಗಬಹುದು.

ಹಿಂದಿನ ಅಧಿಕಾರಶಾಹಿಗಳ ಅನಾವಶ್ಯಕ ನಿರ್ಬಂಧನೆಗಳ ಕಾಲ ಪುನಃ ಬರಬೇಕೆಂದು ನಾವು ಹೇಳುವುದಿಲ್ಲ, ಆದರೆ ಕೆಲವು ವಸ್ತುಗಳ ಮೇಲೆ ಆಮದು ತಡೆ ಇರಬೇಕು. ಉದಾಹರಣೆಗೆ ಶ್ರೀಮಂತರ ಭೋಗ ವಸ್ತುಗಳ ಮೇಲೆ ಹತೋಟಿ ಇರಲೇಬೇಕಾಗುತ್ತದೆ.

ಪಡಿತರ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗಲೇಬೇಕು ಅಲ್ಲದೆ ಇದನ್ನು ಬಡ ಮತ್ತು ಮಧ್ಯಮ ವರ್ಗದವರಿಗೇ ವಿಸ್ತರಿಸಬೇಕು.

ಒಂದು ಕಡೆಗೆ ಜನ ಉಪವಾಸ ಸಾಯುತ್ತಿರಬೇಕಾದರೆ ಉಗ್ರಾಣಗಳಲ್ಲಿ 30 ದಶಲಕ್ಷ ಟನ್ನುಗಳಿಗೂ ಹೆಚ್ಚು ಆಹಾರ ಧಾನ್ಯಗಳನ್ನಿಟ್ಟುಕೊಳ್ಳಲು ಹಣ ಖರ್ಚು ಮಾಡುವುದರಲ್ಲಿ ಏನೂ ಅರ್ಥವಿಲ್ಲ.

ಎಲ್ಲಕ್ಕೂ ಮಿಗಿಲಾಗಿ ಅಭಿವೃದ್ಧಿ ಕಾರ್ಯಗಳು ಜನತೆಯ ಹತ್ತಿರ ಬರಬೇಕು. ಇದಕ್ಕಾಗಿ ಪರಿಣಾಮಕಾರೀ ವಿಕೇಂದ್ರೀಕರಣ-ಕೇಂದ್ರದಿಂದ ರಾಜ್ಯಕ್ಕೆ, ರಾಜ್ಯದಿಂದ ಸ್ಥಳೀಯ ಸಂಸ್ಥೆಗಳಿಗೆ ಆಗಬೇಕು.

ಆರ್.ಎಸ್.ಎಸ್.-ವಿ.ಹೆಚ್.ಪಿ. ತಂತ್ರಗಳನ್ನು ವಿಫಲಗೊಳಿಸಿ

ಸಿಪಿಐ(ಎಂ) ಪೊಲಿಟ್ ಬ್ಯೂರೋ ಕರೆ

ಮಹಾಶಿವರಾತ್ರಿಯ ಸಂದರ್ಭವನ್ನು ಬಳಸಿ ವಾರಣಾಸಿಯಲ್ಲಿ ಆರ್.ಎಸ್.ಎಸ್.- ವಿ.ಹೆಚ್.ಪಿ.-ಬಿಜೆಪಿ ಕೂಟ ಗಂಭೀರ ಪರಿಸ್ಥಿತಿ ನಿರ್ಮಿಸಲು ಉದ್ದೇಶಪೂರ್ವಕವಾಗಿ ಪ್ರಯತ್ನಿಸಿದುದರ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಫೆಬ್ರವರಿ 27ರಂದು ಒಂದು ಹೇಳಿಕೆ ನೀಡಿ ತನ್ನ ತೀವ್ರ ಆತಂಕವನ್ನ ವ್ಯಕ್ತಪಡಿಸಿದೆ.

ವಿ.ಹೆಚ್.ಪಿ. ತನ್ನ ವಿವಿಧ ಸಂಘಟನೆಗಳ ಮೂಲಕ "ಜಲಾಭಿಷೇಕ" ಕಾರ್ಯಕ್ರಮ ಸಂಘಟಿಸಿ ವಿಶ್ವನಾಥ ದೇವಾಲಯದ ಪಕ್ಕದಲ್ಲಿರುವ ಜ್ಞಾನವಾಪಿ ಮಸೀದಿಯನ್ನು ಧ್ವಂಸ ಮಾಡುವ ತನ್ನ ಗುರಿಯನ್ನು ಸಾರಿದೆ. ಎಲ್ಲಾ ಧಾರ್ಮಿಕ ಸ್ಥಾನಗಳಲ್ಲಿ ಆಗಸ್ಟ್ 15, 1947 ರಂದು ಇದ್ದಂತಹ ಸ್ಥಿತಿಯನ್ನು ಕಾಯ್ದುಗೊಳ್ಳಬೇಕು ಎಂಬ ದೇಶದ ಕಾನೂನನ್ನು ಬಹಿರಂಗವಾಗಿ ತಿರಸ್ಕರಿಸಿ ಈ ಧಾರ್ಮಿಕ ಮುಖಂಡರೆಂದು ಹೇಳಿಕೊಳ್ಳುವ ಮಂದಿ ಕೋಮು ಉನ್ಮಾದವನ್ನು ಎಬ್ಬಿಸುತ್ತಿದ್ದಾರೆ.

ಕಾಶೀ, ಮಥುರಾ ತನ್ನ ಅಜೆಂಡಾದಲ್ಲಿ ಇಲ್ಲ ಎಂದು ಬಿಜೆಪಿ ಹೇಳಿಕೊಂಡರೂ ಆರ್‌ಎಸ್‌ಎಸ್ ಮುಖ್ಯಸ್ಥರು ಮಸೀದಿ ಧ್ವಂಸದಲ್ಲಿ ತಮ್ಮ ಮುಂದಿನ ಧಾಳಿ ಕಾಶಿ, ಮಥುರಾಗಳಲ್ಲಿ ಎಂಬ ಬಗ್ಗೆ ಯಾವ ಸಂಶಯವನ್ನು ಉಳಿಸಿಲ್ಲವೆಂದು ಪೊಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ.

ವಾರಣಾಸಿಯಲ್ಲಿ ಸಂಘರ್ಷದ ಪರಿಸ್ಥಿತಿಯನ್ನು ಸೃಷ್ಟಿಸುವ ಪ್ರಯತ್ನ ನಡೆಯುತ್ತಿರುವಂತೆ ಬಿಜೆಪಿ ಸಂಸತ್ ಸದಸ್ಯರು ಕೋಮು ಉನ್ಮಾದವನ್ನು ಬಡಿದೆಬ್ಬಿಸುವ ಪ್ರಯತ್ನಗಳಲ್ಲಿ ಪಾಲುಗೊಳ್ಳುತ್ತಿದ್ದಾರೆ. ಈ ಮೂಲಕ ಈ ಹಿಂದೆ ದೇಶಕ್ಕೆ ತಾವಿತ್ತ ವಚನವನ್ನು ತಾವೇ ಅಪಹಾಸ್ಯ ಮಾಡುತ್ತಿದ್ದಾರೆ. ಸಂವಿಧಾನದ ಬಗ್ಗೆ, ಅದರ ಜಾತ್ಯಾತೀತ ಆಧಾರದ ಬಗ್ಗೆ ಅವರಿಗಿರುವ ಸಂಪೂರ್ಣ ತಿರಸ್ಕಾರ ಇದರಿಂದ ಬಯಲಿಗೆ ಬಂದಿವೆ. 1996 ಸಾರ್ವತ್ರಿಕ ಚುನಾವಣೆಗಳ ಮೇಲೆ ಕಣ್ಣಿಟ್ಟು ಬಿಜೆಪಿ ಮತ್ತೊಮ್ಮೆ ತನ್ನ ಆಟ ಆರಂಭಿಸುವತ್ತ ಸಾಗಿದೆ. ಇದು ದೇಶವನ್ನು ಸಂಘರ್ಷ, ಕೊಲೆ-ಸುಲಿಗೆಗಳ ಭೀಕರ ಪರಿಸ್ಥಿತಿಯತ್ತ ಮತ್ತೊಮ್ಮೆ ತಳ್ಳಲಿದೆ ಎಂದು ಪೊಲಿಟ್ ಬ್ಯೂರೋ ಆತಂಕ ವ್ಯಕ್ತಪಡಿಸಿದೆ.

ದೇಶವನ್ನು ಸ್ಫೋಟಕ ಕೋಮು ಜ್ವಾಲೆಗಳಿಗೆ ಗುರಿಯಾಗಿಸಲು ಜನ ಬಿಡುವುದಿಲ್ಲ ಎಂದು ಈ ಶಕ್ತಿಗಳಿಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಎಚ್ಚರಿಕೆ ನೀಡುತ್ತಾ ಕಾವಿಪಡೆಗಳ ಈ ದುಷ್ಟ ಆಟವನ್ನು ಸೋಲಿಸಬೇಕು ಎಂದು ಎಲ್ಲಾ ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳಿಗೆ ಕರೆ ನೀಡಿದೆ.

ಮಹಾಶಿವರಾತ್ರಿಯಂದು ವಿ.ಹೆಚ್.ಪಿ. ಹಾಗೂ ಭಜರಂಗದಳದ ಉದ್ರೇಕಕಾರಿ ಚಟುವಟಿಕೆಗಳನ್ನು ತಡೆಯುವುದು, ಅದರ ಮೇಲೆ ಹತೋಟಿ ಹಾಕುವುದು ಸಾಧ್ಯವಾಗಿದೆ ಎಂಬ ಬಗ್ಗೆ ತೃಪ್ತಿ ವ್ಯಕ್ತಪಡಿಸಿರುವ ಪೊಲಿಟ್ ಬ್ಯೂರೋ ಉತ್ತರ ಪ್ರದೇಶ ಸರಕಾರ ಮತ್ತು ಕೇಂದ್ರ ಸರಕಾರ ಜಾಗರೂಕತೆಯಿಂದಿದ್ದು ಕೋಮುವಾದಿಗಳ ಶಕ್ತಿಗಳ ಯಾವುದೇ ಉದ್ರೇಕಕಾರಿ ಕ್ರಮವನ್ನು ವಿಫಲಗೊಳಿಸಬೇಕು ಹಾಗೂ ಅಲ್ಪಸಂಖ್ಯಾತರಿಗೆ ಭದ್ರತೆ ದೊರೆಯುವಂತೆ ಮಾಡಬೇಕೆಂದು ಹೇಳಿದೆ.

ಹೊಸ ಆರ್ಥಿಕ ನೀತಿಯ ಈ ಪರಿಣಾಮದ ಬಗ್ಗೆ ನಿಮಗೆ ಗೊತ್ತೆ?

ಬಡವರು ತಿನ್ನುವುದು ಮತ್ತಷ್ಟು ಕಮ್ಮಿಯಾಗಿದೆ!
ಸರಕಾರ ಆಹಾರ ದಾಸ್ತಾನಿಗೆ ಮಾಡುವ ಖರ್ಚು ಹೆಚ್ಚಾಗಿದೆ!

'ಉದಾರೀಕರಣ' ಆರಂಭವಾದ ಹಿಂದಿನ ಮೂರು ವರ್ಷಗಳ ಈ ಕೆಲವು ಅಂಕೆ ಸಂಖ್ಯೆಗಳನ್ನು ಗಮನಿಸಿ:

- ಆಹಾರ ಧಾನ್ಯಗಳ ತಲಾ ಬಳಕೆ 1991ರಲ್ಲಿ 510 ಗ್ರಾಂ ಇತ್ತು. 1993ರಲ್ಲಿ ಅದು 465 ಗ್ರಾಂಗಿಳಿದಿದೆ.
- ಇದೇ ಅವಧಿಯಲ್ಲಿ ಸರಕಾರದ ಬಳಿಯಿರುವ ಆಹಾರ ಧಾನ್ಯಗಳ ದಾಸ್ತಾನು 2.08 ಕೋಟಿ ಟನ್ ಗಳಿಂದ 2.635 ಟನ್‌ಗಳಿಗೇರಿದೆ. ಸರ್ಕಾರದ ಬಳಿ ಧಾನ್ಯಗಳನ್ನಿಡಲು ಸ್ಥಳದ ಸಮಸ್ಯೆಯಾಗಿದೆ. ಇದಕ್ಕಾಗಿ ಸರ್ಕಾರ ವರ್ಷಕ್ಕೆ 5500 ಕೋಟಿ ರೂ. ಖರ್ಚು ಮಾಡುತ್ತಿದೆ!
- ಡಿಸೆಂಬರ್ 1991ರಿಂದ ಫೆಬ್ರವರಿ 1994ರ ನಡುವೆ 26 ತಿಂಗಳಲ್ಲಿ ರೇಷನ್ ಅಂಗಡಿಗಳಲ್ಲಿರುವ ಅತಿ ಅಗ್ಗದ ಧಾನ್ಯಗಳ ಬೆಲೆಗಳು ಇತರ ಧಾನ್ಯಗಳಿಗಿಂತ ಹೆಚ್ಚು ವೇಗವಾಗಿ ಏರಿವೆ.
- ರೇಷನ್ ಅಂಗಡಿಗಳಲ್ಲಿ ಮಾರುವ ಗೋಧಿಯ ಬೆಲೆಯನ್ನು ಈ ಅವಧಿಯಲ್ಲಿ ಶೇ.72ರಷ್ಟು ಹೆಚ್ಚಿಸಲಾಯಿತು. -ಕ್ವಿಂಟಾಲಿಗೆ 234 ರೂ. ಯಿಂದ 402 ರೂ.ವರೆಗೆ. ಸಾಮಾನ್ಯ ಅಕ್ಕಿಯ ಬೆಲೆ ಶೇ. 86 ಹೆಚ್ಚಿಸಲಾಯಿತು. ಒಳ್ಳೆ ಅಕ್ಕಿಯ ಬೆಲೆ ಶೇ. 77 ಹೆಚ್ಚಿಸಲಾಯಿತು. ಅತ್ಯುತ್ತಮ ಅಕ್ಕಿಯ ಬೆಲೆಶೇ.75ಹೆಚ್ಚಿಸಲಾಯಿತು.
- ಬಡಜನರ ಪ್ರೋಟೀನ್‌ನ ಮೂಲಾಧಾರ ದ್ವಿದಳ ಧಾನ್ಯಗಳ ಬೆಲೆ ಅವರ ಕೈಗೆಟುಕದಾಗಿದೆ-ಈಗ ಕೆ.ಜಿ.ಗೆ 18 ರೂ.ಗಿಂತಲೂ ಹೆಚ್ಚು.
- ರೇಷನ್ ಅಂಗಡಿಗಳಿಂದ 1991-92ರಲ್ಲಿ ಶೇ. 87.8 ಲಕ್ಷ ಟನ್ ಗೋಧಿಯನ್ನು ಜನ ಖರೀದಿಸಿದರೆ, 1993-94ರಲ್ಲಿ ಇದು 44 ಲಕ್ಷ ಟನ್‌ಗಿಳಿಯಿತು. ಅಂದರೆ ಅರ್ಧದಷ್ಟು. ಇದೇ ಅವಧಿಯೂ ಜನಗಳ ಖರೀದಿಸಿದ ಅಕ್ಕಿಯ ಪ್ರಮಾಣ 99.4 ಲಕ್ಷ ಟನ್‌ಗಳಿಂದ 67.6 ಲಕ್ಷ ಟನ್‌ಗಳಿಗಿಳಿಯಿತು. ಅಂದರೆ ಶೇ.33 ರಷ್ಟು ಇಳಿತ.
- ಆಹಾರ ಧಾನ್ಯಗಳು ಮೊದಲಿಗಿಂತ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತಿರುವುದೇ ಈ ಇಳಿತಕ್ಕೆ ಕಾರಣ ಎಂದು ಸಂಸತ್ತಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಆಗಿನ ಆಹಾರ ಮಂತ್ರಿ ಹೇಳಿದರಂತೆ. ಹಾಗಿದ್ದರೆ ತಲಾ ಬಳಕೆ ಏಕೆ ಕಡಿಮೆಯಾಗಿದೆ ಎಂಬುದಕ್ಕೆ ಮಾತ್ರ ಅವರ ಬಳಿ ಉತ್ತರವಿಲ್ಲ.
- ಒಬ್ಬ ತಜ್ಞರು ಉತ್ತರ ಪ್ರದೇಶದಲ್ಲಿ ಮಾಡಿದ ಅಧ್ಯಯನದ ಪ್ರಕಾರ ಕೃಷಿ ಕೂಲಿಕಾರರು ಹಾಗೂ ಸಣ್ಣ ರೈತರು ರೇಷನ್ ಅಂಗಡಿಗಳಿಗಿಂತ ಖರೀದಿಸುವ ಧಾನ್ಯಗಳ ಪ್ರಮಾಣ ಅರ್ಧಕ್ಕಿಳಿದಿದೆ. ದೊಡ್ಡ ರೈತರು ಮಾತ್ರವೇ ರೇಷನ್ ಅಂಗಡಿಗಳಿಂದಲೂ, ಮುಕ್ತ ಮಾರುಕಟ್ಟೆಯಿಂದಲೂ ಮೊದಲಿನಷ್ಟೇ ಆಹಾರ ಧಾನ್ಯಗಳನ್ನು ಖರೀದಿಸುತ್ತಿದ್ದಾರೆ.
- 1993ರಲ್ಲಿ ಜನಗಳ ಆಹಾರಧಾನ್ಯ ಬಳಕೆಯ ಮಟ್ಟವನ್ನು 1991ರ ಮಟ್ಟಕ್ಕಾದರೂ ತಂದಿದ್ದರೆ ಸರಕಾರ ಬಳಿಯಿರುವ ದಾಸ್ತಾನು 1.5 ಕೋಟಿ ಟನ್‌ಗಳಷ್ಟು ಕಮ್ಮಿಯಾಗುತ್ತಿತ್ತು, ಅಷ್ಟರ ಮಟ್ಟಿಗೆ ದಾಸ್ತಾನು ನೋಡಿಕೊಳ್ಳಲು ಖರ್ಚಾಗುತ್ತಿದ್ದ ಹಣ ಉಳಿದು ಆಹಾರ ಸಬ್ಸಿಡಿಯ ಹೊರೆ ಕಡಿಮೆಯಾಗುತ್ತಿತ್ತು!